ವಿಷಯಾನುಕ್ರಮಣಿಕೆ

ಅಧ್ಯಾತ್ಮಗ್ರಂಥಾವಳಿ

# ಶ್ರೀಮದ್ಭಗವದ್ಗೀತೆಯ ಸಾರ

(ಶಾಂಕರಭಾಷ್ಯಾನುಸಾರ)

ಮತ್ತು

# ಭಗವದ್ಗೀತೆಯ ಪ್ರಧಾನೋಪದೇಶಗಳು

ಬರೆದವರು :

ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು

ಕ್ರಮಾಂಕ ೧೦೩

ಅಧ್ಯಾತ್ಮಪ್ರಕಾಶಕಾರ್ಯಾಲಯ

ಹೊಳೆನರಸೀಪುರ

೨೦೦೨

# ಮುನ್ನುಡಿ

ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು ಬರೆದು ಅನುಗ್ರಹಿಸಿರುವ **ಶ್ರೀಮದ್ಭಗವದ್ಗೀತಾಭಾಷ್ಯ** (ಕನ್ನಡ ಅನುವಾದ, ಟಿಪ್ಪಣಿ – ಮುಂತಾದವುಗಳೊಡನೆ) ಎಂಬ ಗ್ರಂಥದಲ್ಲಿ ಪ್ರತಿ ಅಧ್ಯಾಯದ ಕೊನೆಯಲ್ಲಿಯೂ ಸಂಗ್ರಹಿಸಿ ಕೊಟ್ಟಿರುವ ಸಾರವನ್ನು ಒಂದು ಗ್ರಂಥರೂಪವಾಗಿ ಮೊದಲನೆಯ ಬಾರಿಗೆ ೧೯೬೦ರಲ್ಲಿ ಪ್ರಕಟಿಸಲಾಯಿತು. ಜನಪ್ರಿಯವಾದ ಆ ಗ್ರಂಥವು ಪುನಃ ೧೯೭೩ರಲ್ಲಿ ಎರಡನೆಯ ಬಾರಿಗೆ ಮುದ್ರಣವಾಗಿತ್ತು. ಪ್ರತಿಗಳೆಲ್ಲವೂ ಮುಗಿದುಹೋದದ್ದರಿಂದ ಈಗ ಪುನಃ ತಿದ್ದಿ ಮೂರನೆಯ ಬಾರಿಗೆ ಪ್ರಕಟಿಸಲಾಗಿದೆ.

ಶ್ರೀಶ್ರೀಗಳವರೇ ೧೯೬೭ನೇ ವರ್ಷದ ಗೀತಾಜಯಂತಿಯ ಸಂದರ್ಭದಲ್ಲಿ ಅನುಗ್ರಹಿಸಿದ್ದ **ಶ್ರೀಮದ್ಭಗವದ್ಗೀತೆಯ ಪ್ರಧಾನೋಪದೇಶಗಳು** ಎಂಬ ಉಪನ್ಯಾಸವೂ ಸಹ ಚಿಕ್ಕ ಪುಸ್ತಿಕೆಯಾಗಿ ಪ್ರಕಟವಾಗಿದ್ದು ಪ್ರತಿಗಳು ಎಲ್ಲವೂ ಮುಗಿದುಹೋಗಿದ್ದುದರಿಂದ ಅದನ್ನೂ ಈ ಪುಸ್ತಕದ ಕೊನೆಯಲ್ಲಿ ಸೇರಿಸಿ ಪ್ರಕಟಿಸಲಾಗಿದೆ. ಇದು ಗೀತಾಪ್ರಿಯರಾದ ವಾಚಕರೆಲ್ಲರಿಗೂ ಮೆಚ್ಚುಗೆಯಾದೀತೆಂದು ನಂಬಲಾಗಿದೆ.

ಇದೇ ರೀತಿಯಾಗಿ ಈಶಾದಿದಶೋಪನಿಷತ್ತುಗಳ ಸಾರವನ್ನೆಲ್ಲ ಬ್ರಹ್ಮೀಭೂತ ಪೂಜ್ಯ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರೇ ತಮ್ಮ ಉಪನಿಷದ್ಭಾಷ್ಯಗ್ರಂಥಗಳಲ್ಲಿ ಅಳವಡಿಸಿರುವ ಸಾರವನ್ನು ಕ್ರೋಢೀಕರಿಸಿ ಹಾಗೂ ಗ್ರಂಥಕರ್ತರು ಆಯಾ ಉಪನಿಷತ್ತುಗಳಿಗೆ ಬರೆದಿರುವ ಪೀಠಿಕೆಗಳನ್ನೂ ಅಳವಡಿಸಿ **ದಶೋಪನಿಷತ್ತುಗಳ ಸಾರ** – ಎಂಬ ಹೆಸರಿನ ಗ್ರಂಥರೂಪವಾಗಿ ಪ್ರಕಟಿಸಲಾಗಿದೆ. ಅಧ್ಯಾತ್ಮವಿಚಾರಜಿಜ್ಞಾಸುಗಳು ಈ ಗ್ರಂಥವನ್ನೂ ಅಧ್ಯಯನ ಮಾಡಿ ಪ್ರೋತ್ಸಾಹಿಸಬೇಕಾಗಿ ಕೋರಿದೆ.

ಗ್ರಂಥಕರ್ತರು ಎಂದಿನಂತೆ ಈ ಗ್ರಂಥದ ಮುದ್ರಣ, ಪ್ರಕಾಶನಾದಿ ಎಲ್ಲಾ ಹಕ್ಕುಗಳನ್ನೂ ಕಾರ್ಯಾಲಯಕ್ಕೇ ಸಮರ್ಪಿಸಿದ್ದಾರೆ.

ಹೊಳೆನರಸೀಪುರ ಇತಿ

ತಾ. ೨೧–೨–೨೦೦೨ ಪ್ರಕಾಶಕರು

# ವಿಷಯಾನುಕ್ರಮಣಿಕೆ


ಒಂದನೆಯ ಅಧ್ಯಾಯ

ಎರಡನೆಯ ಅಧ್ಯಾಯ

ಮೂರನೆಯ ಅಧ್ಯಾಯ

ನಾಲ್ಕನೆಯ ಅಧ್ಯಾಯ

ಐದನೆಯ ಅಧ್ಯಾಯ

ಆರನೆಯ ಅಧ್ಯಾಯ

ಏಳನೆಯ ಅಧ್ಯಾಯ

ಎಂಟನೆಯ ಅಧ್ಯಾಯ

ಒಂಬತ್ತನೆಯ ಅಧ್ಯಾಯ

ಹತ್ತನೆಯ ಅಧ್ಯಾಯ

ಹನ್ನೊಂದನೆಯ ಅಧ್ಯಾಯ

ಹನ್ನೆರಡನೆಯ ಅಧ್ಯಾಯ

ಹದಿಮೂರನೆಯ ಅಧ್ಯಾಯ

ಹದಿನಾಲ್ಕನೆಯ ಅಧ್ಯಾಯ

ಹದಿನೈದನೆಯ ಅಧ್ಯಾಯ

ಹದಿನಾರನೆಯ ಅಧ್ಯಾಯ

ಹದಿನೇಳನೆಯ ಅಧ್ಯಾಯ

ಹದಿನೆಂಟನೆಯ ಅಧ್ಯಾಯ


## ಭಗವದ್ಗೀತೆಯ ಪ್ರಧಾನೋಪದೇಶಗಳು


ಮೀಮಾಂಸೆ, ಸಾಂಖ್ಯ, ಯೋಗ

ಭಗವತ್ತತ್ತ್ವ

ಉಪಾಸನೆ, ಜ್ಞಾನ, ಭಕ್ತಿ

ಭಗವತ್ಪ್ರಸಾದ

ಜ್ಞಾನನಿಷ್ಠೆ

ಜ್ಞಾನನಿಷ್ಠೆಯ ಫಲ

# ಓದುಗರಿಗೆ

ಭಗವದ್ಗೀತೆಯಲ್ಲಿರುವ ಹದಿನೆಂಟು ಅಧ್ಯಾಯಗಳೊಳಗೆ ಎರಡನೆಯ ಅಧ್ಯಾಯವು ಗೀತಾರ್ಥವನ್ನೆಲ್ಲ ಸಂಗ್ರಹಿಸಿಕೊಂಡಿದೆ. ಮುಂದಿನ ಹದಿನಾರು ಅಧ್ಯಾಯಗಳು ಇದೇ ಅರ್ಥವನ್ನು ಸ್ವಲ್ಪ ಸ್ವಲ್ಪವಾಗಿ ವಿಸ್ತರಿಸುತ್ತಾಹೋಗಿವೆ. ಹದಿನೆಂಟನೆಯ ಅಧ್ಯಾಯದಲ್ಲಿ ಒಟ್ಟು ಗೀತೋಪದೇಶದ ತಿರುಳನ್ನು ಉಪ ಸಂಹಾರಮಾಡಿದೆ. ಮುಖ್ಯವಾಗಿ ಸಾಧನಗಳನ್ನು ಅಳವಡಿಸಿಕೊಂಡವರಿಗೆ ಪರಮಸಿದ್ಧಾಂತವು ತಾನೇ ಅನುಭವವೇದ್ಯವಾಗುವದು – ಎಂಬುದೇ ಭಗವಂತನ ಉಪದೇಶವು.

ಈ ಉಪದೇಶವನ್ನು ಶಂಕಾಸಮಾಧಾನಗಳ ಮೂಲಕ ಇನ್ನಷ್ಟು ವಿವರವಾಗಿ ಮನದಟ್ಟು ಮಾಡಿಕೊಳ್ಳಬೇಕೆನ್ನುವವರು ಶ್ರೀಶ್ರೀಸಚ್ಚಿದಾನಂದೇಂದ್ರ ಸರಸ್ವತೀಸ್ವಾಮಿಗಳವರು ಬರೆದಿರುವ ಹಾಗೂ ಕಾರ್ಯಾಲಯದಲ್ಲಿ ಪ್ರಕಟವಾಗಿರುವ ಗೀತಾಶಾಂಕರಭಾಷ್ಯದ ಅನುವಾದವನ್ನು ಟಿಪ್ಪಣಿಗಳ ಸಹಾಯದಿಂದ ಓದಿ ಮನನಮಾಡಬೇಕು.

ಗೀತೆಗೆ ಶ್ರೀ ಶಂಕರಾಚಾರ್ಯರು ಬರೆದಿರುವ ಅರ್ಥವು ಚೆನ್ನಾಗಿ ಅಳವಟ್ಟಮೇಲೆಯೇ ಇತರರು ಗೀತೆಯ ಬಗ್ಗೆ ಬರೆದಿರುವ ಗ್ರಂಥಗಳನ್ನು ಓದಿ ಹೋಲಿಸಿ ಸಾರವನ್ನು ಗ್ರಹಿಸಬೇಕು. ಹೀಗಾದರೆ ಗೀತಾಚಾರ್ಯನ ಪರಮಾನುಗ್ರಹವುಂಟಾಗುವದರಲ್ಲಿ ಸಂಶಯವಿಲ್ಲ. ವಾಚಕರೆಲ್ಲರನ್ನೂ ಭಗವಂತನು ಹೀಗೆ ಅನುಗ್ರಹಿಸಲೆಂದು ಬೇಡುವೆವು.

||ಓಂ||

# ಶ್ರೀಮದ್ಭಗವದ್ಗೀತೆಯ ಸಾರ

## ಒಂದನೆಯ ಅಧ್ಯಾಯ

೧. ಶ್ರೀವೇದವ್ಯಾಸರು ಸಂಜಯನಿಗೆ ದಿವ್ಯದೃಷ್ಟಿಯನ್ನು ಕೊಟ್ಟು ಪಾಂಡವರಿಗೂ ಕೌರವರಿಗೂ ಆಗುವ ಯುದ್ಧದ ಸಮಾಚಾರವನ್ನು ಅವನಿಂದ ತಿಳಿದುಕೊಳ್ಳಬಹುದೆಂದು ಧೃತರಾಷ್ಟ್ರನಿಗೆ ತಿಳಿಸಿಹೋಗಿದ್ದರು. ಅದರಂತೆ ಧೃತರಾಷ್ಟ್ರನು ಸಂಜಯನನ್ನು ಕುರಿತು 'ಧರ್ಮಕ್ಷೇತ್ರವಾದ ಕುರುಕ್ಷೇತ್ರದಲ್ಲಿ ಯುದ್ಧಕ್ಕೆಂದು ಸೇರಿದ್ದ ನಮ್ಮವರೂ ಪಾಂಡವರೂ ಏನು ಮಾಡಿದರಯ್ಯ?' ಎಂದು ಕೇಳಿದನು. ಆಗ ಸಂಜಯನು ಹೇಳಿದ್ದೇನೆಂದರೆ :

೨–೧೧. ಪಾಂಡವರು ತಮ್ಮ ಸೈನ್ಯವನ್ನು ಒಡ್ಡಿದ್ದನ್ನು ಕಂಡ ದುರ್ಯೋಧನನು ದ್ರೋಣಾಚಾರ್ಯರ ಬಳಿಗೆ ಬಂದು ಇಂತೆಂದನು : ''ಆಚಾರ್ಯರೆ, ಜಾಣನಾದ ತಮ್ಮ ಶಿಷ್ಯ ಧೃಷ್ಟದ್ಯುಮ್ನನು ಒಡ್ಡಿರುವ ಪಾಂಡವರ ದೊಡ್ಡ ಸೇನೆಯನ್ನು ನೋಡಿದಿರಾ ? ಇಲ್ಲಿ ಯುದ್ಧದಲ್ಲಿ ಭೀಮಾರ್ಜುನರಿಗೆ ಸಮಾನರಾದ ಯುಯುಧಾನ, ವಿರಾಟ, ದ್ರುಪದ, ಧೃಷ್ಟಕೇತು, ಚೇಕಿತಾನ, ಕಾಶಿರಾಜ, ಪುರುಜಿತ್ತು , ಕುಂತಿಭೋಜ, ಶೈಬ್ಯ, ಯುಧಾಮನ್ಯು, ಉತ್ತಮೌಜಸ್ಸು, ಅಭಿಮನ್ಯು, ದ್ರೌಪದಿಯ ಮಕ್ಕಳು – ಎಲ್ಲರೂ ಸೇರಿರುತ್ತಾರೆ.

ನಮ್ಮಲ್ಲಿ ಮುಖ್ಯರಾದವರು ಯಾರೆಂದರೆ : ತಾವು, ಭೀಷ್ಮರು, ಕರ್ಣ, ಅಶ್ವತ್ಥಾಮ, ವಿಕರ್ಣ, ಸೌಮದತ್ತಿ – ಮೊದಲಾದವರು.

ಹೀಗಿರುವದರಿಂದ ಭೀಷ್ಮರು ನಾಯಕರಾಗಿದ್ದರೂ ನಮ್ಮ ಸೈನ್ಯವು ಸಾಲದೆ ಇದೆ. ಆದರೆ ಭೀಮನು ಮುಂದಾಳಾಗಿರುವ ಈ ಪಾಂಡವರ ಸೇನೆಯು

ತಕ್ಕಷ್ಟು ಇದೆ. ಆದ್ದರಿಂದ ತಾವೆಲ್ಲರೂ ವ್ಯೂಹಭೇದನೆಯನ್ನು ಮಾಡಬಹುದಾದ ಕಡೆಗಳಲ್ಲಿದ್ದುಕೊಂಡು ಭೀಷ್ಮರನ್ನೇ ರಕ್ಷಿಸಿಕೊಳ್ಳಿರಿ.''

೧೨–೧೯. ಆಗ ಭೀಷ್ಮಾಚಾರ್ಯರು ಕೌರವನಿಗೆ ಹರ್ಷವಾಗಲೆಂದು ಗಟ್ಟಿಯಾಗಿ ಸಿಂಹನಾದವನ್ನು ಮಾಡಿ ಶಂಖವನ್ನು ಧ್ವನಿಗೈದರು. ಆ ಬಳಿಕ ಶಂಖಗಳು, ಭೇರಿಗಳು, ತಮಟೆ, ನಗಾರಿ, ಗೋಮುಖಗಳು – ಇವುಗಳನ್ನು ಇದ್ದಕ್ಕಿದ್ದಂತೆ ತಟ್ಟನೆ ಉಳಿದವರು ಬಾರಿಸಿದರು. ಅದರಿಂದ ಬಹಳ ಗದ್ದಲವಾಯಿತು.

ಬಳಿಕ ಕೃಷ್ಣನು ಪಾಂಚಜನ್ಯವನ್ನೂ ಅರ್ಜುನನು ದೇವದತ್ತವನ್ನೂ ಭೀಮನು ಪೌಂಡ್ರವನ್ನೂ, ಧರ್ಮರಾಯನು ಅನಂತವಿಜಯವನ್ನೂ, ನಕುಲ ಸಹದೇವರುಗಳು ಸುಘೋಷಮಣಿಪುಷ್ಪಕಗಳನ್ನೂ, ಕಾಶಿರಾಜನೇ ಮೊದಲಾದವರು ತಮ್ಮತಮ್ಮ ಶಂಖಗಳನ್ನೂ ಧ್ವನಿಗೈದರು. ಆ ಶಂಖದ ಘೋಷವು ಭೂಮ್ಯಾಕಾಶಗಳನ್ನು ವ್ಯಾಪಿಸಿಕೊಂಡು ಧೃತರಾಷ್ಟ್ರನ ಕಡೆಯವರ ಹೃದಯಗಳನ್ನು ಸೀಳುವಂತಿತ್ತು.

೨೦–೨೭. ಆಗ ಅರ್ಜುನನು ಕೃಷ್ಣನನ್ನು ಕುರಿತು : 'ಅಚ್ಯುತನೆ, ನಮ್ಮ ರಥವನ್ನು ಎರಡೂ ಸೇನೆಗಳ ನಡುವೆ ನಿಲ್ಲಿಸು. ಮೂರ್ಖನಾದ ಕೌರವನಿಗಾಗಿ ಕಾದಲೆಳಸಿರುವವರನ್ನು ನೋಡೋಣ' ಎಂದನು. ಶ್ರೀಕೃಷ್ಣನು ಹಾಗೆಯೇ ಮಾಡಲು ಅಲ್ಲಿ ಎರಡು ಕಡೆಗಳಲ್ಲಿಯೂ ಯುದ್ಧಕ್ಕೆ ನಿಂತಿದ್ದವರು ತನಗೆ ತಂದೆ, ಅಜ್ಜ, ಆಚಾರ್ಯ, ಸೋದರಮಾವ, ಅಣ್ಣತಮ್ಮಂದಿರು, ಮಕ್ಕಳು, ಮೊಮ್ಮಕ್ಕಳು, ಮುಮ್ಮಕ್ಕಳು, ಮಾವ, ಸ್ನೇಹಿತರು – ಹೀಗೆ ಸಂಬಂಧಿಗಳೇ ಆಗಿರುವದನ್ನು ಕಂಡು ಅರ್ಜುನನು ಬಹಳ ಕನಿಕರದಿಂದೊಡಗೂಡಿ ವಿಷಾದದಿಂದ ಇಂತೆಂದನು :

೨೮–೪೬. ''ಕೃಷ್ಣ, ಸ್ವಜನವು ಹೀಗೆ ಯುದ್ಧಕ್ಕೆ ನಿಂತಿರುವದನ್ನು ಕಂಡು ನನ್ನ ಕೈಕಾಲುಗಳು ಕುಸಿಯುತ್ತಿವೆ, ಮುಖವು ಬಾಡುತ್ತಿದೆ ; ನಿಂತುಕೊಳ್ಳಲಾರದೆ ಇದೇನೆ, ಮನಸ್ಸು ತೊಳಲುವಂತಿದೆ. ಅಪಶಕುನಗಳು ಕಾಣಿಸುತ್ತಿವೆ. ಇವರನ್ನು ಕೊಂದರೆ ಒಳ್ಳೆಯದಾದೀತೆ ? ನನಗೆ ವಿಜಯವೂ ಬೇಡ, ರಾಜ್ಯವಾಗಲಿ,

ಸುಖವಾಗಲಿ ಬೇಡ. ಯಾರಿಗಾಗಿ ನಮ್ಮ ರಾಜ್ಯಭೋಗಾದಿಗಳು ಬೇಕೋ ಅವರೇ ಎದುರಿಗೆ ಪ್ರಾಣವನ್ನು ಒಪ್ಪಿಸುವದಕ್ಕೆ ಬಂದು ನಿಂತಿದ್ದಾರಲ್ಲ! ಇವರನ್ನು ಕೊಂದರೆ ನಮಗೆ ಯಾವ ಸಂತೋಷವಾದೀತು ? ಇವರು ಕುಲಕ್ಷಯ ದಿಂದಾಗುವ ದೋಷವನ್ನಾಗಲಿ ಮಿತ್ರದ್ರೋಹದಿಂದಾಗುವ ಪಾಪವನ್ನಾಗಲಿ, ಅರಿಯದೆ ಇರುವರಾದರೂ ನಾವು ಇದನ್ನು ತಪ್ಪಿಸದೆ ಇರಬಹುದೆ ? ಕುಲಕ್ಷಯದಿಂದ ಬಹಳ ಅನರ್ಥಗಳಾಗುವವು, ನಮಗೆ ನರಕದಲ್ಲಿಯೇ ವಾಸವಾಗುವದು ಖಂಡಿತ. ಆದ್ದರಿಂದ ರಾಜ್ಯಸುಖದ ದುರಾಸೆಯಿಂದ ನಾವು ಈಗ ಮಾಡಬೇಕೆಂದಿರುವದು ಮಹಾಪಾಪವೇ ಸರಿ.

ಆದ್ದರಿಂದ ನಾನು ಶಸ್ತ್ರವನ್ನು ಹಿಡಿಯುವದಿಲ್ಲ. ಇವರು ನನ್ನನ್ನು ಶಸ್ತ್ರಗಳಿಂದ ಕೊಂದರೆ ಅದೇ ನನಗೆ ಹೆಚ್ಚಿನ ಕ್ಷೇಮವಾದೀತು!''

೪೭. ಹೀಗೆಂದು ಅರ್ಜುನನು ಬಿಲ್ಲುಬಾಣಗಳನ್ನು ಕೈಬಿಟ್ಟು ರಥದ ಮುಂಗಡೆಯಲ್ಲಿ ಶೋಕದಿಂದ ಕಳವಳಪಡುತ್ತಾ ಕುಳಿತುಕೊಂಡುಬಿಟ್ಟನು.

## ಎರಡನೆಯ ಅಧ್ಯಾಯ

೧–೧೦. ಅರ್ಜುನನು ಶ್ರೀಕೃಷ್ಣನ ಪ್ರೋತ್ಸಾಹಕ ವಾಕ್ಯಗಳನ್ನು ಕೇಳದೆ ''ಗುರುಗಳನ್ನೂ ಹಿರಿಯರನ್ನೂ ಯುದ್ದದಲ್ಲಿ ಕೊಲ್ಲುವದು ಧರ್ಮವಾದೀತೆ ? ನನಗೆ ಯುದ್ಧವನ್ನು ಮಾಡುವದಕ್ಕೆ ಮನಸ್ಸೊಪ್ಪದೆ ಇದೆ. ನಿಜವಾದ ತತ್ತ್ವವನ್ನು ನನಗೆ ತಿಳಿಸು'' ಎಂದು ಬೇಡಿಕೊಳ್ಳಲು ಭಗವಂತನಿಂತೆಂದನು :–

೧೧–೨೫. ಎಲೈ ಅರ್ಜುನನೆ, ಪರಮಾರ್ಥವಾದ ಆತ್ಮತತ್ತ್ವವನ್ನು ಅರಿಯದ್ದರಿಂದ ನಿನಗೆ ಈ ಶೋಕಮೋಹಗಳುಂಟಾಗಿರುತ್ತವೆ. ಆತ್ಮನು ನಿತ್ಯನೂ ನಿರ್ವಿಕಾರಿಯೂ ಆಗಿರುತ್ತಾನೆ ; ಆದ್ದರಿಂದ ಭೀಷ್ಮಾದಿಗಳಿಗೆ ಆತ್ಮದೃಷ್ಟಿಯಿಂದ ನಾಶವೇ ಇಲ್ಲದ್ದರಿಂದ ಶೋಕಕ್ಕೆ ಕಾರಣವಿಲ್ಲ. ಜೀವರುಗಳಿಗೆ ಅವರು ಬದುಕಿರುವಾಗ ಶೀತೋಷ್ಣಾದಿದ್ವಂದ್ವಗಳು ಸುಖದುಃಖಗಳನ್ನು ಕೊಡುವ

ವಾದರೂ ಅವು ತೋರಿಹಾರುವ ಅನಿತ್ಯವೇದನೆಗಳಾಗಿರುವದರಿಂದ ಅವನ್ನು ಕುರಿತು ವಿವೇಕಿಯಾದವನು ಶೋಕಿಸುವದಕ್ಕೆ ಕಾರಣವಿರುವದಿಲ್ಲ. ಇರುವದು ನಾಶವಾಗಲಾರದು ; ಇಲ್ಲದ್ದು ಹುಟ್ಟಲಾರದು – ಎಂಬ ತತ್ತ್ವವನ್ನು ತಿಳಿದವನು ಏತಕ್ಕೆ ಶೋಕಿಸುವನು ? ಆತ್ಮನು ಸತ್ಯಸ್ವರೂಪನಾದ್ದರಿಂದ ಅವನಿಗೆ ನಾಶವಿಲ್ಲವೆಂದೂ, ದೇಹಾದಿಗಳು ಅಸತ್ಯವಾಗಿರುವದರಿಂದ ಅವು ನಾಶವಾಗುವದು ಸ್ವಾಭಾವಿಕವೆಂದೂ ತಿಳಿ. ಆತ್ಮಸ್ವರೂಪದಿಂದ ನೋಡಿದಾಗ ನಿನಗೆ ಹನನಕರ್ತೃತ್ವವಿರುವದಿಲ್ಲ, ಭೀಷ್ಮಾದಿಗಳಿಗೆ ವಧ್ಯತ್ವವೂ ಇರುವದಿಲ್ಲ. ಆತ್ಮಸ್ವರೂಪವನ್ನು ಸರಿಯಾಗಿ ತಿಳಿದುಕೊಂಡವನು ತಾನೂ ಆತ್ಮನೇ ಆಗಿರುವದರಿಂದ ತಾನು ಕೊಲ್ಲುತ್ತೇನೆಂದಾಗಲಿ, ಕೊಲ್ಲಿಸಿಕೊಂಡು ಸಾಯುವೆನೆಂದಾಗಲಿ ಬಗೆಯುವದು ಅಸಂಭವ. ಬಟ್ಟೆಗಳು ಹಳೆಯವಾದಾಗ ಅವನ್ನು ತೆಗೆದುಹಾಕಿದರೆ ಅಥವಾ ಹೊಸಬಟ್ಟೆಗಳನ್ನು ನಾವು ಧರಿಸಿದರೆ ನಮ್ಮ ಸ್ವರೂಪದಲ್ಲಿ ಯಾವ ಮಾರ್ಪಾಡೂ ಆಗುವದಿಲ್ಲವಷ್ಟೆ ? ಇದರಂತೆ ದೇಹವು ಯಾವ ಮಾರ್ಪಾಡನ್ನು ಹೊಂದಿದರೂ ಆತ್ಮನಲ್ಲಿ ಯಾವ ವಿಕಾರವೂ ಆಗುವಂತಿಲ್ಲ. ಆದ್ದರಿಂದ ಇಂದ್ರಿಯಾಗೋಚರನೂ ಮನಸ್ಸಿಗೂ ಅಗೋಚರನೂ ಯಾವ ಬಗೆಯಿಂದಲೂ ಮಾರ್ಪಡಿಸದವನೂ ಆದ ಈ ಆತ್ಮನ ವಿಷಯದಲ್ಲಿ ಶೋಕಿಸದಿರು.

೨೬–೩೦. ಆತ್ಮನು ಶರೀರವು ಹುಟ್ಟುವಾಗ ಹುಟ್ಟಿ ಅದು ಸಾಯುವಾಗ ಅದರ ಜೊತೆಯಲ್ಲಿಯೇ ಸಾಯುವನೆಂಬ ಸಾಮಾನ್ಯರ ನಂಬಿಕೆಯನ್ನೇ ನೀನು ಇಟ್ಟುಕೊಂಡರೂ ಶೋಕಕ್ಕೆ ಕಾರಣವಿಲ್ಲ. 'ಹುಟ್ಟಿಸಾಯುವದೇ ಆತ್ಮನ ಸ್ವಭಾವವಾದರೆ ಅದಕ್ಕಾಗಿ ಶೋಕಪಡುವದೇಕೆ ? ಆದರೆ ವಸ್ತುಸ್ಥಿತಿಯು ಹೀಗಿಲ್ಲ. ಆತ್ಮನು ಅವಧ್ಯನಾಗಿರುತ್ತಾನೆ. ಆದ್ದರಿಂದ ಯಾರನ್ನೂ ಕುರಿತು ಶೋಕಪಡುವದಕ್ಕೆ ಕಾರಣವೇ ಇಲ್ಲ.

೩೧–೩೮. ನಿನಗೆ ಯುದ್ಧವು ಸ್ವಧರ್ಮವೆಂಬ ದೃಷ್ಟಿಯಿಂದ ನೋಡಿದರೂ ಶೋಕಕ್ಕೆ ಕಾರಣವಿಲ್ಲ. ಏಕೆಂದರೆ ನೀನು ಗೆದ್ದರೆ ರಾಜ್ಯಲಾಭವುಂಟು, ಯುದ್ಧದಲ್ಲಿ ಸತ್ತರೆ ವೀರಸ್ವರ್ಗವುಂಟು. ಇದಲ್ಲದೆ ನೀನು ಸ್ವಧರ್ಮವನ್ನು ಬಿಟ್ಟರೆ ನಿನಗೆ ಕೆಟ್ಟಹೆಸರು ಬರುತ್ತದೆ ; ಪಾಪವೂ ಗಂಟುಬೀಳುತ್ತದೆ.

ಸುಖದುಃಖಗಳನ್ನೂ ಲಾಭಾಲಾಭಗಳನ್ನೂ ಜಯಾಪಜಯಗಳನ್ನೂ ಲಕ್ಷ್ಯದಲ್ಲಿಟ್ಟು ಶೋಕಿಸುತ್ತಾ ಕೂರುವದು ಸ್ವಧರ್ಮದೃಷ್ಟಿಯಿಂದಲೇ ಸರಿಯಲ್ಲ; ಇನ್ನು ಪರಮಾರ್ಥದೃಷ್ಟಿಯಿಂದ ಸರಿಯಲ್ಲವೆಂದು ಹೇಳಬೇಕೆ ?

೩೯–೪೫. ಇದುವರೆಗೆ ನಾನು ನಿನಗೆ ಹೇಳಿರುವ ಜ್ಞಾನವು ಸಾಂಖ್ಯ ವಿಷಯಕವಾದದ್ದು. ಇನ್ನು ಕರ್ಮಯೋಗವಿಷಯದ ತಿಳಿವಳಿಕೆಯನ್ನು ಹೇಳುವೆನು ಕೇಳು. ಈ ಕರ್ಮಯೋಗವು ಕರ್ಮಸಂಬಂಧವನ್ನೇ ಕಡಿದುಹಾಕುವದು. ಇದರಲ್ಲಿ ಮಾಡಿದ್ದಕ್ಕೆ ಒಳ್ಳೆಯ ಫಲವು ತಪ್ಪಿದ್ದಲ್ಲ, ಕೆಟ್ಟ ಫಲದ ಸುಳಿವಿಲ್ಲ. ಇದನ್ನು ಎಳ್ಳಷ್ಟು ಆಚರಿಸಿದರೂ ಕ್ರಮಕ್ರಮವಾಗಿ ಮಹಾಸಂಸಾರಭಯವನ್ನೇ ತಪ್ಪಿಸುವದು. ಕಾಮ್ಯಕರ್ಮಗಳನ್ನೇ ಹೊಗಳುತ್ತಾ ಸ್ವರ್ಗವೇ ಪರಮ ಪುರುಷಾರ್ಥವೆಂದು ನಂಬಿರುವ ಮೂಢರಿಗೆ ಈ ಯೋಗದ ನಿಶ್ಚಯಬುದ್ಧಿಯು ದಕ್ಕುವದಿಲ್ಲ. ಸಿದ್ಧಿಯು ಆಗಲಿ, ಆಗದಿರಲಿ– ಬುದ್ಧಿಯನ್ನು ಸಮವಾಗಿಟ್ಟುಕೊಂಡು ಕರ್ಮವನ್ನಾಚರಿಸುತ್ತಿರುವದೇ ಈ ಯೋಗದಲ್ಲಿರುವ ಜಾಣತನವು. ಯಾವ ವಿಹಿತಕರ್ಮವನ್ನೇ ಆಗಲಿ ಅದರ ಫಲವೇನೆಂದು ವಿಚಾರಿಸದೆ ಸಮತ್ವ ಬುದ್ಧಿಯಿಂದ ಮಾಡುತ್ತಿರಬೇಕು. ನೀನು ನಿನಗೆ ವಿಹಿತವಾಗಿರುವ ಧರ್ಮಯುದ್ಧವನ್ನು ಹೀಗೆ ಮಾಡು.

೪೬–೫೩. ಜ್ಞಾನಿಗೆ ಆಗುವ ಫಲದಲ್ಲಿ ಮಿಕ್ಕವರು ಮಾಡುವ ಕರ್ಮಗಳ ಫಲಗಳೆಲ್ಲ ಅಡಕವಾಗಿರುವವು. ಅಂಥ ಜ್ಞಾನಕ್ಕೆ ಅಧಿಕಾರವಿಲ್ಲದ ನಿನ್ನಂಥವರು ಕರ್ಮವನ್ನೇ ಮಾಡಬೇಕು, ಫಲವನ್ನು ಬಯಸಿ ಜನ್ಮಾಂತರಕ್ಕೆ ಕಾರಣವನ್ನು ತಂದುಕೊಳ್ಳಬಾರದು ; ಕರ್ಮವನ್ನು ಬಿಟ್ಟುಬಿಡುವದಂತೂ ಸರಿಯೇ ಅಲ್ಲ. ಆದ್ದರಿಂದ ಕರ್ಮದ ಫಲವಾದ ಜ್ಞಾನಪ್ರಾಪ್ತಿರೂಪವಾದ ಸಿದ್ಧಿಯಾದರೂ ಆಗದಿದ್ದರೂ ಚಿತ್ತವನ್ನು ವಿಷಮಗೊಳಿಸಿಕೊಳ್ಳದೆ ಕರ್ಮವನ್ನೇ ಮಾಡುತ್ತಿರು ; ಇದೇ ಕರ್ಮಯೋಗವು. ಕರ್ಮಯೋಗವನ್ನು ಮಾಡುವವನು ಕಾಮ್ಯಕರ್ಮವನ್ನು ಮಾಡುವವರಿಗಿಂತ ಉತ್ತಮವಾದ ಫಲವನ್ನು ಪಡೆದುಕೊಳ್ಳಬಹುದು. ಹೇಗೆಂದರೆ ಕರ್ಮಯೋಗಿಗಳು ಧರ್ಮಾಧರ್ಮಗಳನ್ನು ಮೀರಿ ಸಾಂಖ್ಯಬುದ್ಧಿಯನ್ನು ಪಡೆಯುವದರ ಮೂಲಕ ಜನ್ಮಬಂಧದಿಂದಲೂ ಬಿಡುಗಡೆಯಾಗಿ ಪರಮಾತ್ಮನ ಸ್ಥಾನವನ್ನೇ ಸೇರುವರು. ಅದು ಹೇಗೆಂದರೆ: ಕರ್ಮಯೋಗದಿಂದ

ಬುದ್ಧಿಯಲ್ಲಿರುವ ಕಲ್ಮಷವೂ ಚಾಂಚಲ್ಯವೂ ಹೋಗಿ ಆತ್ಮಾನಾತ್ಮಗಳ ವಿವೇಕ ದಿಂದುಂಟಾದ ಉತ್ಕೃಷ್ಟಜ್ಞಾನವು ನಿಲುಗಡೆಗೆ ಬರುವದು. ಹೀಗೆ ಜ್ಞಾನವು ನೆಲೆನಿಂತವನಿಗೆ ಸ್ಥಿತಪ್ರಜ್ಞನೆಂದು ಹೆಸರು.

೫೪–೬೯. ಸ್ಥಿತಪ್ರಜ್ಞನ ಸ್ವಭಾವವನ್ನೂ ವ್ಯವಹಾರವನ್ನೂ ಹೇಳುವೆನು ಕೇಳು : (೧) ಅವನು ಸಕಲಕಾಮಗಳನ್ನೂ ದೂರಮಾಡಿ ಆತ್ಮಸ್ವರೂಪಜ್ಞಾನ ದಿಂದಲೇ ತೃಪ್ತನಾಗಿರುತ್ತಾನೆ. (೨) ಅವನು ಸುಖವನ್ನು ಬೇಕೆಂತ ಬಯಸುವ ದಿಲ್ಲ, ದುಃಖದಿಂದ ಕಳವಳಪಡುವದಿಲ್ಲ; ಒಳ್ಳೆಯದಾಗಲಿ, ಕೆಟ್ಟದ್ದಾಗಲಿ ರಾಗದ್ವೇಷಗಳಿಲ್ಲದೆ ಬಂದದ್ದನ್ನು ಅನುಭವಿಸಿಕೊಂಡಿರುತ್ತಾನೆ. (೩) ಅವನು ಇಂದ್ರಿಯಗಳನ್ನೆಲ್ಲ ಉಪಸಂಹಾರಮಾಡಿಕೊಂಡು ಆತ್ಮನಿಷ್ಠನಾಗಿರುತ್ತಾನೆ. ರಾಗದ್ವೇಷಗಳಿಲ್ಲದೆ ಸಿಕ್ಕಿದಷ್ಟು ವಿಷಯಗಳನ್ನು ಇಂದ್ರಿಯಗಳಿಂದ ಅನುಭವಿಸಿ ಕೊಂಡಿರುವದರಿಂದ ಕಾಮಕ್ರೋಧಾದಿಗಳಿಂದ ಮನಸ್ಸಿನಲ್ಲಿ ಯಾವ ಗಡಿ ಬಿಡಿಯೂ ಆಗದೆ ಪ್ರಸನ್ನತೆಯೂ ಶಾಂತಿಯೂ ಸುಖವೂ ಅವನಿಗೆ ದೊರಕಿರು ತ್ತವೆ. (೪) ಇಂದ್ರಿಯಗಳನ್ನು ಎಲ್ಲಾ ಬಗೆಯಿಂದಲೂ ನಿಗ್ರಹಮಾಡಿಕೊಂಡಿರು ವವನೇ ನಿಜವಾದ ಸ್ಥಿತಪ್ರಜ್ಞನು. ಲೌಕಿಕವ್ಯವಹಾರಪ್ರಪಂಚವನ್ನು ಅವನು ಅರಿಯನು. ಅವನು ಅರಿತುಕೊಂಡಿರುವ ಪರಮಾರ್ಥತತ್ತ್ವವನ್ನು ಲೌಕಿಕರು ಅರಿಯರು.

೭೦–೭೨. ಯಾವ ವಿಷಯಭೋಗದಿಂದಲೂ ಉಬ್ಬದೆ ಯಾವ ಇಚ್ಛೆಗೂ ಒಳಗಾಗದೆ ಶರೀರಯಾತ್ರೆಗೆ ಬೇಕಾಗುವಷ್ಟು ವಿಷಯಗಳನ್ನು ನಿಃಸ್ಪೃಹನಾಗಿ ನನ್ನದೆಂಬ ಅಭಿಮಾನವು ಕೂಡ ಇಲ್ಲದೆ ಅನುಭವಿಸುತ್ತಿರುವ ನಿರಹಂಕಾರಿಯಾದ ಈ ಸ್ಥಿತಪ್ರಜ್ಞನೇ ಕೈವಲ್ಯಕ್ಕೆ ಪಾತ್ರನಾಗಿರುವನು. ಈ ಸ್ಥಿತಿಯನ್ನು ಯಾವನು ಯಾವಾಗ ಪಡೆದುಕೊಂಡರೂ ಅವನಿಗೆ ಬ್ರಹ್ಮನಿರ್ವಾಣವು ಪ್ರಾಪ್ತವಾಗುವದು.

# ಮೂರನೆಯ ಅಧ್ಯಾಯ

೧–೨. ಹಿಂದಿನ ಅಧ್ಯಾಯದಲ್ಲಿ ಸಾಂಖ್ಯಬುದ್ಧಿ, ಯೋಗಬುದ್ಧಿ–ಎಂದು ಎರಡು ಬುದ್ಧಿಗಳನ್ನು ಉಪದೇಶಿಸಿದ ಬಳಿಕ ಭಗವಂತನು ಸಾಂಖ್ಯರಿಗೆ ಅಂದರೆ ಜ್ಞಾನಿಗಳಿಗೆ ಸರ್ವಕರ್ಮಸಂನ್ಯಾಸಪೂರ್ವಕವಾದ ಜ್ಞಾನನಿಷ್ಠೆಯಿಂದ ಮುಕ್ತಿಯಾಗುವದೆಂದು ಹೇಳಿದನು. ಅರ್ಜುನನಿಗೆ 'ನೀನು ಕರ್ಮವನ್ನೇ ಮಾಡು' ಎಂದು ಹೇಳಿದನು. ಆಗ ಅರ್ಜುನನು 'ಕರ್ಮಕ್ಕಿಂತ ಜ್ಞಾನವೇ ಹೆಚ್ಚಾದರೆ ನನ್ನನ್ನೇಕೆ ಘೋರವಾದ ಯುದ್ಧವೆಂಬ ಕರ್ಮಕ್ಕೆ ಹಚ್ಚುತ್ತಿರುವೆ ? ನಿನ್ನ ಅಭಿಪ್ರಾಯವೇ ಗೊತ್ತಾಗಲಿಲ್ಲವಲ್ಲ !' ಎನ್ನಲು ಭಗವಂತನು ಹೇಳಿದ್ದೇನೆಂದರೆ:

೩–೩೨. ''ಎಲೈ ಅರ್ಜುನನೆ, ಹಿಂದೆ ನಾನು ಜ್ಞಾನಯೋಗವೆಂದೂ ಕರ್ಮಯೋಗವೆಂದೂ ಎರಡು ಬಗೆಯ ನಿಷ್ಠೆಯನ್ನು ಹೇಳಿರುವೆನು. ಸರ್ವಕರ್ಮಸಂನ್ಯಾಸವು ಮುಕ್ತಿಗೆ ಹೇತುವೆಂಬುದೇ ನನ್ನ ಅಭಿಪ್ರಾಯವು. ಆದರೆ ಸುಮ್ಮನೆ ಕರ್ಮವನ್ನು ಕೈಬಿಟ್ಟಮಾತ್ರದಿಂದ ಆ ಸಂನ್ಯಾಸವು ದಕ್ಕುವದೆಂದು ನನ್ನ ಅಭಿಪ್ರಾಯವಲ್ಲ. ಅಜ್ಞರು ಕರ್ಮವನ್ನು ಎಲ್ಲ ವಿಧದಿಂದಲೂ ಬಿಡುವದೆಂಬುದು ಆಗುವಂತೆಯೂ ಇಲ್ಲ. ಒಂದುವೇಳೆ ಅವರು ಕರ್ಮೇಂದ್ರಿಯಗಳನ್ನು ಬಿಗಿಹಿಡಿದರೂ ಮನಸ್ಸಿನಲ್ಲಿ ವಿಷಯಗಳನ್ನು ಚಿಂತಿಸುತ್ತಲೇ ಇರುವರು. ಆದ್ದರಿಂದ ಅಂಥ ಅಕರ್ಮದಿಂದ ಏನೂ ಪ್ರಯೋಜನವಿಲ್ಲ. ಅದಕ್ಕಿಂತ ಸಂಗವಿಲ್ಲದೆ ಕರ್ಮಯೋಗವನ್ನು ಮಾಡುವದೇ ಉತ್ತಮ. ಕರ್ಮದಿಂದಲೇ ಶರೀರಯಾತ್ರೆಯು ಸಾಗುವದು. ದೇವತೆಗಳು ಕರ್ಮದಿಂದ ತೃಪ್ತರಾಗಿಯೇ ಮನುಷ್ಯರ ಇಷ್ಟಾರ್ಥಗಳನ್ನು ನೆರವೇರಿಸುವರು. ಜಗಚ್ಚಕ್ರವು ಕರ್ಮದಿಂದಲೇ ಸಾಗಿರುವದು. ಕರ್ಮದಿಂದ ಏನೂ ಕೆಡುಕು ಇಲ್ಲ. ಸಂಗದಿಂದಲೂ ಫಲಾಶೆಯಿಂದಲೂ ಕೆಡುಕುಂಟು. ಉದಾಹರಣೆಗೆ ನೋಡು : ಆತ್ಮಜ್ಞಾನಿಗೆ ಯಾವ ಕರ್ಮದಿಂದ ಏನು ಫಲವೂ ಆಗಬೇಕಾದದ್ದಿರುವದಿಲ್ಲ; ಆಗುವಹಾಗೂ ಇರುವದಿಲ್ಲ. ಆದರೂ ಅವನು ಲೋಕಸಂಗ್ರಹಕ್ಕಾಗಿ ಕರ್ಮವನ್ನು ಮಾಡುತ್ತಿರುವನು. ಪರಮೇಶ್ವರನಾದ ನಾನುಕೂಡ ಜಗತ್ತಿನ ಕಲ್ಯಾಣಕ್ಕಾಗಿ ಕರ್ಮವನ್ನು ಮಾಡುತ್ತಿರುವೆನು. ಆದ್ದರಿಂದ ಕೃತಾರ್ಥರಾದವರು

ಲೋಕಸಂಗ್ರಹಕ್ಕಾಗಿಯೂ ಸಾಧಕರಾದವರು ಚಿತ್ತಶುದ್ಧಿಗಾಗಿಯೂ ಕರ್ಮವನ್ನು ಮಾಡಬೇಕು. ಹೀಗಿರುವದರಿಂದ ಇದನ್ನು ತಿಳಿದು ನೀನೂ ಈಶ್ವರಾರ್ಪಣ ಬುದ್ಧಿಯಿಂದ ಅಸಕ್ತನಾಗಿ ಕರ್ಮವನ್ನು ಮಾಡು. ಈ ನನ್ನ ಅಭಿಪ್ರಾಯದಂತೆ ಯಾರು ಕರ್ಮಯೋಗವನ್ನು ಮಾಡುವರೋ ಅವರು ಕರ್ಮಗಳಿಂದ ಬಿಡುಗಡೆಹೊಂದಿ ನಾನು ಹೇಳಿದ ನೈಷ್ಕರ್ಮ್ಯವನ್ನು ಪಡೆಯುವರು ; ಹಾಗೆ ಮಾಡದೆ ಇರುವವರು ದುರ್ಗತಿಯನ್ನು ಪಡೆಯುವರು.

೩೩–೩೯. ಪ್ರತಿಯೊಂದು ಇಂದ್ರಿಯಕ್ಕೂ ತನ್ನತನ್ನ ವಿಷಯದಲ್ಲಿ ರಾಗದ್ವೇಷಗಳು ಇದ್ದೇಇರುವವು ; ಆದ್ದರಿಂದ ವಿವೇಕಿಯಾದವನು ಅವುಗಳಿಗೆ ವಶನಾಗಬಾರದು. ಜನರು ಈ ನನ್ನ ಉಪದೇಶದಂತೆ ನಡೆಯದೆ ಇರುವದಕ್ಕೆ ಕಾಮವೇ ಕಾರಣವು. ಕಾಮದಿಂದಲೇ ಅವರು ಸ್ವಧರ್ಮವನ್ನು ಕೈಬಿಟ್ಟು ಪರ ಧರ್ಮಕ್ಕೆ ಕೈನೀಡುವರು. ಕಾಮವು ಉಂಟಾಯಿತೆಂದರೆ ಮನುಷ್ಯನಲ್ಲಿ ರಜೋ ಗುಣವು ತಲೆಯೆತ್ತಿಕೊಳ್ಳುವದು. ಆಗ ಯುಕ್ತಾಯುಕ್ತವಿವೇಕವು ತೋರದೆ ಹೋಗುವದು. ಹೀಗೆ ಮಾಡಬಾರದ ಕರ್ಮಕ್ಕೆ ಅವಿವೇಕದಿಂದ ಕೈಹಾಕುವ ಕಾಮಿಗೆ ಆತ್ಮಜ್ಞಾನವಾಗಲಿ ಆತ್ಮಾನುಭವವಾಗಲಿ ಹೇಗೆ ಉಂಟಾದಾವು ?

೪೦–೪೩. ಇಂದ್ರಿಯ, ಮನಸ್ಸು, ಬುದ್ಧಿ– ಇವುಗಳನ್ನು ಆಶ್ರಯಿಸಿ ಕೊಂಡೇ ಕಾಮವು ತೋರಿಕೊಳ್ಳುತ್ತಿರುವದು. ಆದ್ದರಿಂದ ಇವನ್ನು ಕ್ರಮವಾಗಿ ಜಯಿಸಬೇಕು. ಇವುಗಳನ್ನೆಲ್ಲ ಮೀರಿ ಬುದ್ಧಿಗೂ ಸಾಕ್ಷಿಯಾದ ಆತ್ಮನನ್ನು ಈ ಮೂಲಕ ಅರಿತುಕೊಂಡರೆ ಕಾಮದ ಉಪಟಳವು ಇಲ್ಲವಾಗುವದು.

## ನಾಲ್ಕನೆಯ ಅಧ್ಯಾಯ

೧–೩. ಹಿಂದಿನ ಅಧ್ಯಾಯದಲ್ಲಿ ಕರ್ಮಯೋಗವನ್ನೂ ಅದರಿಂದಾ ಗುವ ಜ್ಞಾನವನ್ನೂ ಸ್ವಲ್ಪದರಲ್ಲಿ ಹೇಳಿದ ಭಗವಂತನು ಈ ಯೋಗವನ್ನು ಉಪದೇಶಿಸಿದ ಆಚಾರ್ಯಪರಂಪರೆಯನ್ನು ಹೇಳಿ ಈ ಉಪದೇಶವನ್ನು ಉಪಸಂಹಾರಮಾಡೋಣವೆಂದು ''ಎಲೈ ಅರ್ಜುನನೆ, ಈ ಕರ್ಮಯೋಗ ದಿಂದ ದೊರೆಯುವ ಜ್ಞಾನಯೋಗವನ್ನು ನಾನು ಹಿಂದೆ ವಿವಸ್ವಂತನಿಗೆ

ಹೇಳಿದೆನು ; ಆತನು ಮನುವಿಗೂ ಮನುವು ಇಕ್ಷ್ವಾಕುವಿಗೂ ತಿಳಿಸಿದ್ದರು. ಹೀಗೆ ರಾಜರ್ಷಿಗಳ ಪರಂಪರೆಯಿಂದ ಬಂದಿದ್ದ ಸಮ್ಯಗ್ದರ್ಶನವನ್ನು ಮುಂದೆ ಸಾಗಿಸುವ ತ್ರಾಣವು ಈಚಿನವರಿಗೆ ಸಾಲದೆಹೋದ್ದರಿಂದ ಇದು ಬಹುಕಾಲ ದಿಂದ ಜನರಿಗೆ ದೊರಕದೆ ಇತ್ತು. ನೀನು ನನ್ನ ಭಕ್ತನೂ ಗೆಳೆಯನೂ ಆಗಿರುವೆ– ಎಂಬ ಕಾರಣದಿಂದ ಈ ರಹಸ್ಯವಾದ ಉತ್ತಮಯೋಗವನ್ನು ನಿನಗೆ ಮತ್ತೆ ಉಪದೇಶಮಾಡಿರುವೆನು'' ಎಂದು ನುಡಿದನು.

೪–೯. ಅರ್ಜುನನು ''ಶ್ರೀಕೃಷ್ಣನೆ, ನೀನು ಈಚೆಗೆ ಹುಟ್ಟಿದವನು, ಹಿಂದೆ ಹುಟ್ಟಿದ್ದ ವಿವಸ್ವಂತನಿಗೆ ಉಪದೇಶವನ್ನು ಮಾಡಿದ್ದು ಹೇಗೆ ?'' ಎನ್ನಲು, ಶ್ರೀಕೃಷ್ಣನು ಹೇಳುತ್ತಾನೆ : ''ನಮ್ಮೆಲ್ಲರಿಗೂ ಎಷ್ಟೋ ಜನ್ಮಗಳು ಆಗಿಹೋಗಿವೆ; ನಾನು ಸರ್ವಜ್ಞನಾದ ಪರಮೇಶ್ವರನಾದ್ದರಿಂದ ಅದೆಲ್ಲವನ್ನೂ ಬಲ್ಲೆನು, ನೀನರಿಯೆ. ನಿಜವಾಗಿ ನೋಡಿದರೆ ನನಗೆ ಜನ್ಮಗಳೂ ಇಲ್ಲ, ಕರ್ಮಗಳ ಕಟ್ಟೂ ಇಲ್ಲ. ಆದರೂ ಧರ್ಮವನ್ನು ಉದ್ಧಾರಮಾಡಿ ಸಾಧುಜನರನ್ನು ರಕ್ಷಿಸುವದಕ್ಕಾಗಿ ನನ್ನ ಮಾಯೆಯಿಂದ ಆಗಾಗ್ಗೆ ಅವತರಿಸುತ್ತಿರುವೆನು. ಈ ನನ್ನ ಅವತಾರದ ರಹಸ್ಯವನ್ನು ಯಾವನು ತಿಳಿದುಕೊಳ್ಳುವನೋ ಅವನು ಜನ್ಮರಹಿತನಾದ ನನ್ನ ಸ್ವರೂಪವನ್ನೇ ಪಡೆಯುವನು.''

೧೦–೧೫. ಹೀಗೆ ಅನೇಕರು ಜ್ಞಾನವೈರಾಗ್ಯಸಂಪನ್ನರಾಗಿ ನನ್ನ ಸ್ವರೂಪವನ್ನು ಪಡೆದಿರುತ್ತಾರೆ. ಇಂಥ ಸ್ವರೂಪಪ್ರಾಪ್ತಿಯನ್ನು ಎಲ್ಲರಿಗೂ ಕೊಡುವದಕ್ಕೆ ನಾನು ಸಿದ್ಧನಾಗಿದ್ದರೂ ಜನರು ವರ್ಣಾಶ್ರಮಕರ್ಮಗಳನ್ನು ಮಾಡಿ ಅವುಗಳ ಫಲವನ್ನು ಪಡೆಯುವದಕ್ಕೇ ಬಹುವಾಗಿ ಯತ್ನಿಸುವರು. ಏಕೆಂದರೆ ಕರ್ಮಫಲವು ಬೇಗ ದೊರೆಯುತ್ತದೆ. ಚಾತುರ್ವರ್ಣ್ಯದ ವಿಭಾಗವು ನನ್ನಿಂದಲೇ ಆಗಿರುತ್ತದೆ. ಆದರೂ ಅದನ್ನು ಸೃಷ್ಟಿಸಿರುವೆನೆಂಬ ಅಭಿಮಾನವು ನನಗಿರುವದಿಲ್ಲವಾದ್ದರಿಂದ ಈ ಸೃಷ್ಟಿಕರ್ಮವು ನನಗೆ ಬಂಧಕವಾಗಿರುವದಿಲ್ಲ. ಹೀಗೆಂದು ತಿಳಿದುಕೊಂಡವರಿಗೂ ಕರ್ಮದ ಬಂಧಗಳು ಆಗುವದಿಲ್ಲ. ಹೀಗೆಂದು ತಿಳಿದುಕೊಂಡೇ ಹಿಂದಿನ ಮುಮುಕ್ಷುಗಳು ಕರ್ಮವನ್ನು ಮಾಡಿರುತ್ತಾರೆ. ಆದ್ದರಿಂದ ನೀನು ಈ ತಿಳಿವಳಿಕೆಯಿಂದ ಕೂಡಿ ಕರ್ಮವನ್ನು ಮಾಡು.

೧೬–೧೯. ಕರ್ಮವೆಂದರೆ ಯಾವದು ? ಅಕರ್ಮವೆಂದರೆ ಯಾವದು? ಎಂಬುದನ್ನು ತಿಳಿದುಕೊಳ್ಳುವದು ಪಂಡಿತರಿಗೂ ಸುಲಭವಲ್ಲ. ಇದನ್ನು ತಿಳಿದುಕೊಳ್ಳುವದು ಅತ್ಯವಶ್ಯವಾಗಿದೆ. ಆದ್ದರಿಂದ ಇದರ ತತ್ತ್ವವನ್ನು ಹೇಳುವೆನು ಕೇಳು. ಜನರು 'ನಾವು ಕರ್ಮಗಳನ್ನು ಮಾಡುವವರು' ಎಂದು ತಿಳಿದುಕೊಂಡಿರುತ್ತಾರಷ್ಟೆ ? ಆದರೆ ನಿಜವಾಗಿ ಅವರ ನಿಜಸ್ವರೂಪದಲ್ಲಿ ಯಾವ ಕರ್ತೃತ್ವವೂ ಇರುವದಿಲ್ಲ.ನಾವು ಕರ್ಮವನ್ನು ಮಾಡುತ್ತೇವೆಂದು ತಿಳಿಯುವದು ತಪ್ಪು. ಇದರಂತೆ ಏನೂ ಮಾಡದೆ ಸುಮ್ಮನೆ ಕುಳಿತಿದ್ದರೆ ಅದೇ ಅಕರ್ಮವೆಂದು ಭಾವಿಸುವದೂ ತಪ್ಪು. ಏಕೆಂದರೆ 'ಸುಮ್ಮನೆ ಕುಳಿತಿದ್ದೇನೆ' ಎಂಬ ಭಾವನೆಯಲ್ಲಿ ಅಹಂಕಾರದ ಸಂಬಂಧವಿರುವದರಿಂದ ಸುಮ್ಮನಿರುವದೆಂಬುದೂ ಒಂದು ಬಗೆಯ ಕರ್ಮವೇ ಆಗಿರುತ್ತದೆ. ಹೀಗೆ ಜನರು ಕರ್ಮವನ್ನು ಅಕರ್ಮವೆಂದೂ ಅಕರ್ಮವನ್ನು ಕರ್ಮವೆಂದೂ ತಿಳಿದುಕೊಂಡಿರುವದರಿಂದ ಬುದ್ಧಿವಂತನಾದ ವನು ಈ ತಿಳಿವಳಿಕೆಯನ್ನು ಮಾರ್ಪಡಿಸಿ ಸರಿಯಾಗಿ ತಿಳಿದುಕೊಳ್ಳಬೇಕು, ಅಂಥವನು ಕೃತಕೃತ್ಯನಾಗುವನು. ಅವನು ಮಾಡುವ ಕರ್ಮಗಳಿಗೆ ಬುಡದಲ್ಲಿ ಕಾಮವಾಗಲಿ ಸಂಕಲ್ಪವಾಗಲಿ ಇರುವದಿಲ್ಲ. ಜ್ಞಾನವೆಂಬ ಅಗ್ನಿಯಿಂದ ಅವನ ಕರ್ಮಗಳು ಸುಟ್ಟುಹೋಗಿರುವದರಿಂದ ಮುಂದೆ ಅವು ತಮ್ಮತಮ್ಮ ಫಲವನ್ನು ಕೊಡಲಾರವು.

೨೦–೨೪. ಯಾವನು ಕರ್ಮವನ್ನು ಮಾಡುತ್ತಿದ್ದು ಈ ತಿಳಿವಳಿಕೆಯನ್ನು ಸಂಪಾದಿಸಿಕೊಳ್ಳುವನೋ ಅವನು ಕರ್ಮವನ್ನು ಮೊದಲಿನಂತೆಯೇ ಲೋಕ ಸಂಗ್ರಹಕ್ಕಾಗಿ ಮಾಡುತ್ತಲೇ ಇದ್ದರೂ ಇರಬಹುದು. ಆ ಸಂದರ್ಭದಲ್ಲಿ ಅವನು ನಿಜವಾಗಿ ಕರ್ಮವನ್ನು ಮಾಡಿದವನಾಗುವದಿಲ್ಲ. ಏಕೆಂದರೆ ಜ್ಞಾನದೃಷ್ಟಿ ಯಿಂದ ಅವನ ಕರ್ಮವು ಅಕರ್ಮವೇ ಆಗಿರುತ್ತದೆ. ಯಾವನು ಕರ್ಮದಲ್ಲಿ ತೊಡಗುವದಕ್ಕೆ ಮೊದಲೇ ಈ ಜ್ಞಾನವನ್ನು ಸಂಪಾದಿಸಿಕೊಳ್ಳುವನೋ ಅವನಂತೂ ಆ ಬಳಿಕ ಯಾವ ಕರ್ಮವನ್ನೂ ಮಾಡುವದಕ್ಕೆ ಬಯಸುವದಿಲ್ಲ. ಅವನು ಸಕಲಕರ್ಮಗಳನ್ನೂ ಬಿಟ್ಟು ಸಂನ್ಯಾಸಿಯಾಗಿ ಶರೀರಸ್ಥಿತಿಗೆ ಬೇಕಾದಷ್ಟು ಮಟ್ಟಿನ ಕರ್ಮವನ್ನು ಮಾಡಿಕೊಂಡಿರುವನು. ಅವನಿಗೆ ತಾನು ಮಾಡುವ ಕರ್ಮದ ಲೇಪವೂ ಇರುವದಿಲ್ಲ. ಜ್ಞಾನಿಯ ದೃಷ್ಟಿಯಿಂದ ಅವನಲ್ಲಿ ಯಾವ ಕರ್ಮವೂ ಇರುವದಿಲ್ಲ. ಉಳಿದವರ ದೃಷ್ಟಿಯಿಂದ ಅವನು ಕರ್ಮವನ್ನು

ಮಾಡುವಂತೆ ತೋರಿದರೂ ಅದರಿಂದ ಅವನಿಗೆ ಯಾವ ಫಲವೂ ಆಗುವಂತಿಲ್ಲ. ಏಕೆಂದರೆ ನಿಜವಾಗಿ ಕರ್ಮವು ಬ್ರಹ್ಮವೇ ಆಗಿರುವದು ; ಇದೇ ಜ್ಞಾನಿಯ ದೃಷ್ಟಿ.

೨೫–೩೩. ಲೋಕದಲ್ಲಿ ದೇವತೆಗಳನ್ನು ಕುರಿತು ಯಜ್ಞವನ್ನು ಮಾಡುವವರು ಕೆಲವರು. ಬ್ರಹ್ಮವಿಷಯದ ಜ್ಞಾನವೆಂಬ ಯಜ್ಞವನ್ನು ಮಾಡುವವರು ಕೆಲವರು, ಜ್ಞಾನಯಜ್ಞವನ್ನು ಬಿಟ್ಟು ಉಳಿದ ಯಜ್ಞಗಳು ಬಗೆಬಗೆಯಾಗಿರುವವು. ಹೇಗೆಂದರೆ ಕೆಲವರು ಇಂದ್ರಿಯಗಳನ್ನು ಬಿಗಿಹಿಡಿಯುವರು ; ಇದು **ಸಂಯಮಯಜ್ಞ**. ಕೆಲವರು ಯೋಗ್ಯವಾದ ವಿಷಯಗಳನ್ನು ಮಾತ್ರ ಇಂದ್ರಿಯಗಳಿಂದ ಸೇವಿಸುವರು ; ಇದು ಇಂದ್ರಿಯಯಜ್ಞ. ಕೆಲವರು ಮನಸ್ಸನ್ನು ಸ್ವಾಧೀನದಲ್ಲಿಟ್ಟುಕೊಂಡು ಇಂದ್ರಿಯಕರ್ಮಗಳನ್ನೂ ಪ್ರಾಣಕರ್ಮಗಳನ್ನೂ ಹಿಡಿತದಲ್ಲಿಟ್ಟುಕೊಳ್ಳುವರು ; ಇದು **ಆತ್ಮಸಂಯಮಯಜ್ಞ**. ಕೆಲವರು ಕೃಚ್ಛ್ರಚಾಂದ್ರಾಯಣಾದಿಗಳನ್ನು ಮಾಡುವರು ; ಇದು **ತಪೋಯಜ್ಞ**. ಕೆಲವರು ವೇದವನ್ನು ನಿಯಮದಿಂದ ಅಧ್ಯಯನಮಾಡುವರು. ಇದು **ಸ್ವಾಧ್ಯಾಯಯಜ್ಞ**. ಕೆಲವರು ಉಸಿರನ್ನು ಹಿಡಿದು ರೇಚಕ, ಪೂರಕ, ಕುಂಭಕ – ಇವನ್ನು ಮಾಡುವರು ; ಇದು **ಪ್ರಾಣಾಯಾಮಯಜ್ಞ**. ಯಾವ ಯಜ್ಞವನ್ನೇ ಮಾಡಲಿ, ಯಜ್ಞದಿಂದ ಪಾಪನಿವೃತ್ತಿಯಾಗುವದು. ಯಜ್ಞವನ್ನು ಮಾಡುತ್ತಿರುವವರು ತಿನ್ನುವ ಆಹಾರವು ಅಮೃತವೆನಿಸುವದು. ಮನುಷ್ಯನಾದವನು ಯಾವದಾದರೊಂದು ಯಜ್ಞವನ್ನು ಮಾಡುತ್ತಲೇ ಇರಬೇಕು. ಇಲ್ಲದಿದ್ದರೆ ಅವನಿಗೆ ಈ ಲೋಕದ ಸುಖವಾಗಲಿ ಪರಲೋಕದ ಸುಖವಾಗಲಿ ದಕ್ಕಲಾರದು. ಆದರೆ ಈ ಯಜ್ಞಗಳೆಲ್ಲ ಕರ್ಮಮಯವಾಗಿರುವವು ; ಜ್ಞಾನಯಜ್ಞವೊಂದು ಮಾತ್ರ ಕರ್ಮವನ್ನು ಮೀರಿರುವದು. ಇದನ್ನು ತಿಳಿದವನು ಮುಕ್ತನಾಗುತ್ತಾನೆ. ಮುಕ್ತಿಯ ಆನಂದದಲ್ಲಿ ಎಲ್ಲಾ ಆನಂದಗಳೂ ಸೇರಿರುವದರಿಂದ ಜ್ಞಾನಯಜ್ಞದ ಫಲದಲ್ಲಿ ಎಲ್ಲಾ ಕರ್ಮಗಳ ಫಲಗಳೂ ಅಡಕವಾಗಿರುತ್ತವೆ. ಆದ್ದರಿಂದ ದ್ರವ್ಯಮಯವಾದ ಯಜ್ಞಕ್ಕಿಂತ ಜ್ಞಾನಯಜ್ಞವೇ ಹೆಚ್ಚಿನದು.

೩೪–೩೯. ಈ ಯಜ್ಞವು ದೊರೆಯುವದಕ್ಕೆ ಸಾಧನವೇನೆಂದರೆ ತತ್ತ್ವವನ್ನು ತಿಳಿದು ಇದರಲ್ಲಿಯೇ ನಿಷ್ಠರಾಗಿರುವ ಸದ್ಗುರುಗಳ ಬಳಿಗೆ ಹೋಗಿ

ದಂಡಪ್ರಣಾಮಮಾಡಿ ಅವರನ್ನು ಶುಶ್ರೂಷೆಮಾಡುತ್ತಾ ತತ್ತ್ವವನ್ನು ಕುರಿತ ಪ್ರಶ್ನೆಯನ್ನು ಮಾಡಿ ಅವರಿಂದ ಸರಿಯಾದ ಉತ್ತರವನ್ನು ಪಡೆದುಕೊಳ್ಳಬೇಕು. ಬರಿಯ ನಮಸ್ಕಾರವೇ ಮುಂತಾದ ಹೊರಗಿನ ಸಾಧನಗಳೇ ಸಾಲದು. ಮುಖ್ಯವಾಗಿ ಶ್ರದ್ಧೆಯೂ ಜ್ಞಾನದಲ್ಲಿಯೇ ತಾತ್ಪರ್ಯವೂ ಇಂದ್ರಿಯನಿಗ್ರಹವೂ ಇರಬೇಕು. ಇವುಗಳಿಂದ ಕೂಡಿದಾತನು ಗುರುಗಳ ಉಪದೇಶದಿಂದ ಪಡೆದುಕೊಂಡ ಜ್ಞಾನದಿಂದ ಭ್ರಾಂತಿಯೆಲ್ಲವೂ ತೊಲಗುವದು. 'ಸರ್ವಭೂತಗಳಿಗೂ ಆತ್ಮನಾಗಿರುವ ಪರಮೇಶ್ವರನೇ ನನ್ನ ಆತ್ಮನು' ಎಂಬ ಉದಾತ್ತವಾದ ಉಪನಿಷತ್ತತ್ತ್ವವು ಮನಸ್ಸಿನಲ್ಲಿ ನಾಟಿ ಸಕಲಧರ್ಮಾಧರ್ಮಗಳೂ ಈ ಜ್ಞಾನದಿಂದ ಸುಟ್ಟು ಬೂದಿಯಾಗುವವು. ಅವನಿಗೆ ಸಕಲವಿಧವಾದ ಸಂಸಾರಬಂಧದಿಂದಲೂ ಬಿಡುಗಡೆಯಾಗುವದು.

೪೦–೪೨. ತತ್ತ್ವವನ್ನು ತಿಳಿದುಕೊಳ್ಳದೆ ಗುರುವಾಕ್ಯದಲ್ಲಿಯೂ ಶಾಸ್ತ್ರದಲ್ಲಿಯೂ ಶ್ರದ್ಧೆಯಿಲ್ಲದೆ ಜ್ಞಾನದಿಂದ ಮೋಕ್ಷವಾದೀತೊ, ಇಲ್ಲವೊ ?– ಎಂದು ಸಂಶಯಪಡುತ್ತಿರುವವನು ಹಾಳಾಗುವನು. ಸಂಶಯವುಳ್ಳವನಿಗೆ ಈ ಲೋಕದ ವ್ಯವಹಾರದ ಫಲವಾದ ಸುಖವೇ ಆಗುವಹಾಗಿಲ್ಲ. ಇನ್ನು ಪರಲೋಕದ ಸುಖವು ಹೇಗೆ ದಕ್ಕೀತು ? ಆದರೆ ಜ್ಞಾನದಿಂದ ಸಂಶಯಗಳನ್ನೆಲ್ಲ ತೊಲಗಿಸಿಕೊಂಡು ಪರಮಾರ್ಥದರ್ಶನವೆಂಬ ಯೋಗದಿಂದ ಸಕಲಕರ್ಮಗಳನ್ನೂ ಮೀರಿ ಅಜ್ಞಾನವೆಂಬ ನಿದ್ರೆಗೆ ಬೀಳದೆ ಎಚ್ಚರವಾಗಿರುವವನನ್ನು ಕರ್ಮಗಳು ಎಂದಿಗೂ ಬಾಧಿಸಲಾರವು. ನಿನಗೆ ಆತ್ಮನ ವಿಷಯವಾಗಿ ಈಗ ಬಂದಿರುವ ಸಂಶಯವು ಅಜ್ಞಾನದಿಂದ ಉಂಟಾಗಿರುತ್ತದೆ. ಆದ್ದರಿಂದ ಜ್ಞಾನವೆಂಬ ಕತ್ತಿಯಿಂದ ಇದನ್ನು ಕತ್ತರಿಸಿಹಾಕು. ಆ ಜ್ಞಾನಕ್ಕೆ ಉಪಾಯವಾದ ಯೋಗವನ್ನು ಮಾಡು, ಪ್ರಕೃತಕ್ಕೆ ಯುದ್ಧವನ್ನು ಮಾಡು, ಏಳು.

# ಐದನೆಯ ಅಧ್ಯಾಯ

೧–೩. ''ಕರ್ಮಗಳನ್ನು ಮಾಡಬೇಕೆಂದು ಒಮ್ಮೆ, ಬಿಡಬೇಕೆಂದು ಒಮ್ಮೆ ಹೇಳುತ್ತಿರುವೆಯಲ್ಲವೆ ! ಇವೆರಡರಲ್ಲಿ ನನಗೆ ಯಾವದು ಶ್ರೇಯಸ್ಸಿಗೆ ಸಾಧನವೋ ನಿಶ್ಚಯಿಸಿ ಹೇಳಿಬಿಡು'' ಎಂದು ಅರ್ಜುನನು ಕೇಳಲು ಭಗವಂತನಿಂತೆಂದನು : ''ಸಂನ್ಯಾಸವೂ ಕರ್ಮಯೋಗವೂ ಎರಡೂ ಮೋಕ್ಷಕ್ಕೆ ಬೇಕಾದದ್ದೇ ; ಆದರೆ ಕರ್ಮವನ್ನು ಬಿಡುವದಕ್ಕಿಂತ ಮಾಡುವದೇ ಮೇಲು. ಅದೇಕೆಂದರೆ : ರಾಗದ್ವೇಷಗಳಿಲ್ಲದೆ ಕರ್ಮವನ್ನು ಮಾಡುವವನು ನಿತ್ಯ ಸಂನ್ಯಾಸಿಯು. ಅವನಿಗೆ ಬಂಧವು ಸುಲಭವಾಗಿ ಕಳಚಿಹೋಗುವದು.

೪–೭. ಕರ್ಮಕ್ಕೆ ಸಮಬುದ್ಧಿಯೇ ಮುಂತಾದವು ಸೇರಿದರೆ ಅದಕ್ಕೆ 'ಯೋಗ'ವೆಂದು ಹೆಸರು ; ಸಂನ್ಯಾಸಕ್ಕೆ ಜ್ಞಾನವೇ ಮುಂತಾದವು ಸೇರಿದರೆ 'ಸಾಂಖ್ಯ'ವೆಂದು ಹೆಸರು. ಮೋಕ್ಷಕ್ಕೆ ಇವೆರಡೂ ಸ್ವತಂತ್ರವಾದ ಮಾರ್ಗಗಳಲ್ಲ; ಇವುಗಳಲ್ಲಿ ಯಾವದೊಂದನ್ನು ಚೆನ್ನಾಗಿ ನಡೆಸಿದರೂ ಎರಡಕ್ಕೂ ಫಲವಾದ ಮೋಕ್ಷವು ದೊರೆತೇ ದೊರೆಯುವದು. ಆದರೂ ನಿಜವಾದ ಸಂನ್ಯಾಸವೆಂಬುದು ಯೋಗವಿಲ್ಲದೆ ದಕ್ಕುವದಿಲ್ಲ. ಯೋಗದಿಂದ ಚಿತ್ತಶುದ್ಧಿಯನ್ನು ಪಡೆದವನು ಜಿತೇಂದ್ರಿಯನಾಗಿ ಎಲ್ಲರ ಆತ್ಮನೇ ತನ್ನ ಆತ್ಮನೆಂಬ ಜ್ಞಾನವನ್ನು ಪಡೆದು ನಿಷ್ಕರ್ಮವಾದ ಬ್ರಹ್ಮವನ್ನೇ ಪಡೆಯುವನು. ಆದ್ದರಿಂದ ಕರ್ಮಯೋಗಿಗಾಗಲಿ ಜ್ಞಾನಿಗಾಗಲಿ ಕರ್ಮವು ಬಂಧಕವಾಗುವದಿಲ್ಲ.

೮–೧೨. ನಿಜವಾಗಿ ನೋಡಿದರೆ ಜ್ಞಾನಿಯು ಯಾವ ಕರ್ಮವನ್ನೂ ಮಾಡುವದಿಲ್ಲ. ವ್ಯವಹಾರದೃಷ್ಟಿಯಿಂದಮಾತ್ರವೇ ಅವನ ದೇಹದಲ್ಲಿ ನಡೆಯುವದು, ನೋಡುವದು, ಕೇಳುವದು – ಮುಂತಾದ ವ್ಯಾಪಾರಗಳಿಗೆ ಕರ್ತೃವಾಗುವನು. ಅವನು 'ನಾನು ಯಾವ ಕರ್ಮವನ್ನೂ ಮಾಡುತ್ತಿಲ್ಲ' ಎಂದು ಅರಿತಿರುವನು. ಇನ್ನು ಅವನಿಗೆ ಕರ್ಮಲೇಪವೆಂಬುದೆಲ್ಲಿಂದ ಬಂತು ? ಕರ್ಮಯೋಗಿಯೊ, ಎಂದರೆ ಅವನು ತಾನು ಮಾಡುವ ಕರ್ಮಗಳನ್ನೆಲ್ಲ ಈಶ್ವರನಲ್ಲಿ ಅರ್ಪಿಸಿ ಸಂಗರಹಿತನಾಗಿ ಮಾಡುತ್ತಿರುವದರಿಂದ ಅವನಿಗೂ ಕರ್ಮವು ಬಂಧಕವಾಗುವದಿಲ್ಲ. ಅವನ ಕರ್ಮಕ್ಕೆ ಚಿತ್ತಶುದ್ಧಿಯೊಂದೇ ಫಲವಾಗುವದು ;

ಅದರಿಂದ ಜ್ಞಾನವಾಗಿ ಮುಕ್ತಿಯೂ ಆಗುವದು. ಕರ್ಮದ ಫಲದಲ್ಲಿ ಆಶೆಯುಳ್ಳವನು ಮಾತ್ರ ಸಂಸಾರಕ್ಕೆ ಕಟ್ಟುಬೀಳುತ್ತಾನೆ.

೧೩–೧೫. ಜ್ಞಾನಿಯಾದವನಿಗೆ ಕರ್ಮವೇ ಇರುವದಿಲ್ಲವೆಂದು ಹೇಳಿದೆನಲ್ಲವೆ ? ಅವನ ಮನಃಸ್ಥಿತಿಯನ್ನು ಹೇಳುವೆನು ಕೇಳು : ಉಳಿದವರ ಹಾಗೆ ಅವನು ತಾನು ದೇಹವೆಂದು ತಿಳಿದುಕೊಂಡಿರುವದಿಲ್ಲ. ತಾನು ಏನನ್ನೂ ಮಾಡದ, ಮತ್ತೊಬ್ಬರಿಂದ ಏನನ್ನೂ ಮಾಡಿಸದ ಅಸಂಗನಾದ ಆತ್ಮನೇ ಎಂದು ಅರಿತುಕೊಂಡಿರುತ್ತಾನೆ. ಆದ್ದರಿಂದ ಅವನೇ ಪರಮಾರ್ಥಸಂನ್ಯಾಸಿ ಎಂದರೆ ಕರ್ಮಗಳನ್ನೆಲ್ಲ ನಿಜವಾಗಿ ಬಿಟ್ಟವನು. ನಿಜವಾಗಿ ಕರ್ತೃತ್ವವು ಯಾರಿಗೂ ಇರುವದೇ ಇಲ್ಲ. ಆದರೆ ಸ್ವಭಾವದಿಂದ ಅಜ್ಞರಾಗಿರುವ ಜನರು ತಾವು ಕರ್ಮವನ್ನು ಮಾಡುವ ಸ್ವರೂಪದವರೆಂದು ಭಾವಿಸಿರುತ್ತಾರೆ. ಪರಮಾರ್ಥದೃಷ್ಟಿಯಲ್ಲಿ ಕ್ರಿಯೆಗೆ ಸಾಧನವಾದ ದ್ರವ್ಯಗಳಿಲ್ಲ, ಅವುಗಳನ್ನು ಅರ್ಪಿಸುವದಕ್ಕೆ ಬೇಕಾದ ದೇವತೆಯೂ ಇಲ್ಲ. ಕರ್ಮದಿಂದಾಗಬೇಕಾಗಿರುವ ಫಲವೂ ಇಲ್ಲ. ಇವೆಲ್ಲವೂ ನಿಷ್ಕರ್ಮವಾದ ಬ್ರಹ್ಮವೇ.

೧೬–೨೧. ಜ್ಞಾನಿಗಳು ಆತ್ಮಸ್ವರೂಪವನ್ನರಿತುಕೊಂಡು ಅವನಲ್ಲಿಯೇ ನೆಟ್ಟಮನಸ್ಸುಳ್ಳವರಾಗಿರುವರು. ಅವರಿಗೆ ಆತ್ಮನಿಗಿಂತ ಹೆಚ್ಚಿನ ಪದಾರ್ಥವು ಯಾವದೂ ಇರುವದಿಲ್ಲ. ಲೋಕದಲ್ಲಿ ಗುಣಗಳ ಭೇದದಿಂದ ತೋರುವ ಸಾತ್ತ್ವಿಕರಾಜಸತಾಮಸಜೀವರೆಲ್ಲ ಅವರ ದೃಷ್ಟಿಯಲ್ಲಿ ಪರಬ್ರಹ್ಮರೂಪರಾಗಿಯೇ ತೋರುತ್ತಿರುವರು. ಹೀಗೆ ಎಲ್ಲವನ್ನೂ ಒಂದೇ ಬಗೆಯಾಗಿ ಕಂಡದ್ದರಿಂದ ಹೆಚ್ಚಾದವರನ್ನು ಕಡಿಮೆಯಾಗಿ ಕಂಡ ದೋಷವಾಗಲಿ, ಕಡಿಮೆಯವರನ್ನು ಮೇಲಕ್ಕೇರಿಸಿದ ದೋಷವಾಗಲಿ– ಅವರಿಗೆ ತಟ್ಟುವದಿಲ್ಲ. ಏಕೆಂದರೆ ನಿರ್ದೋಷವಾದ ಬ್ರಹ್ಮವೇ ಸಕಲಜೀವರ ರೂಪದಿಂದಲೂ ತಮ್ಮ ರೂಪದಿಂದಲೂ ಇರುವದೆಂಬ ತತ್ತ್ವವನ್ನು ಅವರು ಕಂಡುಕೊಂಡಿರುವರು. ಇಂಥ ಜ್ಞಾನದಿಂದ ಕಂಡದ್ದೆಲ್ಲ ಬ್ರಹ್ಮವೇ ಆಗಿರುವದರಿಂದ ಅವರಿಗೆ ಪ್ರಿಯವಾದದ್ದನ್ನು ಕಂಡು ಹಿಗ್ಗುವ, ಅಥವಾ ಅಪ್ರಿಯವಾದದ್ದನ್ನು ಕಂಡು ತಗ್ಗುವ ಸಂಭವವೇ ಇಲ್ಲ. ಅವರಿಗೆ ಸುಖವೆಂದರೆ ಆತ್ಮನೇ. ಆ ಸುಖಕ್ಕೆ ನಾಶವೇ ಇಲ್ಲ.

೨೨–೨೪. ಆದ್ದರಿಂದ ಜ್ಞಾನಿಯಾದವನು ವಿಷಯಗಳ ಸುಖವೆಲ್ಲ ದುಃಖಕ್ಕೆ ಕಾರಣವೆಂದರಿತು ಇಂದ್ರಿಯಗಳನ್ನು ವಿಷಯಗಳಿಂದ ಹಿಮ್ಮೆಟ್ಟಿಸಿಕೊಳ್ಳಬೇಕು. ಶರೀರವಿರುವವರೆಗೂ ಕಾಮಕ್ರೋಧಗಳ ಹುಯ್ಲಿಗೆ ಸಿಕ್ಕದಂತೆ ಎಚ್ಚರವಾಗಿರಬೇಕು. ಯಾವನು ಹೀಗೆ ವಿಷಯಗಳಿಂದ ಮನಸ್ಸನ್ನು ಹಿಡಿದೆಳೆದು ಆತ್ಮನಲ್ಲಿಯೇ ಪ್ರೀತಿಯಿಟ್ಟು ಆತ್ಮನೇ ತನ್ನ ಸರ್ವವ್ಯವಹಾರಕ್ಕೂ ಬೆಳಕೆಂದೂ ಆತ್ಮನೇ ತನ್ನ ಸುಖವೆಂದೂ ನಂಬುವನೋ ಅವನು ಬದುಕಿರುವಾಗಲೇ ಬ್ರಹ್ಮವಾಗಿದ್ದು ಬಳಿಕ ಬ್ರಹ್ಮವನ್ನೇ ಹೊಂದುವನು.

೨೫–೨೬. ಮುಕ್ತಿಯನ್ನು ಪಡೆಯಬೇಕೆಂಬವನು ಪಾಪವನ್ನೆಲ್ಲ ತೊಳೆದುಕೊಳ್ಳಬೇಕು. ವಿಚಾರದಿಂದ ಸಂಶಯಗಳನ್ನೆಲ್ಲ ತೊಲಗಿಸಿಕೊಳ್ಳಬೇಕು. ಇಂದ್ರಿಯಗಳನ್ನು ಹಿಡಿತದಲ್ಲಿಟ್ಟುಕೊಂಡಿರಬೇಕು. ಸಕಲಪ್ರಾಣಿಗಳಿಗೂ ಹಿತವನ್ನೇ ಕೋರುತ್ತಿರಬೇಕು. ಕಾಮಕ್ರೋಧಗಳನ್ನು ಗೆದ್ದ ಇಂಥ ಆತ್ಮಜ್ಞಾನಿಗಳಿಗೆ ಈ ಲೋಕದಲ್ಲಿಯೂ ಮುಕ್ತಿಯೇ, ಪರಲೋಕದಲ್ಲಿಯೂ ಮುಕ್ತಿಯೇ.

೨೭–೨೯. ಇಂಥ ಜ್ಞಾನಕ್ಕೆ ಧ್ಯಾನಯೋಗವೇ ತೀರ ಹತ್ತಿರದ ಸಾಧನವು. ಧ್ಯಾನಯೋಗಿಯು ಹೊರಗಿನ ವಿಷಯವನ್ನು ಕುರಿತು ಚಿಂತಿಸದೆ, ಶರೀರವನ್ನು ಸ್ವಾಧೀನದಲ್ಲಿಟ್ಟುಕೊಂಡು ಪ್ರಾಣಾಯಾಮವನ್ನು ಮಾಡುತ್ತಾ ಇಂದ್ರಿಯಮನೋಬುದ್ಧಿಗಳನ್ನು ಹಿಡಿತದಲ್ಲಿಟ್ಟುಕೊಂಡು ಇಚ್ಛಾಭಯಕ್ರೋಧಗಳನ್ನು ಗೆದ್ದುಕೊಳ್ಳಬೇಕು. ಹೀಗೆ ಧ್ಯಾನವನ್ನು ಮಾಡುತ್ತಿದ್ದರೆ 'ಪರಮಾತ್ಮನೇ ಯಜ್ಞಾದಿಕರ್ಮಗಳನ್ನು ಕರ್ತೃರೂಪದಿಂದ ಮಾಡುವವನು, ದೇವತಾರೂಪದಿಂದ ಅವನೇ ಅದನ್ನು ಅನುಭವಿಸುವವನು, ಸರ್ವಲೋಕಗಳಿಗೂ ಒಡೆಯನು ; ಅವನೇ ಎಲ್ಲಾ ಪ್ರಾಣಿಗಳ ಹೃದಯದಲ್ಲಿದ್ದುಕೊಂಡು ಕರ್ತೃತ್ವಭೋಕ್ತೃತ್ವಗಳಿಗೂ ಅರಿವುಗಳಿಗೂ ಸಾಕ್ಷಿಯಾಗಿರುವವನು'– ಎಂಬ ಜ್ಞಾನವು ಹುಟ್ಟಿ ಶಾಂತಿಯುಂಟಾಗುತ್ತದೆ.

# ಆರನೆಯ ಅಧ್ಯಾಯ

೧–೩. ಶ್ರೀಕೃಷ್ಣನು ಹೇಳಿದ್ದೇನೆಂದರೆ :– ಎಲೈ ಅರ್ಜುನನೆ, ಕರ್ಮ ಫಲವನ್ನು ಬಯಸದೆ ನಿತ್ಯಕರ್ಮವನ್ನು ಮಾಡುತ್ತಿರುವವನೇ ಸಂನ್ಯಾಸಿಯು, ಅವನೇ ಯೋಗಿಯು. ಗಾರ್ಹಪತ್ಯವೇ ಮುಂತಾದ ಅಗ್ನಿಗಳನ್ನೂ, ಅಗ್ನಿಗಳನ್ನು ಬಯಸದ ತಪಸ್ಸು, ದಾನ – ಮುಂತಾದ ಕ್ರಿಯೆಗಳನ್ನೂ ಬಿಟ್ಟವನು ಮಾತ್ರ ಸಂನ್ಯಾಸಿಯೆಂದೂ ಯೋಗಿಯೆಂದೂ ತಿಳಿಯಬೇಡ. ಸಂಕಲ್ಪಗಳನ್ನು ಬಿಡದವನು ಯಾವನೂ ಸಂನ್ಯಾಸಿಯಾಗಲಾರನಾದ್ದರಿಂದ ಫಲತ್ಯಾಗಪೂರ್ವಕ ವಾಗಿ ಮಾಡುವ ಕರ್ಮವು ಸಂನ್ಯಾಸವೆಂದೇ ತಿಳಿಯಬೇಕು. ಧ್ಯಾನಯೋಗಕ್ಕೆ ತಕ್ಕ ಯೋಗ್ಯತೆಯನ್ನು ಸಂಪಾದಿಸಬೇಕೆನ್ನುವವರಿಗೆ ಕರ್ಮವೇ ಸಾಧನವು. ಧ್ಯಾನಯೋಗಕ್ಕೆ ತಕ್ಕವನಾದಮೇಲೆ ನಿಜವಾಗಿ ಯೋಗಾರೂಢನೆನಿಸಿಕೊಳ್ಳು ವದಕ್ಕೆ ಸಂನ್ಯಾಸವೇ ಸಾಧನವು.

೪–೯. ಶಬ್ದಸ್ಪರ್ಶಾದಿವಿಷಯಗಳಲ್ಲಾಗಲಿ ನಿತ್ಯನೈಮಿತ್ತಿಕಾದಿಕರ್ಮ ಗಳಲ್ಲಾಗಲಿ ಸಂಗವುಂಟಾಗದಂತೆ ಸರ್ವಸಂಕಲ್ಪಗಳನ್ನೂ ಬಿಟ್ಟವನು ಯೋಗಾ ರೂಢನೆನಿಸುವನು. ವಿವೇಕಿಯಾದವನು ಹೇಗಾದರೂ ಮಾಡಿ ಯೋಗಾ ರೂಢನಾಗಿ ಸಂಸಾರದ ಅನರ್ಥದಿಂದ ತನ್ನನ್ನುತಾನು ಉದ್ಧಾರಮಾಡಿಕೊಳ್ಳ ಬೇಕು. ಇಲ್ಲದಿದ್ದರೆ ತನಗೆತಾನೇ ಅನ್ಯಾಯವನ್ನು ಮಾಡಿಕೊಂಡವನಾಗುವನು. ದೇಹೇಂದ್ರಿಯಗಳನ್ನು ವಶದಲ್ಲಿಟ್ಟುಕೊಂಡು ಶಾಸ್ತ್ರಜ್ಞಾನವನ್ನೂ ಅದರಂತೆ ಅನುಭವವನ್ನೂ ಹೊಂದಿ ಹೊರಗೆ ಕಾಣುವ ವಿಷಯಗಳಲ್ಲಿಯೂ ಶತ್ರುಮಿತ್ರಾದಿಗಳೆಂಬ ಬಗೆಬಗೆಯ ಜನರಲ್ಲಿಯೂ ಸಮಬುದ್ಧಿಯುಳ್ಳವನಾಗಿ ಮನಸ್ಸಿನಲ್ಲಿ ಏರುಪೇರಿಲ್ಲದವನೇ ಯೋಗಾರೂಢನು, ಯುಕ್ತನು.

೧೦–೧೭. ಇಂಥ ಉತ್ತಮಸ್ಥಿತಿಯನ್ನು ಹೊಂದುವದಕ್ಕಾಗಿ ರಹಸ್ಯದಲ್ಲಿ ಒಬ್ಬನೇ ಇದ್ದುಕೊಂಡು ದೇಹೇಂದ್ರಿಯಮನಸ್ಸುಗಳನ್ನು ಹಿಡಿತದಲ್ಲಿಟ್ಟುಕೊಂಡು ಯೋಗವನ್ನು ಮಾಡುತ್ತಿರಬೇಕು. ಶುಚಿಯಾದ ಸ್ಥಲದಲ್ಲಿ ಸ್ಥಿರವಾದ ಆಸನವನ್ನು ಅಳವಡಿಸಿಕೊಂಡು ಶರೀರವನ್ನು ನೆಟ್ಟಗೆ ನಿಲ್ಲಿಸಿಕೊಂಡು ಆತ್ಮನಲ್ಲಿಯೇ ಮನಸ್ಸನ್ನು ಇರಿಸಿಕೊಂಡಿರಬೇಕು. ಪರಮಾತ್ಮನನ್ನೇ ತತ್ಪರತೆಯಿಂದ ಚಿಂತಿ

ಸುತ್ತಿರಬೇಕು. ಹೀಗೆ ಯಾವಾಗಲೂ ಯೋಗವನ್ನು ಮಾಡುತ್ತಿರುವವನಿಗೆ ಯೋಗಫಲವಾದ ಪರಮಶಾಂತಿಯು ದೊರಕುತ್ತದೆ. ಸಾಧಕನಾಗಿರುವವನು ಆಹಾರವಿಹಾರಗಳಲ್ಲಿಯೂ ಮಿತವಾಗಿರುವ ನಿಯಮವನ್ನು ಅನುಸರಿಸುತ್ತಿದ್ದರೆ ಯೋಗವು ಫಲಕಾರಿಯಾಗುವದು.

೧೮–೨೬. ಯುಕ್ತನಾದವನಿಗೆ ಚಿತ್ತವು ಆತ್ಮನಲ್ಲಿಯೇ ನಿಂತುಬಿಟ್ಟಿರುತ್ತದೆ. ಆತ್ಮದರ್ಶನದಿಂದ ಅವನ ಮನಸ್ಸು ತೃಪ್ತವಾಗಿರುವದು. ಬ್ರಹ್ಮಾನಂದವನ್ನು ಕಂಡುಕೊಂಡಿರುವ ಆತನು ತತ್ತ್ವವನ್ನು ಬಿಟ್ಟು ಅತ್ತಿತ್ತ ಸರಿಯುವದಿಲ್ಲ, ಅದಕ್ಕಿಂತ ಹೆಚ್ಚಿನ ಲಾಭವೊಂದಿರುವದೆಂದು ಎಣಿಸುವದಿಲ್ಲ. ಹೊರಗಿನ ಎಂಥ ದುಃಖದಿಂದಲೂ ಅಲುಗಾಡದೆ ಇರುವವನು ನಿಶ್ಚಯವಾದ ಮನಸ್ಸಿನಿಂದ ಬೇಸರವಿಲ್ಲದೆ ಪ್ರಯತ್ನಮಾಡುತ್ತಾ ಸಕಲಕಾಮುಗಳನ್ನೂ ತೊರೆದು ಆಯಾ ವಿಷಯಗಳಿಂದ ಇಂದ್ರಿಯಗಳನ್ನು ಜಗ್ಗಿ ಮತ್ತೇನನ್ನೂ ಚಿಂತಿಸದೆ ಆತ್ಮನಲ್ಲಿಯೇ ಮನಸ್ಸನ್ನು ನಿಲ್ಲಿಸುವದಕ್ಕೆ ಹವಣಿಸುತ್ತಿರುವವನು ಮಾತ್ರ ಈ ಸ್ಥಿತಿಯನ್ನು ಪಡೆಯುವನು.

೨೭–೩೨. ಯೋಗವು ಸಿದ್ಧಿಯಾದರೆ ಉತ್ತಮವಾದ ಸುಖವು ವಶವಾಗುವದು, ಬ್ರಹ್ಮವನ್ನು ಮುಟ್ಟಿದಂತಾಗುವದು. 'ಬ್ರಹ್ಮಾದಿಸ್ತಂಬಪರ್ಯಂತವಾದ ಪ್ರಾಣಿಗಳಲ್ಲಿ ಒಬ್ಬ ಪರಮಾತ್ಮನೇ ಇರುವನು. ಅವನೇ ನಾನು' ಎಂಬ ಉತ್ತಮವಾದ ಜ್ಞಾನವು ಬರುವದು. ಅವನಿಗೆ ಪರಮಾತ್ಮದರ್ಶನವು ಎಂದಿಗೂ ತಪ್ಪುವದಿಲ್ಲ. ವ್ಯವಹಾರದಲ್ಲಿ ಸರ್ವಪ್ರಾಣಿಗಳಿಗೂ ತನ್ನಂತೆಯೇ ಸುಖವು ಬೇಕು, ದುಃಖವು ಬೇಡ– ಎಂಬುದು ಮನದಟ್ಟಾಗಿ ಎಲ್ಲರಲ್ಲಿಯೂ ಸಮಬುದ್ಧಿಯು ಏರ್ಪಡುವದು.

೩೩–೩೬. ಮನಸ್ಸು ಅತಿಚಂಚಲವಾಗಿರುವದರಿಂದ ಅದನ್ನು ಹರಿದಾಡದಂತೆ ಆತ್ಮನಲ್ಲಿಯೇ ನಿಲ್ಲಿಸಿಕೊಳ್ಳುವದು ಗಾಳಿಯನ್ನು ಹಿಡಿದು ನಿಲ್ಲಿಸುವ ಪ್ರಯತ್ನದಂತೆ ದುಸ್ತರವಲ್ಲವೆ ?– ಎಂದು ಅರ್ಜುನನು ಕೇಳಿದ್ದಕ್ಕೆ ಭಗವಂತನು ಕೊಟ್ಟ ಉತ್ತರವಿದು : ಮನಸ್ಸನ್ನು ಬಿಗಿಹಿಡಿಯುವದು ಕಷ್ಟವೇ ಸರಿ; ಆದರೆ ಅದನ್ನು ಅಭ್ಯಾಸದಿಂದಲೂ ವೈರಾಗ್ಯದಿಂದಲೂ ವಶಪಡಿಸಿಕೊಳ್ಳಬಹುದು.

೩೭–೪೫. ಯೋಗವನ್ನು ಮಾಡುತ್ತಿರುವವನಿಗೆ ಪೂರ ಸಿದ್ಧಿಯಾಗುವದರೊಳಗೆ ಅವನಿಗೆ ಮರಣವು ಬಂದೊದಗಿದರೆ ಆಗ ಚಿತ್ತವು ಕದಲಿ ಯೋಗ ಭ್ರಷ್ಟನಾಗಬಹುದು. ಈ ಮೊದಲೇ ಯೋಗಿಯು ಕರ್ಮಸಂನ್ಯಾಸವನ್ನು ಮಾಡಿಬಿಟ್ಟಿರುವದರಿಂದ ಕರ್ಮದ ಫಲವೂ ಇಲ್ಲದೆ, ಯೋಗವೂ ಸಿದ್ಧಿಯಾಗದಿರುವದರಿಂದ ಜ್ಞಾನವು ಪ್ರಾಪ್ತವಾಗದೆ, ಅವನು ಮುಂಗಾಣದೆ ಹೋಗಬಹುದಲ್ಲವೆ ? ಅವನಿಗೆ ಎಂಥ ಗತಿಯಾಗುವದು ? ಎಂಬ ಅರ್ಜುನನ ಪ್ರಶ್ನೆಗೆ ಶ್ರೀಕೃಷ್ಣನು ಹೇಳಿದ ಉತ್ತರವೇನೆಂದರೆ : ಅಂಥ ಯೋಗಿಗೆ ಇಹದಲ್ಲಿ ಯೋಗದ ಅಭ್ಯಾಸದಿಂದ ಆಗಿರುವ ಸುಖವುಂಟು ; ಪರದಲ್ಲಿ ಪುಣ್ಯಕರ್ಮಗಳನ್ನು ಮಾಡಿದವರಿಗೆ ಸಿಕ್ಕುವ ಉತ್ತಮಲೋಕಗಳು ದೊರೆಯುವವು. ಮತ್ತೆ ಅವನು ಹುಟ್ಟುವಾಗ ಶುಚಿಯಾಗಿರುವ ಶ್ರೀಮಂತರ ಮನೆಯಲ್ಲಿ ಹುಟ್ಟಿ ಸುಖವನ್ನು ಅನುಭವಿಸುವನು. ಅಥವಾ ಯೋಗಾಭ್ಯಾಸದ ಸಂಸ್ಕಾರವು ಬಲವಾಗಿದ್ದರೆ ಒಳ್ಳೆಯ ವಿವೇಕಿಗಳಾದ ಯೋಗಿಗಳ ಮನೆಯಲ್ಲಿಯೇ ಜನಿಸಿ ಹಿಂದಿನ ಸಂಸ್ಕಾರದಿಂದಲೇ ಯೋಗವನ್ನು ಅಭ್ಯಾಸಮಾಡಿ ಯೋಗಮಾರ್ಗದಲ್ಲಿ ಮುಂದುವರಿಯುತ್ತಾ ತಕ್ಕಷ್ಟು ಪ್ರಯತ್ನವು ಅಳವಟ್ಟಬಳಿಕ ಮುಂದಿನ ಯಾವದಾದರೊಂದು ಜನ್ಮದಲ್ಲಾದರೂ ಯೋಗಸಿದ್ಧಿಯನ್ನು ಹೊಂದಿ ಪರಗತಿಯನ್ನೈದುವನು.

೪೬–೪೭. ಯೋಗಿಯಾದವನು ತಪಸ್ವಿಗಳಿಗಿಂತಲೂ ಹೆಚ್ಚಿನವನು, ಶಾಸ್ತ್ರಜ್ಞಾನವುಳ್ಳವರಿಗಿಂತಲೂ ಹೆಚ್ಚಿನವನು, ಕರ್ಮಿಗಳಿಗಿಂತಲೂ ಹೆಚ್ಚಿನವನು. ಆದ್ದರಿಂದ ಅರ್ಜುನನೆ, ನೀನು ಯೋಗಿಯಾಗುವದಕ್ಕೆ ಪ್ರಯತ್ನಿಸು. ಅದರಲ್ಲಿಯೂ ವಾಸುದೇವನಾದ ನನ್ನನ್ನೇ ಶ್ರದ್ಧೆಯಿಂದ ಭಜಿಸುವ ಯೋಗಿಯಾಗುವದಕ್ಕೆ ಯತ್ನಿಸು ; ಏಕೆಂದರೆ ಯೋಗಿಗಳಲೆಲ್ಲ ನನ್ನ ಭಕ್ತನೇ ಹೆಚ್ಚಿನ ಯೋಗಿಯು.

# ಏಳನೆಯ ಅಧ್ಯಾಯ

೧–೩. ಶ್ರೀಕೃಷ್ಣನು ಹೇಳಿದ್ದು: ಎಲೈ ಅರ್ಜುನನೆ, ನನ್ನನ್ನೇ ಆಶ್ರಯಿಸಿ ನನ್ನನ್ನೇ ಧ್ಯಾನಿಸುತ್ತಿದ್ದರೆ ನನ್ನ ತತ್ತ್ವವನ್ನು ಪೂರ ನಿಶ್ಚಿತವಾಗಿ ತಿಳಿದುಕೊಳ್ಳಬಹುದು, ಅನುಭವಕ್ಕೆ ತಂದುಕೊಳ್ಳಲೂಬಹುದು. ಇದನ್ನು ತಿಳಿದರೆ ಎಲ್ಲವನ್ನೂ ತಿಳಿದುಕೊಂಡಂತಾಗುವದು. ಸಿದ್ಧಿಗಾಗಿ ಪ್ರಯತ್ನಮಾಡುವ ಅನೇಕ ಮನುಷ್ಯರಲ್ಲಿ ಯಾವನೋ ಒಬ್ಬನು ಮಾತ್ರ ನನ್ನನ್ನು ಸರಿಯಾಗಿ

೪–೧೨. ಪೃಥ್ವಿ, ಅಪ್ಪು – ಮುಂತಾದ ಸೂಕ್ಷ್ಮಭೂತಗಳು ಐದು, ಅಹಂಕಾರ, ಮಹತ್ತು, ಅವ್ಯಕ್ತ– ಎಂದು ನನ್ನ ಕೀಳಾದ ಜಡಪ್ರಕೃತಿಯು ಎಂಟು ಬಗೆಯಾಗಿರುವದು. ಜೀವರೂಪವಾಗಿರುವ ನನ್ನ ಹೆಚ್ಚಿನ ಪ್ರಕೃತಿಯು ಜಗತ್ತೆಲ್ಲ ವನ್ನೂ ಧರಿಸಿರುತ್ತದೆ. ಆ ಪ್ರಕೃತಿಗಳ ಮೂಲಕವೇ ನಾನು ಜಗತ್ತಿನ ಸೃಷ್ಟಿಸ್ಥಿತಿ ಲಯಗಳಿಗೆ ಕಾರಣನಾಗಿರುವೆನು. ಪ್ರತಿಯೊಂದು ವಸ್ತುವಿನಲ್ಲಿಯೂ ಸಾರ ಭೂತವಾಗಿರುವದನ್ನು ನಾನೆಂದೇ ತಿಳಿ ; ಸತ್ತ್ವರಜಸ್ತಮೋಗುಣಗಳಿಂದಾಗಿ ರುವ ಪದಾರ್ಥಗಳೆಲ್ಲವೂ ನನ್ನನ್ನೇ ಆಶ್ರಯಿಸಿರುವವು. ನಾನು ಅವುಗಳಲ್ಲಿ ಯಾವದನ್ನೂ ಆಶ್ರಯಿಸಿರುವದಿಲ್ಲ.

೧೩–೧೯. ಗುಣಮಯವಾದ ಮಾಯೆಯಿಂದ ಮೋಹಿತರಾಗಿರುವ ವರಿಗೆ ನನ್ನ ತತ್ತ್ವವು ನಿಲುಕುವದಿಲ್ಲ. ನನ್ನನ್ನೇ ಶರಣುಹೊಕ್ಕವರು ಈ ಮಾಯೆಯನ್ನು ದಾಟುವರು. ಆದರೆ ಆಸುರಸಂಪತ್ತಿನ ಪಾಪಿಗಳು ನನ್ನನ್ನು ಭಜಿಸುವದಿಲ್ಲ. ಆರ್ತ, ಜಿಜ್ಞಾಸು, ಅರ್ಥಾರ್ಥಿ, ಜ್ಞಾನಿ– ಎಂಬ ನಾಲ್ಕು ಬಗೆಯ ಜನಗಳು ನನ್ನನ್ನು ಭಜಿಸುವರು. ಇವರೆಲ್ಲರೂ ನನಗೆ ಬೇಕಾದವರೇ ಆದರೂ ಜ್ಞಾನಿಯು ನನ್ನ ಆತ್ಮನೇ ಆಗಿರುವದರಿಂದ ನನಗೆ ಅತ್ಯಂತಪ್ರಿಯ ನಾಗಿರುತ್ತಾನೆ. ಅಂಥ ಜ್ಞಾನಿಯಾಗುವದು ಮಹಾಪುಣ್ಯರಾಶಿಯ ಫಲವು.

೨೦–೨೩. ನನ್ನನ್ನು ಸೇವಿಸುವದರಲ್ಲಿಯೂ ಇತರ ದೇವತೆಗಳನ್ನು ಸೇವಿಸುವದರಲ್ಲಿಯೂ ಸಮವಾದ ಆಯಾಸವಿರುತ್ತಿದ್ದರೂ ಕಾಮಿಗಳಾದವರು ದೇವತೆಗಳನ್ನೇ ಭಜಿಸುತ್ತಾರೆ. ಅಂಥವರಿಗೆ ಆಯಾ ದೇವತಾಮೂರ್ತಿಗಳ

ಲ್ಲಿಯೇ ಭಕ್ತಿಯುಂಟಾಗುವಂತೆ ಮಾಡಿ ಅವರು ಕೋರುವ ಕಾಮುಗಳನ್ನು ಆ ದೇವತೆಗಳ ಮೂಲಕ ನಾನೇ ಪೂರ್ತಿಗೊಳಿಸುವೆನು. ಆದರೆ ಆ ಫಲವು ಬೇಗನೆ ನಾಶವಾಗುವದು ; ಆದರೂ ಮೂಢರಿಗೆ ಆ ಫಲವೇ ಬೇಕಾಗಿರುತ್ತದೆ.

೨೪–೨೭. ಬುದ್ಧಿಹೀನರಾದವರು ನನ್ನನ್ನು ಹಿಂದೆ ಇಲ್ಲದೇಇದ್ದು ಈಚೆಗೆ ಹುಟ್ಟಿದವನೆಂದೆಣಿಸುವರು. ಗುಣಮಯವಾದ ಮಾಯೆಗೆ ಮರುಳಾಗಿರುವ ಆ ಜನರಿಗೆ ನಾನು ಅಜನೂ ಅವ್ಯಯನೂ ಆಗಿರುವೆನೆಂಬುದು ತಿಳಿಯದು. ನಾನು ಮೂರು ಕಾಲದ ಆಗುಹೋಗುಗಳನ್ನೂ ಬಲ್ಲೆನು ; ಆದರೆ ನನ್ನನ್ನು ಮಾತ್ರ ಯಾರೂ ಅರಿತುಕೊಳ್ಳಲಾರರು. ಏಕೆಂದರೆ ಜೀವರುಗಳೆಲ್ಲ ಸಾಮಾನ್ಯವಾಗಿ ಇಚ್ಛಾದ್ವೇಷಗಳ ವಾಸನೆಯಿಂದ ಕೂಡಿಕೊಂಡೇ ಹುಟ್ಟಿರುತ್ತಾರೆ : ಅವರಿಗೆ ಅದರಿಂದುಂಟಾದ ಮೋಹವು ತತ್ತ್ವಜ್ಞಾನವುಂಟಾಗುವದಕ್ಕೆ ತಡೆಯಾಗಿರುತ್ತದೆ.

೨೮–೩೦. ಆದರೆ ಯಾರು ಹೇರಳವಾಗಿ ಪುಣ್ಯಕರ್ಮಗಳನ್ನು ಮಾಡಿ ಚಿತ್ತಶುದ್ಧಿಯನ್ನು ಸಂಪಾದಿಸಿಕೊಂಡಿರುವರೋ ಅವರು ಈ ದ್ವಂದ್ವಮೋಹಕ್ಕೆ ಸಿಕ್ಕಿಕೊಳ್ಳದೆ ನನ್ನನ್ನು ಭಜಿಸಿ ಮುಪ್ಪುಸಾವುಗಳನ್ನು ದಾಟಿಸುವ ಬ್ರಹ್ಮತತ್ತ್ವವನ್ನೂ ಪ್ರತ್ಯಗಾತ್ಮತತ್ತ್ವವನ್ನೂ ಕರ್ಮತತ್ತ್ವವನ್ನೂ ಚೆನ್ನಾಗಿ ತಿಳಿದುಕೊಳ್ಳುವರು. ಅಧಿಭೂತ, ಅಧಿದೈವ, ಅಧಿಯಜ್ಞ– ಇವುಗಳಿಂದ ಕೂಡಿದ ನನ್ನನ್ನು ಯಾರು ತಿಳಿದುಕೊಂಡಿರುವರೋ ಅಂಥವರು ಮರಣಕಾಲದಲ್ಲಿಯೂ ನನ್ನನ್ನು ಸಮಾಹಿತಚಿತ್ತರಾಗಿ ಧ್ಯಾನಿಸಬಲ್ಲವರಾಗಿರುತ್ತಾರೆ.

## ಎಂಟನೆಯ ಅಧ್ಯಾಯ

೧–೨. ಅರ್ಜುನನು 'ಎಲೈ ಕೃಷ್ಣನೆ, ಬ್ರಹ್ಮವೆಂದರೇನು ? ಅಧ್ಯಾತ್ಮವೆಂದರೆ ಯಾವದು ? ಕರ್ಮವೆಂದರೆ ಯಾವದು ? ಅಧಿಭೂತ, ಅಧಿದೈವ, ಅಧಿಯಜ್ಞ– ಇವುಗಳು ಯಾವವು ? ಮರಣಕಾಲದಲ್ಲಿ ನಿನ್ನನ್ನು ಹೇಗೆ ಚಿಂತಿಸಬೇಕು ?'– ಎಂದು ಕೇಳಲು ಭಗವಂತನು ಹೀಗೆಂದು ಉತ್ತರವನ್ನು ಹೇಳಿದನು:

೩–೫. ಎಲ್ಲಕ್ಕೂ ಹೆಚ್ಚಿನ ಅಕ್ಷರವೇ ಬ್ರಹ್ಮವು. ಒಬ್ಬೊಬ್ಬರಲ್ಲಿಯೂ ಜೀವನಾಗಿ ತೋರಿಕೊಳ್ಳುವ ಅದರ ಸ್ವಭಾವವೇ ಅಧ್ಯಾತ್ಮವು. ಪ್ರಾಣಿಗಳ ಉತ್ಪತ್ತಿಗೆ ಹೇತುವಾಗಿರುವ ಶಾಸ್ತ್ರೋಕ್ತವಾದ ಹೋಮವೇ ಕರ್ಮವು. ನಾಶ ವಾಗುವ ಪ್ರಾಣಿಗಳೇ ಅಧಿಭೂತವು. ಸರ್ವರ ಕರಣಗಳಿಗೂ ಅನುಗ್ರಾಹಕನಾಗಿ ರುವ ಆದಿತ್ಯಾಂತರ್ಗತಪುರುಷನಾದ ಹಿರಣ್ಯಗರ್ಭನೇ ಅಧಿದೈವವು. ದೇಹ ದಿಂದ ಮಾಡುವ ಯಜ್ಞಕ್ಕೆ ಅಭಿಮಾನಿಯಾದ ನಾನೇ ಅಧಿಯಜ್ಞವು. ಮರಣ ಕಾಲದಲ್ಲಿ ನನ್ನನ್ನೇ ಚಿಂತಿಸುತ್ತಾ ದೇಹವನ್ನು ಬಿಡುವವರು ನನ್ನನ್ನೇ ಸೇರುವರು.

೬–೭. ಮನುಷ್ಯನು ಸಾಯುವಕಾಲದಲ್ಲಿ ಯಾವದರ ಚಿಂತೆಯಿಂದೊಡಗೂಡಿರುವನೋ ಅಂಥ ಜನ್ಮವನ್ನು ಹೊಂದುವನು. ಜೀವಿತಕಾಲದಲ್ಲಿ ಯಾವ ಭಾವವು ಯಾವಾಗಲೂ ಮನಸ್ಸಿನಲ್ಲಿ ಆಡುತ್ತಿರುವದೋ ಆ ಬಗೆಯ ಚಿಂತೆಯೇ ಮರಣಕಾಲದಲ್ಲಿಯೂ ಬರುವದು. ಆದ್ದರಿಂದ ನನ್ನನ್ನೇ ಚಿಂತಿಸುತ್ತಿರು ; ಹಾಗಾದರೆ ಕೊನೆಗೆ ನನ್ನನ್ನೇ ನಿಶ್ಚಯವಾಗಿ ಪಡೆಯುವೆ.

೮–೧೩. ಹೀಗೆ ಯಾವಾಗಲೂ ನನ್ನ ಚಿಂತೆಯನ್ನು ಅಭ್ಯಾಸಮಾಡುತ್ತಿ ರುವ ಯೋಗಿಗೆ, ಮನಸ್ಸನ್ನು ಬಿಗಿಹಿಡಿದು ಭಕ್ತಿಯಿಂದ ಕೂಡಿ ಪ್ರಾಣವನ್ನು ಕ್ರಮಕ್ರಮವಾಗಿ ಮೇಲುಮೇಲಿನ ಭೂಮಿಕೆಯಲ್ಲಿ ನಿಲ್ಲಿಸಿಕೊಳ್ಳುತ್ತಾ ಮೇಲ್ದಲೆಗೆ ತಂದುಕೊಂಡು ಓಂಕಾರದ ಮೂಲಕ ಶಾಸ್ತ್ರೋಕ್ತವಿಶೇಷಣಗಳಿಂದ ಕೂಡಿರುವ ನನ್ನನ್ನು ಧ್ಯಾನಮಾಡುತ್ತಿರುವದರಿಂದ ಉತ್ತಮಗತಿಯಾಗುವದು.

೧೪–೧೯. ಹೀಗೆ ನಿತ್ಯಾಭ್ಯಾಸದಿಂದ ನನ್ನನ್ನು ಪಡೆದವರು ಮರಳಿ ಸಂಸಾರದುಃಖವನ್ನನುಭವಿಸುವದಿಲ್ಲ , ಮಿಕ್ಕವರು ಯಾವ ಲೋಕವನ್ನೇ ಪಡೆಯಲಿ, ಸಂಸಾರಕ್ಕೆ ಸಿಕ್ಕಿಬಿದ್ದೇ ಬೀಳುವರು. ಏಕೆಂದರೆ ಆ ಲೋಕಗಳೆಲ್ಲ ಕಾಲಕ್ಕೆ ಕಟ್ಟುಬಿದ್ದಿರುವದರಿಂದ ಶಾಶ್ವತವಾದ ಸುಖವನ್ನು ಕೊಡಲಾರವು. ಬ್ರಹ್ಮನಿಗೆ ಹಗಲಾದರೆ ಪ್ರಾಣಿಗಳೆಲ್ಲ ಸೃಷ್ಟಿಯಾಗುವವು ; ರಾತ್ರಿಯಾದರೆ ಅವನಲ್ಲಿಯೇ ಅಡಗಿಕೊಳ್ಳುವವು. ಯಾವ ಪ್ರಾಣಿಗಳಿಗೂ ಸಂಸಾರದಿಂದ ಬಿಡುಗಡೆಯಿಲ್ಲ.

೨೦–೨೨. ಆದರೆ ಅಕ್ಷರನೆಂಬ ಹೆಸರಿನ ಪರಮಾತ್ಮನು ಸಕಲಕ್ಕೂ ಬೀಜವಾಗಿರುವ ಬ್ರಹ್ಮನ ನಿದ್ರಾವಸ್ಥೆಯಾದ ಅವ್ಯಕ್ತಕ್ಕಿಂತಲೂ ಅವ್ಯಕ್ತನಾಗಿರುತ್ತಾನೆ, ಅವನು ಕಾಲಕ್ಕೆ ಕಟ್ಟುಬಿದ್ದವನಲ್ಲ. ಅನನ್ಯಭಕ್ತಿಯಿಂದ ಅವನನ್ನು ಉಪಾಸನೆಮಾಡಿ ಕ್ರಮಮುಕ್ತಿಯನ್ನು ಪಡೆದವರು ಸಂಸಾರವನ್ನು ದಾಟುವರು.

೨೩–೨೮. ಕರ್ಮಿಗಳು ಸತ್ತಮೇಲೆ ಕೃಷ್ಣಮಾರ್ಗದಿಂದ ಚಂದ್ರಲೋಕಕ್ಕೆ ಹೋಗಿ ತಾವು ಮಾಡಿದ ಪುಣ್ಯಫಲವನ್ನು ಅನುಭವಿಸಿದ ಬಳಿಕ ಮತ್ತೂ ಸಂಸಾರಕ್ಕೆ ತಿರುಗುವರು. ಪರಮಾತ್ಮನ ಉಪಾಸಕರು ಮಾತ್ರ ಶುಕ್ಲಮಾರ್ಗದಿಂದ ಹೋಗಿ ಕ್ರಮಮುಕ್ತಿಯನ್ನು ಪಡೆದು ಪರಮಾತ್ಮನನ್ನು ಸೇರಿಕೊಳ್ಳುವರು. ಹೀಗೆ ಕರ್ಮಕ್ಕೂ ಪರಮಾತ್ಮನ ಉಪಾಸನೆಗೂ ಹೆಚ್ಚಿನ ಅಂತರವಿರುವದು. ವೇದಾಧ್ಯಯನ, ಯಜ್ಞ, ದಾನ, ತಪಸ್ಸು – ಈ ಕರ್ಮಗಳಲ್ಲಿ ಯಾವದನ್ನು ಎಷ್ಟು ಚೆನ್ನಾಗಿ ಮಾಡಿದರೂ ಅಂತ್ಯಕಾಲದಲ್ಲಿ ಮಾಡಿದ ಪರಮಾತ್ಮಧ್ಯಾನದಿಂದ ಆಗುವ ಫಲವು ಸಿಕ್ಕಲಾರದು. ಆದ್ದರಿಂದ ನೀನು ಇಂಥ ಉಪಾಸನೆಯನ್ನು ಮಾಡುವ ಯೋಗಿಯಾಗುವದಕ್ಕೆ ಪ್ರಯತ್ನಿಸು.

## ಒಂಬತ್ತನೆಯ ಅಧ್ಯಾಯ

೧–೩. ಭಗವಂತನು ಹೇಳಿದ್ದೇನೆಂದರೆ : ಎಲ್ಲಕ್ಕೂ ಹೆಚ್ಚಿನ ಗುಟ್ಟೊಂದನ್ನು ಈಗ ಹೇಳುವೆನು ಕೇಳು. ಇದೇ ಜ್ಞಾನವು ಮತ್ತು ವಿಜ್ಞಾನವು. ಇದನ್ನು ಅರಿತುಕೊಂಡರೆ ಸಂಸಾರಬಂಧದಿಂದ ಮುಕ್ತನಾಗುವೆ. ಇದು ವಿದ್ಯೆಗಳಲ್ಲೆಲ್ಲ ಹೆಚ್ಚಿನದು, ಅತ್ಯಂತಪವಿತ್ರವಾದದ್ದು. ಪ್ರತ್ಯಕ್ಷವಾಗಿ ಅನುಭವಕ್ಕೆ ಬರುವಂಥದ್ದು. ಸುಲಭವಾಗಿ ಪಡೆದುಕೊಳ್ಳಬಹುದಾದದ್ದು, ಎಂದಿಗೂ ಸವೆಯದ ಫಲವುಳ್ಳದ್ದು. ಇದರಲ್ಲಿ ನಂಬಿಕೆಯಿಲ್ಲದವರು ಸಂಸಾರದಲ್ಲಿ ತೊಳಲುವರು.

೪–೧೦. ಈ ಜಗತ್ತೆಲ್ಲವೂ ಅವ್ಯಕ್ತರೂಪನಾದ ನನ್ನಿಂದ ವ್ಯಾಪ್ತವಾಗಿರುತ್ತದೆ. ಬ್ರಹ್ಮನು ಮೊದಲಾಗಿ ಸ್ತಂಬದವರೆಗಿನ ಪ್ರಾಣಿಗಳೆಲ್ಲವೂ

ನನ್ನನ್ನೇ ಅವಲಂಬಿಸಿವೆಯಾದರೂ ಪರಮಾರ್ಥದೃಷ್ಟಿಯಿಂದ ನೋಡಿದರೆ ಅವು ನನ್ನಲ್ಲಿರುವದಿಲ್ಲ; ಆಕಾಶದಲ್ಲಿ ವಾಯುವಿರುವಂತೆ ನನಗೆ ಯಾವ ಸಂಬಂಧವೂ ಇಲ್ಲದೆಯೇ ನನ್ನಲ್ಲಿ ಸರ್ವಭೂತಗಳೂ ಇರುತ್ತಿರುವವು. ಹೀಗೆ ಸ್ಥಿತಿಕಾಲದಲ್ಲಿ ನನ್ನಲ್ಲಿರುವ ಭೂತಗಳು ಕಲ್ಪಾಂತದಲ್ಲಿ ನನ್ನ ಪ್ರಕೃತಿಯಲ್ಲಿಯೇ ಲಯವಾಗುವವು ; ಆ ಪ್ರಕೃತಿಯ ಮೂಲಕ ನಾನೇ ಅವುಗಳನ್ನು ಹೊಸಕಲ್ಪದ ಆದಿಯಲ್ಲಿ ಸೃಷ್ಟಿಮಾಡುವೆನು. ಅವಿದ್ಯಾಕಲ್ಪಿತವಾಗಿರುವ ಈ ಪ್ರಕೃತಿಯ ಮೂಲಕವಾಗಿ ನಡೆಯುತ್ತಿರುವ ಸೃಷ್ಟಿಸ್ಥಿತಿಲಯಗಳಲ್ಲಿ ನಾನು ಉದಾಸೀನನಾಗಿರುವದರಿಂದ ನನಗೆ ಯಾವ ಕರ್ಮಬಂಧವೂ ಇರುವದಿಲ್ಲ. ಕೇವಲ ಸಾಕ್ಷಿಯಾಗಿರುವ ನನ್ನ ಸನ್ನಿಧಿಯಲ್ಲಿ ಪ್ರಕೃತಿಯು ಸ್ಥಾವರಜಂಗಮರೂಪವಾಗಿ ಮಾರ್ಪಡುತ್ತಿರುವದು.

೧೧–೧೩. ಇಂಥ ನಿತ್ಯಶುದ್ಧಸ್ವರೂಪನಾದ ನಾನೇ ಎಲ್ಲರ ಆತ್ಮನೆಂಬುದನ್ನು ತಿಳಿಯದೆ ಮೂಢರು ಆಸುರಸಂಪತ್ತಿನಿಂದ ಕೂಡಿ ಒಬ್ಬರನ್ನೊಬ್ಬರು ಹಿಂಸೆಮಾಡುವರು. ಮಹಾತ್ಮರಾದವರು ನಾನೇ ಸಕಲಭೂತಗಳಿಗೂ ಕಾರಣನೆಂಬುದನ್ನರಿತುಕೊಂಡು ದೈವಸಂಪತ್ತಿನಿಂದ ಕೂಡಿ ನನ್ನನ್ನು ಯಾವಾಗಲೂ ಭಜಿಸುತ್ತಾರೆ.

೧೪–೧೯. ದೈವಸ್ವಭಾವದ ಜನರು ಅದ್ವಿತೀಯವಾದ ಬ್ರಹ್ಮಸ್ವರೂಪದಿಂದಲೂ ಸೂರ್ಯಚಂದ್ರರೇ ಮುಂತಾದ ಪೃಥಗ್ರೂಪದಿಂದಲೂ ಇಡಿಯ ವಿಶ್ವದ ರೂಪದಿಂದಲೂ ಇರುವವನು ನಾನೇ ಎಂದು ತಿಳಿದು ಜ್ಞಾನಯಜ್ಞಗಳಿಂದ ಯಾವಾಗಲೂ ನನ್ನನ್ನೇ ಪೂಜಿಸುತ್ತಿರುವರು.

೨೦–೨೫. ಈ ತತ್ತ್ವವನ್ನು ಅರಿಯದೆ ಸ್ವರ್ಗಸುಖಕ್ಕಾಗಿ ವೇದೋಕ್ತ ಕರ್ಮವನ್ನು ಮಾಡುವವರು ಸ್ವರ್ಗವನ್ನು ಹೊಂದಿ ತಾವು ಮಾಡಿದ ಪುಣ್ಯವು ಸವೆಯಲು ಮತ್ತೆ ಮನುಷ್ಯಲೋಕವನ್ನು ಹೊಂದುವರು. ನಿಷ್ಕಾಮರಾಗಿ ನನ್ನನ್ನೇ ಸೇವಿಸುವವರ ಯೋಗಕ್ಷೇಮವನ್ನು ಕೂಡ ನಾನೇ ವಹಿಸುವೆನು. ಸಕಾಮಿಗಳೂ ನಿಷ್ಕಾಮಿಗಳೂ ನನ್ನನ್ನೇ ಪೂಜಿಸುತ್ತಾರೆ ; ಏಕೆಂದರೆ ನಾನೇ ಸರ್ವಯಜ್ಞಗಳನ್ನೂ ಆಯಾ ದೇವತೆಗಳ ರೂಪದಿಂದ ಸ್ವೀಕರಿಸುವವನು. ಆದರೂ ಈ ತತ್ತ್ವವನ್ನು ಸಕಾಮರು ಅರಿಯರಾದ್ದರಿಂದ ಅವರು ಪರಮಗತಿಯಾದ ನನ್ನನ್ನು ಪಡೆಯದೆ ಮರಳಿ ಸಂಸಾರದಲ್ಲಿ ಬೀಳುವರು. ಇಂದ್ರಾದಿ

ದೇವತೆಗಳು, ಅಗ್ನಿಷ್ವಾತ್ತಾದಿಪಿತೃಗಳು, ಮಾತೃಗಣಾದಿಭೂತಗಳು – ಇವುಗಳನ್ನು ಸೇವಿಸುವವರು ಆಯಾ ದೇವತಾದಿಗಳನ್ನು ಪಡೆಯುವರು ; ಇದರಂತೆ ನನ್ನನ್ನೇ ಸೇವಿಸುವವರು ನನ್ನನ್ನೇ ಪಡೆಯುವರು. ಹೀಗೆ ನನ್ನನ್ನು ಸೇವಿಸುವದಕ್ಕೆ ಹೆಚ್ಚಿನ ಆಯಾಸವೇನೂ ಬೇಕಿಲ್ಲ.

೨೬–೨೯. ನನ್ನನ್ನು ಆರಾಧನೆಮಾಡುವದಕ್ಕೆ ಸಾಮಗ್ರಿಯೇನೂ ಹೆಚ್ಚಾಗಿ ಬೇಕಾಗಿರುವದಿಲ್ಲ. ಒಂದು ಎಲೆ, ಒಂದು ಹೂವು, ಒಂದು ಹಣ್ಣು, ಒಂದಿಷ್ಟು ನೀರು – ಇವುಗಳಲ್ಲಿ ಯಾವದಾದರೊಂದನ್ನು ಭಕ್ತಿಯಿಂದ ಕೊಟ್ಟರೂ ಅಷ್ಟರಿಂದಲೇ ನಾನು ತೃಪ್ತನಾಗುವೆನು. ಆದ್ದರಿಂದ ನೀನು ಸ್ವಭಾವದಿಂದ ಮಾಡುವದನ್ನೂ ತಿನ್ನುವದನ್ನೂ ನನಗೆ ಅರ್ಪಿಸು ; ನೀನು ಮಾಡುವ ಹೋಮ, ದಾನ, ತಪಸ್ಸು – ಇವುಗಳನ್ನೂ ನನಗೆ ಅರ್ಪಿಸು. ಇದರಿಂದ ಪಾಪಪುಣ್ಯಗಳನ್ನು ಮೀರಿ ಕರ್ಮಬಂಧಗಳಿಂದ ಮುಕ್ತನಾಗಿ ನನ್ನನ್ನೇ ಸೇರುವೆ. ನಾನು ಎಲ್ಲರಲ್ಲಿಯೂ ಸಮವಾಗಿಯೇ ವರ್ತಿಸುವೆನು. ಆದರೆ ನನ್ನ ಭಕ್ತರು ನನ್ನಲ್ಲಿಯೇ ಸ್ವಭಾವದಿಂದ ಇದ್ದುಕೊಂಡಿರುವರು. ನಾನು ಅವರಲ್ಲಿಯೇ ಇರುವೆನು.

೩೦–೩೪. ಎಂಥ ದುರಾಚಾರವುಳ್ಳವನಾಗಿರಲಿ, ನನ್ನನ್ನು ಅನನ್ಯ ಭಕ್ತಿಯಿಂದ ಭಜನೆಮಾಡುವದಕ್ಕೆ ಮೊದಲುಮಾಡಿದನೆಂದರೆ ಅಂಥವನು ಭಕ್ತಿಯ ಸಾಮರ್ಥ್ಯದಿಂದ ಒಳ್ಳೆಯ ನಡತೆಯನ್ನು ಹೊಂದಿ ಶಾಂತಿಯನ್ನು ಪಡೆಯುತ್ತಾನೆ. ಪಾಪನಿಮಿತ್ತದಿಂದ ಸ್ತ್ರೀವೈಶ್ಯಶೂದ್ರಜನ್ಮಗಳಲ್ಲಿ ಹುಟ್ಟಿರುವವರು ಕೂಡ ನನ್ನನ್ನು ಆಶ್ರಯಿಸಿದರೆ ಉತ್ತಮಗತಿಯನ್ನೈದುವರು ; ಇನ್ನು ಉತ್ತಮ ಜನ್ಮವನ್ನು ಪಡೆದು ಭಕ್ತರಾಗಿರುವ ಬ್ರಾಹ್ಮಣರೂ ರಾಜರ್ಷಿಗಳೂ ಉತ್ತಮಗತಿಯನ್ನು ಹೊಂದುವರೆಂದು ಬೇರೆ ಹೇಳಬೇಕೆ ? ಈ ಮನುಷ್ಯಜನ್ಮವು ಅನಿತ್ಯವಾದದ್ದು, ಇದರಲ್ಲಿ ಸುಖವು ಎಳ್ಳಷ್ಟೂ ಇರುವದಿಲ್ಲ. ಆದರೆ ಇದರಲ್ಲಿ ಪರಮ ಪುರುಷಾರ್ಥವನ್ನು ಪಡೆಯುವ ಭಕ್ತಿಯನ್ನು ಹೊಂದಬಹುದಾಗಿದೆ. ಇಂಥ ದುರ್ಲಭವಾದ ಮನುಷ್ಯಜನ್ಮದಲ್ಲಿ ಕ್ಷತ್ರಿಯನಾಗಿ ಹುಟ್ಟಿರುವ ನೀನು ನನ್ನಲ್ಲಿಯೇ ಮನಸ್ಸಿಟ್ಟು ನನ್ನ ಭಕ್ತನಾಗಿ ನನ್ನನ್ನೇ ಪೂಜಿಸುತ್ತಲೂ ನಮಸ್ಕರಿಸುತ್ತಲೂ ಇರು. ಹೀಗಿದ್ದರೆ ನನ್ನನ್ನೇ ಬಂದು ಸೇರುವೆ.

# ಹತ್ತನೆಯ ಅಧ್ಯಾಯ

೧–೧೧. ಭಗವಂತನು ಹೇಳಿದ್ದೇನೆಂದರೆ : ಅರ್ಜುನನೆ, ನಿನಗೆ ಒಳ್ಳೆಯದಾಗಲೆಂದು ಮತ್ತೊಮ್ಮೆ ಹೇಳುವೆನು, ಕೇಳು. ನನ್ನ ಆದಿಯನ್ನು ದೇವತೆಗಳಾಗಲಿ, ಮಹರ್ಷಿಗಳಾಗಲಿ ಅರಿಯರು ; ಏಕೆಂದರೆ ನಾನೇ ಅವರಿಬ್ಬರಿಗೂ ಆದಿಯು. ನಾನು ಜನ್ಮರಹಿತನೆಂದೂ ಅನಾದಿಯೆಂದೂ ಪ್ರಪಂಚದ ಎಲ್ಲಾ ಪ್ರಾಣಿಗಳಿಗೂ ಬುದ್ಧಿಯೇ ಮುಂತಾದ ಭಾವಗಳನ್ನು ಅನುಗ್ರಹಿಸುವವನೆಂದೂ ಸೃಷ್ಟಿಕರ್ತರಾದ ಮಹರ್ಷಿಗಳೂ ಮನುಗಳೂ ನನ್ನ ಸಂಕಲ್ಪಮಾತ್ರದಿಂದ ಉಂಟಾಗಿರುವರೆಂದೂ ತಿಳಿದವರು ಪಾಪರಹಿತರಾಗಿ ಸ್ಥಿರವಾದ ಭಕ್ತಿಯೋಗವನ್ನು ಪಡೆಯುತ್ತಾರೆ. ಆ ಯೋಗದ ಫಲವಾಗಿ ಅಜ್ಞಾನದಿಂದುಂಟಾಗುವ ಮೋಹವನ್ನೆಲ್ಲ ತೊಲಗಿಸುವ ಜ್ಞಾನದ ಬೆಳಕನ್ನು ನಾನು ಅವರ ಹೃದಯದಲ್ಲಿಯೇ ಇದ್ದುಕೊಂಡು ಅನುಗ್ರಹಿಸುವೆನು.

೧೨–೩೮. ಅರ್ಜುನನು ಭಗವಂತನ ವಿಭೂತಿಯನ್ನೂ ಯೋಗವನ್ನೂ ವಿವರವಾಗಿ ತಿಳಿಯಬೇಕೆಂಬ ಕುತೂಹಲವನ್ನು ತೋರಿಸಲು ಆಗ ಭಗವಂತ ನಿಂತೆಂದನು : ಅಯ್ಯ, ನನ್ನ ವಿಭೂತಿಗಳಿಗೆ ಇಷ್ಟೆಂಬ ಲೆಕ್ಕವಿಲ್ಲ ; ಆದ್ದರಿಂದ ಮುಖ್ಯವಾದವನ್ನುಮಟ್ಟಿಗೆ ತಿಳಿಸುವೆನು. ಎಲ್ಲರ ಹೃದಯದಲ್ಲಿರುವ ನಾನು ಅವರ ಆತ್ಮನೇ. ಸೃಷ್ಟಿಸ್ಥಿತಿಲಯಗಳಿಗೆ ಎಲ್ಲಕ್ಕೂ ಕಾರಣನು. ವಿಷ್ಣುವೆಂಬ ಆದಿತ್ಯನು, ಸೂರ್ಯನು, ಮರೀಚಿಯು, ಚಂದ್ರನು, ಸಾಮವೇದ, ಇಂದ್ರ, ಮನಸ್ಸು, ಚೇತನಾವೃತ್ತಿ ಶಂಕರ, ಕುಬೇರ, ಪಾವಕವಸು, ಮೇರುಪರ್ವತ, ಬೃಹಸ್ಪತಿ, ಸ್ಕಂದ, ಸಾಗರ, ಭೃಗುಮಹರ್ಷಿ, ಓಂಕಾರ, ಜಪಯಜ್ಞ, ಹಿಮಾಲಯ, ಅಶ್ವತ್ಥ, ನಾರದ, ಚಿತ್ರರಥ, ಕಪಿಲ, ಉಚ್ಚೈಃ ಶ್ರವಸ್ಸು, ಐರಾವತ, ನರಾಧಿಪ, ವಜ್ರಾಯುಧ, ಕಾಮಧೇನು, ಮನ್ಮಥ, ವಾಸುಕಿ, ಅನಂತ, ವರುಣ, ಅರ್ಯಮ, ಯಮ, ಪ್ರಹ್ಲಾದ, ಕಾಲ, ಮೃಗೇಂದ್ರ, ವೈನತೇಯ, ವಾಯು, ದಶರಥರಾಮ, ಮಕರ, ಜಾಹ್ನವೀನದಿ – ಇವುಗಳೆಲ್ಲವೂ ನಾನೆಂದು ಚಿಂತಿಸು. ಸೃಷ್ಟಿಗಳಿಗೆಲ್ಲ ಆದಿ, ಮಧ್ಯ, ಅಂತ– ಇವು ಮೂರೂ ನಾನೇ. ಅಧ್ಯಾತ್ಮವಿದ್ಯೆ, ವಾದ, ಅಕಾರ, ದ್ವಂದ್ವಸಮಾಸ, ಕಾಲ, ಧಾತನು, ಮೃತ್ಯು, ಕಲ್ಯಾಣಕಾರಣ, ಕೀರ್ತಿಯೇ ಮೊದಲಾದ ದೇವತಾಸ್ತ್ರೀಯರು, ಬೃಹತ್ಸಾಮ, ಗಾಯತ್ರೀ

ಛಂದಸ್ಸು, ಮಾರ್ಗಶೀರ್ಷಮಾಸ, ವಸಂತಋತು, ಜೂಜಿನ ಆಟ, ತೇಜಸ್ಸು, ಜಯ, ವ್ಯವಸಾಯ, ಸತ್ತ್ವ, ವಾಸುದೇವ, ಅರ್ಜುನ, ವ್ಯಾಸ, ಶುಕ್ರಾಚಾರ್ಯ, ದಂಡ, ರಾಜನೀತಿ, ಮೌನ, ಜ್ಞಾನ, ಸರ್ವಭೂತಗಳಿಗೂ ಕಾರಣ – ಇವೆಲ್ಲವೂ ನಾನೇ.

೩೯–೪೨. ನನ್ನನ್ನು ಬಿಟ್ಟು ಯಾವದೊಂದೂ ಇರಲಾರದು. ನನ್ನ ವಿಭೂತಿಗಳಿಗೆ ಕೊನೆಯೆಂಬುದೇ ಇಲ್ಲವಾದ್ದರಿಂದ ಸ್ವಲ್ಪಮಟ್ಟಿಗೆ ಹೇಳಿರುತ್ತೇನೆ. ಲೋಕದಲ್ಲಿ ಯಾವಯಾವದು ವಿಭೂತಿ, ಶ್ರೀ, ಉತ್ಸಾಹ– ಇವುಗಳಿಂದ ಕೂಡಿರುವದೋ ಅದೆಲ್ಲ ನನ್ನ ತೇಜಸ್ಸಿನ ಒಂದಂಶದಿಂದ ಹುಟ್ಟಿರುವದೆಂದು ಭಾವಿಸು. ಅಥವಾ ಇಷ್ಟೆಲ್ಲ ಏತಕ್ಕೆ ? ನಾನು ಒಂದೇ ಒಂದಂಶದಿಂದ ಇಡಿಯ ಜಗತ್ತೇ ಆಗಿರುವೆನು – ಎಂದು ತಿಳಿದುಕೊ.

## ಹನ್ನೊಂದನೆಯ ಅಧ್ಯಾಯ

೧–೪. ಭಗವಂತನು ತನ್ನ ವಿಭೂತಿಗಳನ್ನೆಲ್ಲ ವಿವರಿಸಿ ಜಗತ್ತೆಲ್ಲವೂ ತನ್ನ ಒಂದಂಶವೇ ಎಂದು ಹೇಳಿದ ಮಾತನ್ನು ಕೇಳಿ ಆ ವಿಶ್ವರೂಪವನ್ನು ನೋಡಬೇಕೆಂದು ಅರ್ಜುನನು "ಭಗವಂತ, ನೀನು ಹೇಳಿದಂತೆಯೇ ಇರುವ ನಿನ್ನ ಈಶ್ವರರೂಪವನ್ನು ನೋಡುವದಕ್ಕೆ ನನ್ನಿಂದ ಶಕ್ಯವೆ ? ಹಾಗಿದ್ದರೆ ದಯವಿಟ್ಟು ಆ ರೂಪವನ್ನು ನನಗೆ ತೋರಿಸು" ಎಂದು ಬೇಡಿಕೊಂಡನು.

೫–೧೩. ಆಗ ಶ್ರೀಕೃಷ್ಣನು "ಎಲೈ ಪಾರ್ಥನೆ, ಈ ನನ್ನ ಬಗೆಬಗೆಯ ರೂಪಗಳನ್ನು ನೋಡು. ಆದಿತ್ಯಾದಿದೇವತೆಗಳು ನನ್ನಲ್ಲಿರುವದನ್ನೂ ಇಡಿಯ ಜಗತ್ತೇ ನನ್ನ ಒಂದು ಕಡೆಯಲ್ಲಿರುವದನ್ನೂ ನೋಡು. ಇಗೊ, ನಿನಗೆ ದಿವ್ಯ ದೃಷ್ಟಿಯನ್ನು ಕೊಟ್ಟಿರುವೆನು" ಎಂದು ತನ್ನ ವಿಶ್ವರೂಪವನ್ನು ತೋರಿಸಿದನು. ಲೆಕ್ಕವಿಲ್ಲದಷ್ಟು ಬಾಯಿಗಳೂ ಕಣ್ಣುಗಳೂ ಅಚ್ಚರಿಗೊಳಿಸುವಂಥ ನೋಟಗಳೂ ಅರ್ಜುನನಿಗೆ ಕಂಡುಬಂದವು. ವಿಶ್ವರೂಪಧಾರಿಯಾದ ಭಗವಂತನು ಬಗೆ ಬಗೆಯ ದಿವ್ಯಾಭರಣಗಳನ್ನು ತೊಟ್ಟಿದ್ದನು ; ಬಗೆಬಗೆಯ ಆಯುಧಗಳನ್ನು

ಹಿಡಿದಿದ್ದನು ; ದಿವ್ಯವಾದ ವಸ್ತ್ರವನ್ನುಟ್ಟುಕೊಂಡು ಅತ್ಯಂತಪರಿಮಳವಾದ ಹೂ, ಗಂಧ– ಮುಂತಾದವುಗಳಿಂದ ಶೋಭಿತನಾಗಿದ್ದನು ; ಅತ್ಯಂತಪ್ರಕಾಶಮಯ ನಾಗಿದ್ದನು. ಇಡಿಯ ಜಗತ್ತೇ ಆ ದೇವದೇವನ ಶರೀರದಲ್ಲಿ ಕಾಣುತ್ತಿತ್ತು.

೧೪–೩೧. ಆಗ ಅರ್ಜುನನು ಬ್ರಹ್ಮಾದಿದೇವತೆಗಳೂ ಋಷಿಗಳೂ ಬೇರೆಬೇರೆಯ ಪ್ರಾಣಿಸಂಘಗಳೂ ಭಗವಂತನ ದೇಹದಲ್ಲಿಯೇ ಇರುವದನ್ನೂ ಭಗವಂತನ ತುದಿಮೊದಲುಕಾಣದಂತೆ ಎಲ್ಲೆಲ್ಲಿಯೂ ವ್ಯಾಪಿಸಿರುವದನ್ನೂ ಯುದ್ಧ ಮಾಡುತ್ತಿರುವ ವೀರರು ಆತನ ಮುಖದೊಳಕ್ಕೆ ಹೊಗುತ್ತಿರುವದನ್ನೂ ಆತನು ಅವರನ್ನು ಅಗಿದು ಬಾಯಿಚಪ್ಪರಿಸುತ್ತಿರುವದನ್ನೂ ದೇವತೆಗಳೂ ಸಿದ್ಧರೂ ಅಂಜಿಕೆಯಿಂದ ನಡುಗುತ್ತಾ ಆತನನ್ನು ಸ್ತುತಿಸುತ್ತಿರುವದನ್ನೂ ಆತನ ಭೀಕರವಾದ ರೂಪವನ್ನು ಕಂಡು ಲೋಕಕ್ಕೆ ಲೋಕವೇ ತಳಮಳಗೊಳ್ಳುತ್ತಿರುವದನ್ನೂ ಕಂಡು ಮನಸ್ಸಿನಲ್ಲಿ ಸಮಾಧಾನವಿಲ್ಲದೆ ದಿಕ್ಕು ತೋಚದೆ ಲೋಕವನ್ನೆಲ್ಲ ಸುಡುತ್ತಿರುವ ಉಗ್ರತೇಜೋಮೂರ್ತಿಯಾದ ಆ ಪರಮೇಶ್ವರನನ್ನು ''ಸ್ವಾಮಿ, ನನ್ನಲ್ಲಿ ಪ್ರಸನ್ನನಾಗು ; ನೀನು ಯಾರು ? ಏತಕ್ಕೆ ಇಲ್ಲಿ ಅವತರಿಸಿರುವೆ ? ದಯವಿಟ್ಟು ಹೇಳಬೇಕು'' ಎಂದು ಬೇಡಿಕೊಂಡನು.

೩೨–೪೬. ಭಗವಂತನು, ''ಅರ್ಜುನ, ನಾನು ಈ ಲೋಕವನ್ನು ಲಯಗೊಳಿಸುವದಕ್ಕಾಗಿ ಬಂದಿರುವ ಕಾಲನೆಂದು ತಿಳಿ. ನೀನು ಯುದ್ಧ ಮಾಡಿದರೂ ಬಿಟ್ಟರೂ ಈ ಶತ್ರುವೀರರು ಯಾರೂ ಉಳಿಯುವಹಾಗಿಲ್ಲ. ನೀನು ಯಾವ ದ್ರೋಣ, ಭೀಷ್ಮ, ಜಯದ್ರಥ, ಕರ್ಣ– ಮೊದಲಾದವರಿಗೆ ಅಂಜಿಕೊಂಡಿರುವೆಯೋ ಇವರೆಲ್ಲರೂ ಅಳಿಯಬೇಕೆಂಬುದೇ ನನ್ನ ಸಂಕಲ್ಪವು. ಆದ್ದರಿಂದ ಕಾಲವಶದಿಂದ ಸಾಯಲೇಬೇಕಾಗಿರುವ ಈ ವೀರರನ್ನು ಕೊಲ್ಲುವದಕ್ಕೆ ನಿಮಿತ್ತಮಾತ್ರನಾಗಿ ಕೀರ್ತಿಯನ್ನು ಪಡೆದುಕೊ. ನಿಶ್ಚಿತವಾಗಿಯೂ ನಿನಗೆ ಜಯವಾಗುವದು. ಇವರನ್ನು ಗೆದ್ದು ಸುಖವಾಗಿ ರಾಜ್ಯವನ್ನಾಳಿಕೊಂಡಿರು'' ಎಂದು ನುಡಿಯಲು ಅರ್ಜುನನು ಥರಥರನೆ ನಡುಗುತ್ತಾ ಮತ್ತೆ ಮತ್ತೆ ತಲೆಬಾಗಿ ಭಗವಂತನಿಗೆ ನಮಸ್ಕರಿಸಿ ''ಸರ್ವಾತ್ಮನಾದ ಭಗವಂತನೆ, ನಿನ್ನ ಗುಣಗಳ ಕೀರ್ತನೆಯನ್ನು ಕೇಳಿದಮಾತ್ರದಿಂದ ಜಗತ್ತಿಗೆ ಜಗತ್ತೇ ಹರ್ಷದಿಂದ ಉಬ್ಬಿ ನಿನ್ನಲ್ಲಿ ಅನುರಾಗವುಳ್ಳದ್ದಾಗುವದೆಂಬುದು ಯುಕ್ತವೇ. ರಕ್ಕಸರು ನಿನಗೆ ಹೆದರಿ ಓಡುವದೂ ಸಿದ್ಧರು ನಿನಗೆ ಅಡ್ಡಬೀಳುತ್ತಿರುವದೂ ಯುಕ್ತವೇ. ಏಕೆಂದರೆ ಅಂಥ

ಮಹಾಮಹಿಮನು ನೀನು ! ಈ ಜಗತ್ತನ್ನು ಸೃಷ್ಟಿಸಿರುವ ಬ್ರಹ್ಮನನ್ನು ಕೂಡ ಸೃಷ್ಟಿಸಿದವನು, ದೇವತೆಗಳಿಗೆಲ್ಲ ಒಡೆಯನು, ಜಗತ್ತಿಗೆಲ್ಲ ಆಶ್ರಯನು. ನಿಜವಾಗಿ ನೋಡಿದರೆ ನೀನೇ ಇದೆಲ್ಲವನ್ನೂ ಅರಿಯುತ್ತಿರುವವನು. ಅರಿಯಲ್ಪಡತಕ್ಕದ್ದೂ ನೀನೇ ಹೊರತು ಬೇರೆಯಲ್ಲ. ಮುಕ್ತರು ಪಡೆಯುವ ಉತ್ತಮ ಸ್ಥಾನವೂ ನೀನೇ. ಸರ್ವದೇವಾತ್ಮಕನೆ, ನಿನಗೆ ನಮಸ್ಕಾರ ! ನೀನು ಇಂಥ ಮಹಿಮೆಯುಳ್ಳಾತನೆಂದು ಅರಿಯದೆ ನಾನು ಎಚ್ಚರದಪ್ಪಿ ಸ್ನೇಹದ ಸಲಿಗೆಯಿಂದ ''ಎಲೆ ಕೃಷ್ಣ, ಎಲೆ ಯಾದವ, ಎಲೆ ಗೆಳೆಯ !'' ಎಂದು ಮುಂತಾಗಿ ಕರೆಯುತ್ತಾ ದಿಟ್ಟತನದಿಂದ ನುಡಿದಿರುವದನ್ನೆಲ್ಲ ಮನ್ನಿಸು. ಈ ಲೋಕಕ್ಕೆ ನೀನು ತಂದೆಯು, ಪೂಜ್ಯನು, ಗುರುವು ; ನಿನಗೆ ಸಮಾನನೇ ಇಲ್ಲ. ಇನ್ನು ನಿನಗಿಂತ ಹೆಚ್ಚಿನವನು ಯಾವನು ? ಎಲ್ಲಿರುವನು ? ಇಂಥ ನಿನ್ನಲ್ಲಿ ನಾನು ಮಾಡಿರುವ ಅಪರಾಧವನ್ನೆಲ್ಲ ಕ್ಷಮಿಸಬೇಕು. ನಿನ್ನ ಈ ರೂಪವನ್ನು ಉಪಸಂಹಾರಮಾಡಿಕೊಂಡು ಮುನ್ನಿನ ಮಾನುಷರೂಪವನ್ನೇ ತಳೆದು ಅನುಗ್ರಹಿಸು !'' ಎಂದು ಅಂಗಲಾಚಿ ಬೇಡಿಕೊಂಡನು.

೪೭–೫೫. ಆಗ ಭಗವಂತನು ''ಅರ್ಜುನನೆ, ನಿನ್ನ ಮೇಲೆ ಪ್ರಸನ್ನನಾಗಿ ಈ ತೇಜೋಮಯವಾದ ವಿಶ್ವರೂಪವನ್ನು ನನ್ನ ಯೋಗಮಹಿಮೆಯಿಂದ ನಿನಗಾಗಿ ತೋರಿಸಿರುತ್ತೇನೆ. ಹೆದರದಿರು. ಇಗೊ, ನನ್ನ ಮುನ್ನಿನ ರೂಪವನೇ ನೋಡು !'' ಎಂದು ಸಂತೈಸಿ ಮತ್ತೆ ''ಪಾಂಡವನೆ, ನಿನಗೆ ತೋರಿಸಿದ ಈ ವಿಶ್ವರೂಪವನ್ನು ನೋಡಬೇಕೆಂದು ದೇವತೆಗಳು ಕೂಡ ತವಕಿಸುತ್ತಿರುವರು. ವೇದ, ತಪಸ್ಸು, ದಾನ, ಯಜ್ಞ– ಮುಂತಾದ ಯಾವ ಸಾಧನದಿಂದಲೂ ನನ್ನನ್ನು ಈ ರೂಪದಿಂದ ಕಾಣುವದು ಶಕ್ಯವಲ್ಲ. ಅನನ್ಯಭಕ್ತಿಯೊಂದರಿಂದಲೇ ನನ್ನನ್ನು ಅರಿತುಕೊಂಡು ಸಾಕ್ಷಾತ್ಕಾರಮಾಡಿಕೊಂಡು ಸೇರುವದು ಸಾಧ್ಯವಾಗುವದು. ಯಾವನು ನನಗಾಗಿಯೇ ಸಕಲ ಕರ್ಮಗಳನ್ನೂ ಮಾಡುತ್ತಾ ನಾನೇ ಗತಿಯೆಂದು ನಂಬಿ ನನ್ನಲ್ಲಿ ಪರಮ ಪ್ರೇಮವುಳ್ಳವನಾಗಿ ಈ ಲೋಕದ ವಿಷಯಗಳಲ್ಲಿ ಸಂಗವುಳ್ಳವನಾಗದೆ ಸಮಸ್ತ ಪ್ರಾಣಿಗಳಲ್ಲಿಯೂ ಪ್ರೇಮದಿಂದ ಕೂಡಿರುವನೋ ಅವನೇ ನನ್ನ ಸಾಯುಜ್ಯವನ್ನು ಹೊಂದುವನು'' – ಎಂದು ನುಡಿದನು.

# ಹನ್ನೆರಡನೆಯ ಅಧ್ಯಾಯ

೧. ವಿಶ್ವರೂಪವನ್ನು ನೋಡಿದ ಬಳಿಕ ಅರ್ಜುನನು ಹೀಗೆಂದು ಕೇಳಿದನು : "ಭಗವಂತನೆ, ನೀನು ಈಗ ತೋರಿಸಿರುವ ವಿಶ್ವರೂಪದಲ್ಲಿಯೇ ಯಾವಾಗಲೂ ಮನಸ್ಸಿಟ್ಟು ಉಪಾಸನೆಮಾಡುವವರು, ನೀನು ಇದುವರೆಗೆ ಅಲ್ಲಲ್ಲಿ ಉಪದೇಶಮಾಡಿರುವ ನಿರುಪಾಧಿಕವಾದ ಅಕ್ಷರಬ್ರಹ್ಮವನ್ನು ಉಪಾಸನೆ ಮಾಡುವವರು – ಇವರಿಬ್ಬರಲ್ಲಿ ಯಾರು ಹೆಚ್ಚಿನ ಯೋಗಿಗಳು ?"

೨–೭. ಆಗ ಭಗವಂತನಿಂತೆಂದನು : ಅರ್ಜುನನೆ, ವಿಶ್ವರೂಪವನ್ನು ಉಪಾಸನೆಮಾಡುವವರೇ ಹೆಚ್ಚಿನ ಯೋಗಿಗಳು. ಅಕ್ಷರಬ್ರಹ್ಮವನ್ನು ಉಪಾಸನೆ ಮಾಡುವವರೂ ನನ್ನನ್ನೇ ಸೇರುತ್ತಾರೆ. ಆದರೆ ಆ ಬ್ರಹ್ಮವು ಇಂದ್ರಿಯಕ್ಕೆ ನಿಲುಕುವದಲ್ಲವಾದ್ದರಿಂದ ದೇಹಾಭಿಮಾನವುಳ್ಳವರಿಗೆ ಸುಲಭವಾಗಿ ದಕ್ಕುವ ದಲ್ಲ. ವಿಶ್ವರೂಪನಾದ ನನ್ನನ್ನು ಉಪಾಸನೆಮಾಡುವವರಿಗೆ ನಾನೇ ಸಹಾಯಕ ನಾಗಿ ಅವರನ್ನು ಸಂಸಾರಸಾಗರದಿಂದ ಮೇಲಕ್ಕೆತ್ತುವೆನು.

೮–೧೨. ಆದ್ದರಿಂದ ನೀನು ವಿಶ್ವರೂಪನಾದ ನನ್ನಲ್ಲಿಯೇ ಮನಸ್ಸನ್ನೂ ಬುದ್ಧಿಯನ್ನೂ ನಿಲ್ಲಿಸಿಕೊ. ಒಂದೇ ಸಲಕ್ಕೆ ಹಾಗೆ ನಿಲ್ಲಿಸಿಕೊಳ್ಳುವದಕ್ಕೆ ಆಗದಿದ್ದರೆ ವಿವೇಕವೈರಾಗ್ಯಗಳಿಂದ ಅದನ್ನು ಅಭ್ಯಾಸಮಾಡು ; ಅದೂ ನಿನಗೆ ಕಷ್ಟವಾಗಿ ತೋರಿದರೆ ಈಶ್ವರಪ್ರೀತ್ಯರ್ಥವಾದ ಕರ್ಮಗಳನ್ನೇ ಮಾಡು. ಅದೂ ನಿನಗೆ ಕಷ್ಟವಾದರೆ ನನ್ನ ಯೋಗವನ್ನು ಆಶ್ರಯಿಸಿ ಸರ್ವಕರ್ಮಫಲತ್ಯಾಗವನ್ನು ಮಾಡುವ ಯತ್ನವನ್ನು ಮಾಡು. ಅಭ್ಯಾಸಕ್ಕಿಂತ ಜ್ಞಾನವೂ ಜ್ಞಾನಕ್ಕಿಂತ ಅದರಿಂದೊಡಗೂಡಿದ ಧ್ಯಾನವೂ ಹೆಚ್ಚಿನವು ; ಇದರಿಂದ ಕರ್ಮಫಲತ್ಯಾಗವೂ ಆ ತ್ಯಾಗದಿಂದ ಕೂಡಲೇ ಮೋಕ್ಷವೂ ಲಭಿಸುವವು.

೧೩–೧೯. ಆದರೆ ನನಗೆ ಅಕ್ಷರೋಪಾಸಕರು ಅತ್ಯಂತಪ್ರಿಯರು. ಅವರ ಲಕ್ಷಣವನ್ನು ಹೇಳುತ್ತೇನೆ ಕೇಳು. ಅವರು ಯಾವ ಪ್ರಾಣಿಗಳನ್ನೂ ಹಗೆ ಮಾಡರು. ಎಲ್ಲರಲ್ಲಿಯೂ ಮಿತ್ರರಾಗಿ ಕರುಣೆಯನ್ನು ತೋರಿಸುತ್ತಿರುವರು. ನಾನುನನ್ನದೆಂಬುದಿಲ್ಲದೆ ಸುಖದುಃಖಗಳಲ್ಲಿ ಏರುಪೇರಿಲ್ಲದೆ ತಮಗೆ ಅಪಚಾರವಾದರೂ ಕ್ಷಮಿಸುತ್ತಾ, ಅತ್ಯಲ್ಪದಿಂದಲೇ ತುಷ್ಟರಾಗಿ, ಇಂದ್ರಿಯ

ಮನಸ್ಸುಗಳನ್ನು ಬಿಗಿಹಿಡಿದು ದೃಢನಿಶ್ಚಯದಿಂದ ಪರಮಾತ್ಮನಿಗೇ ತಮ್ಮ ಮನೋಬುದ್ಧಿಗಳನ್ನು ಅರ್ಪಿಸಿರುವವರು. ತಮ್ಮಿಂದ ಮತ್ತೊಬ್ಬರಿಗೆ ತಳಮಳವಾಗ ದಂತೆ ಇರುವವರು, ತಾವೂ ಮತ್ತೊಬ್ಬರಿಂದ ತಳಮಳಗೊಳ್ಳದಿರುವವರು. ಸಿಟ್ಟು, ಅಸಹನೆ, ತಳಮಳ– ಯಾವದೊಂದೂ ಇಲ್ಲದೆ ಇರುವವರು. ಯಾವ ದೊಂದನ್ನೂ ಅಪೇಕ್ಷಿಸದೆ, ಶುಚಿಗಳಾಗಿ ಬಂದ ಕಾರ್ಯವನ್ನು ದಕ್ಷತೆಯಿಂದ ಮಾಡುತ್ತಾ, ಯಾರೊಬ್ಬರ ಪಕ್ಷವನ್ನೂ ಹಿಡಿಯದೆ, ವ್ಯಥೆಯಿಲ್ಲದೆ, ತಮಗಾಗಿ ಯಾವದೊಂದು ಕರ್ಮವನ್ನೂ ಮಾಡಿಕೊಳ್ಳದೆ ಇರುವವರು. ಒಳ್ಳೆಯದು ಬಂದರೆ ಹಿಗ್ಗದೆ, ಕೆಟ್ಟದ್ದು ಬಂದರೆ ಅದನ್ನು ಹಗೆಮಾಡದೆ, ಏನಾದರೂ ಹೋಯಿತೆಂದು ಅಳದೆ, ಏನಾದರೂ ತಮಗೆ ದೊರಕಬೇಕೆಂದು ಹಂಬಲಿಸದೆ, ಪಾಪಪುಣ್ಯಕರ್ಮಗಳನ್ನು ಮೀರಿರುವವರು. ತಮ್ಮವರು, ಅನ್ಯರು ; ಮಾನ, ಅಪಮಾನ ; ಸುಖ, ದುಃಖ– ಮುಂತಾದ ದ್ವಂದ್ವಗಳನ್ನು ಸಹಿಸಿಕೊಂಡು ಒಂದೇ ಸಮನಾಗಿರುತ್ತಾ ಏತರಲ್ಲಿಯೂ ಸಕ್ತರಾಗದೆ ಇರುವವರು. ತಮ್ಮನ್ನು ಜನರು ಬಯ್ಯಲಿ, ಹೊಗಳಲಿ– ಮನಸ್ಸನ್ನು ಏರುಪೇರುಮಾಡಿಕೊಳ್ಳದೆ ಅನ್ನ, ಬಟ್ಟೆ, ವಾಸಸ್ಥಳ– ಇವು ಹೀಗೆಯೇ ಆಗಬೇಕೆಂಬ ನಿಯಮವೇನೂ ಇಲ್ಲದೆ ಪರಮಾರ್ಥದಲ್ಲಿಯೇ ಮನಸ್ಸನ್ನು ಸ್ಥಿರವಾಗಿಟ್ಟುಕೊಂಡಿರುವವರು.

೨೦. ಅವರ ಈ ವರ್ತನೆಯು ಧರ್ಮಕ್ಕೆ ಹೊಂದಿಕೊಂಡೂ ಇರುತ್ತದೆ, ಮೋಕ್ಷಕ್ಕೆ ಕಾರಣವಾಗಿಯೂ ಇರುತ್ತದೆ. ಅವರು ಹೆಚ್ಚಿನ ಶ್ರದ್ಧೆಯಿಂದ ನನ್ನನ್ನೇ ಪರಮಗತಿಯೆಂದು ಭಾವಿಸಿ ಹೀಗೆ ನಡೆದುಕೊಳ್ಳುತ್ತಿರುವ ಭಕ್ತರಾದ್ದರಿಂದ ಅವರು ನನಗೆ ಅತ್ಯಂತ ಪ್ರಿಯರಾಗಿರುತ್ತಾರೆ.

## ಹದಿಮೂರನೆಯ ಅಧ್ಯಾಯ

೧–೨. ಭಗವಂತನು ಹೇಳಿದ್ದೇನೆಂದರೆ : ಅರ್ಜುನನೆ, ಈ ಶರೀರವೇ **ಕ್ಷೇತ್ರವು** ; ಇದನ್ನರಿಯುವ ಆತ್ಮನೇ **ಕ್ಷೇತ್ರಜ್ಞನು**. ಸರ್ವಕ್ಷೇತ್ರಗಳಲ್ಲಿಯೂ ಇರುವ ಈ ಕ್ಷೇತ್ರಜ್ಞನು ನಾನೇ. ಕ್ಷೇತ್ರಕ್ಷೇತ್ರಜ್ಞರ ವಿವೇಕವೇ ತತ್ತ್ವಜ್ಞಾನವು.

೩–೬. ಕ್ಷೇತ್ರದ ಸ್ವರೂಪ, ಅದರ ಕಾರ್ಯ, ಕ್ಷೇತ್ರಜ್ಞನ ಸ್ವರೂಪ, ಕ್ಷೇತ್ರಜ್ಞನನ್ನು ಸರಿಯಾಗಿ ತಿಳಿದುಕೊಳ್ಳುವದಕ್ಕೆ ಬೇಕಾಗುವ ಸಾಧನ– ಇವನ್ನು ಹೇಳುತ್ತೇನೆ, ಕೇಳು. ಋಷಿಗಳೂ ವೇದಗಳೂ ಇದನ್ನು ಬಲುಬಗೆಯಿಂದ ತಿಳಿಸಿಕೊಡುತ್ತಿವೆ. ಅವ್ಯಕ್ತ, ಮಹತ್ತು, ಅಹಂಕಾರ, ಪಂಚಭೂತಗಳು – ಎಂದು ಎಂಟು ಬಗೆಯಾಗಿರುವ ಪ್ರಕೃತಿಯೂ, ಹನ್ನೊಂದು ಇಂದ್ರಿಯಗಳೂ ಐದು ವಿಷಯಗಳೂ ಸೇರಿ ಆಗಿರುವ ಹದಿನಾರು ಬಗೆಯ ವಿಕೃತಿಯೂ ಕ್ಷೇತ್ರವೆನಿಸುತ್ತವೆ. ಇಚ್ಛಾದ್ವೇಷಗಳೇ ಮುಂತಾದ ಅಂತಃಕರಣಧರ್ಮಗಳೂ ಕ್ಷೇತ್ರದಲ್ಲಿಯೇ ಅಡಕವಾಗಿರುತ್ತವೆ.

೭–೧೧. ಕ್ಷೇತ್ರಜ್ಞನ ಸ್ವರೂಪವನ್ನು ತಿಳಿಸುವದಕ್ಕಿಂತ ಮುಂಚೆ ಅದನ್ನು ಮನಗಾಣಲು ಬೇಕಾಗುವ ಸಾಧನಗಳನ್ನು ತಿಳಿಸುವೆನು. ಅಮಾನಿತ್ವ, ಅದಂಭಿತ್ವ, ಅಹಿಂಸೆ, ಕ್ಷಾಂತಿ, ಆರ್ಜವ, ಆಚಾರ್ಯೋಪಾಸನೆ, ಶೌಚ, ಸ್ಥೈರ್ಯ, ಆತ್ಮವಿನಿಗ್ರಹ, ವಿಷಯಭೋಗಗಳಲ್ಲಿ ವೈರಾಗ್ಯ, ಅನಹಂಕಾರ, ಜನ್ಮಮೃತ್ಯುಜರಾವ್ಯಾಧಿಗಳಲ್ಲಿರುವ ದುಃಖದೋಷಗಳನ್ನು ಆಲೋಚಿಸುತ್ತಿರುವದು, ಅಸಕ್ತಿ, ಅನಭಿಷ್ವಂಗ, ಸಮಚಿತ್ತತೆ, ಅನನ್ಯಭಕ್ತಿ, ವಿವಿಕ್ತದೇಶಸೇವಿತ್ವ, ಜನಸಂಸರ್ಗದಲ್ಲಿ ಅರತಿ, ಅಧ್ಯಾತ್ಮಜ್ಞಾನನಿತ್ಯತ್ವ, ತತ್ತ್ವಜ್ಞಾನಾರ್ಥದರ್ಶನ ಎಂಬ ಇಪ್ಪತ್ತು ಸಾಧನಗಳು ಈ ಜ್ಞಾನಕ್ಕೆ ಬೇಕಾಗಿರುವವು. ಇವಕ್ಕೆ ವಿರುದ್ಧವಾದ ಮಾನಿತ್ವ, ದಂಭಿತ್ವ – ಮುಂತಾದವುಗಳೇ ಇದ್ದರೆ ಅಜ್ಞಾನವೇ ಬೆಳೆದು ಸಂಸಾರದಲ್ಲಿ ತೊಳಲುತ್ತಿರಬೇಕಾಗುವದು. ಆದ್ದರಿಂದ ಮುಮುಕ್ಷುವಾದವನು ಅಮಾನಿತ್ವಾದಿಗಳೆಂಬ ಜ್ಞಾನಸಾಧನಗಳನ್ನು ಅವಶ್ಯವಾಗಿ ಸಂಪಾದಿಸಿಕೊಳ್ಳಬೇಕು.

೧೨–೧೭. ಈಗ ಕ್ಷೇತ್ರಜ್ಞನ ಪರಮಾರ್ಥಸ್ವರೂಪವನ್ನು ಹೇಳುವೆನು, ಕೇಳು. ಅದನ್ನು ಅರಿತುಕೊಂಡರೆ ಮೋಕ್ಷವಾಗುತ್ತದೆ. ಅದು ನಿತ್ಯವಾದದ್ದು; ಇದೆಯೆಂದಾಗಲಿ ಇಲ್ಲವೆಂದಾಗಲಿ ಹೇಳಬಹುದಾದ ಇಂದ್ರಿಯಗೋಚರವಸ್ತುಗಳೆಲ್ಲಕ್ಕಿಂತಲೂ ಭಿನ್ನವಾದದ್ದು. ಅದಕ್ಕೆ ಎಲ್ಲೆಲ್ಲಿಯೂ ಕೈ, ಕಾಲು, ಕಣ್ಣು, ತಲೆ, ಮುಖ, ಕಿವಿ – ಇವುಗಳಿರುವವು ; ಅದು ಎಲ್ಲವನ್ನೂ ವ್ಯಾಪಿಸಿಕೊಂಡಿರುವದು. ಅದು ಈ ಎಲ್ಲಾ ಇಂದ್ರಿಯಗಳ ವ್ಯಾಪಾರಗಳನ್ನೂ ತೋರ್ಪಡಿಸಿಕೊಳ್ಳುವದಾದರೂ ಅದಕ್ಕೆ ನಿಜವಾಗಿ ಯಾವ ಇಂದ್ರಿಯವೂ ಇರುವದಿಲ್ಲ. ಅದು

ಒಂದನ್ನೂ ಸೋಂಕದೆಯೇ ಎಲ್ಲವನ್ನೂ ಹಿಡಿದೆತ್ತಿ ನಿಲ್ಲಿಸಿಕೊಂಡಿದೆ. ಯಾವ ಗುಣವೂ ಇಲ್ಲದ್ದಾದರೂ ಗುಣಗಳನ್ನು ಅನುಭವಿಸುತ್ತಿರುತ್ತದೆ. ಅದು ಪ್ರಾಣಿಗಳ ಒಳಗೂ ಹೊರಗೂ ಇರುವದಲ್ಲದೆ ಚರಾಚರವಾದ ಪ್ರಾಣಿಗಳ ದೇಹದ ಸ್ವರೂಪದಿಂದಲೂ ಇರುತ್ತದೆ. ಇಷ್ಟಾದರೂ ಅದರ ಪರಮಾರ್ಥಸ್ವರೂಪವು ಅತ್ಯಂತಸೂಕ್ಷ್ಮವಾಗಿರುತ್ತದೆಯಾದ್ದರಿಂದ ಅದು ಅಜ್ಞರಿಗೆ ತಿಳಿಯದೆ ಎಲ್ಲಿಯೋ ದೂರದಲ್ಲಿರುವಂತಿರುವದು. ತಿಳಿದವರಿಗೆ ಮಾತ್ರ ಅತ್ಯಂತ ಸಮೀಪದಲ್ಲಿರುವದು. ತಾನು ಅಖಂಡವಾಗಿ ಒಂದೇ ಆಗಿದ್ದರೂ ಪ್ರತಿಯೊಬ್ಬ ಜೀವನಲ್ಲಿಯೂ ಬೇರೆಬೇರೆಯಾಗಿದ್ದುಕೊಂಡಿರುವಂತೆ ತೋರುವದು. ಅದು ಸಕಲಭೂತಗಳ ಸೃಷ್ಟಿಸ್ಥಿತಿಲಯಗಳಿಗೂ ಕಾರಣವಾಗಿರುತ್ತದೆ. ಅದು ಜ್ಯೋತಿಗಳಿಗೆ ಜ್ಯೋತಿಯಾಗಿ ಕತ್ತಲೆಯಾಚೆಗೆ ಇರುತ್ತದೆ. ಈವರೆಗೆ ಹೇಳಿದ ಅಮಾನಿತ್ವಾದಿಗಳೆಂಬ ಜ್ಞಾನವೂ ಜ್ಞೇಯವೂ ಫಲರೂಪವಾದ ಜ್ಞಾನವೂ– ಈ ಮೂರೂ ನಮ್ಮೆಲ್ಲರ ಹೃದಯದಲ್ಲಿಯೇ ಇದ್ದುಕೊಂಡಿರುತ್ತದೆ.

೧೮. ಈ ರೀತಿಯಾಗಿ ಕ್ಷೇತ್ರ, ಜ್ಞಾನಸಾಧನ ಮತ್ತು ಜ್ಞೇಯವಾದ ಕ್ಷೇತ್ರಜ್ಞನ ಪರಮಾರ್ಥರೂಪ–ಈ ಮೂರನ್ನೂ ಸಂಕ್ಷೇಪವಾಗಿ ಹೇಳಿದ್ದಾಯಿತು. ನನ್ನ ಭಕ್ತನು ಇದನ್ನು ತಿಳಿದುಕೊಂಡು ನನ್ನ ಸ್ವರೂಪವನ್ನೇ ಹೊಂದುವನು.

೧೯–೨೩. ಪ್ರಕೃತಿಪುರುಷ ಅಥವಾ ಕ್ಷೇತ್ರಕ್ಷೇತ್ರಜ್ಞ– ಎಂಬಿವೆರಡೂ ಪರಮೇಶ್ವರನ ಅನಾದಿಪ್ರಕೃತಿಗಳು. ಇವುಗಳಿಂದಲೇ ಸಕಲಭೂತಗಳ ಉತ್ಪತ್ತಿಯೂ ಆಗಿರುವದು. ಹೇಗೆಂದರೆ : ಕಾರ್ಯಕಾರಣರೂಪವಾಗಿರುವದೆಲ್ಲವೂ ಪ್ರಕೃತಿಯಿಂದಾಗಿರುತ್ತದೆ ; ಸುಖದುಃಖಭೋಗವು ಪುರುಷನಿಂದಾಗಿರುತ್ತದೆ. ಪ್ರಕೃತಿಯಲ್ಲಿರುವ ಮಿಥ್ಯಾಭಿಮಾನದಿಂದ ಗುಣಗಳಲ್ಲಿ ಸಂಗವುಳ್ಳವನಾಗಿ ಪುರುಷನು ಸದಸದ್ಯೋನಿಗಳಲ್ಲಿ ಹುಟ್ಟುತ್ತಾ ಸಂಸಾರದಲ್ಲಿ ತೊಳಲುತ್ತಿರುವನು. ಆದರೆ ದೇಹದಲ್ಲಿರುವ ಈ ಪುರುಷನೇ ತನ್ನ ಪರಮಾರ್ಥಸ್ವರೂಪದಿಂದ ಎಲ್ಲವನ್ನೂ ನೋಡುವ ಚೈತನ್ಯಮಾತ್ರನಾಗಿ ದೇಹೇಂದ್ರಿಯಗಳ ಸಕಲ ವ್ಯಾಪಾರಗಳಿಗೂ ತನ್ನ ಸನ್ನಿಧಿಮಾತ್ರದಿಂದ ಕಾರಣನಾಗಿ ಎಲ್ಲಕ್ಕೂ ಪುಷ್ಟಿಯನ್ನು ಕೊಡುತ್ತಿರುವನು. ಅವೆಲ್ಲವನ್ನೂ ಆಳುವ ಮಹೇಶ್ವರನಾಗಿರುವನು. ಇವನನ್ನು ಪರಮಾತ್ಮನೆಂದೂ ಕರೆಯುತ್ತಾರೆ. ಹೀಗೆಂದು ಪ್ರಕೃತಿಪುರುಷರನ್ನೂ ಗುಣ

ಗಳಿಂದಾಗಿರುವ ಸಂಸಾರವನ್ನೂ ಯಾವನು ವಿಂಗಡಿಸಿ ತಿಳಿದುಕೊಳ್ಳುವನೋ ಅಂಥ ಜ್ಞಾನಿಗೆ ಪುನರ್ಜನ್ಮವಿಲ್ಲ.

೨೪–೨೫. ಈ ಪರಮಾತ್ಮನನ್ನು ಸಾಕ್ಷಾತ್ಕಾರಮಾಡಿಕೊಳ್ಳುವದಕ್ಕೆ ಕೆಲವರು ಧ್ಯಾನವನ್ನು, ಕೆಲವರು ಸಾಂಖ್ಯಯೋಗವನ್ನು, ಮತ್ತೆ ಕೆಲವರು ಕರ್ಮಯೋಗವನ್ನು ಉಪಯೋಗಿಸುತ್ತಾರೆ. ಇನ್ನೂ ಕೆಲವರು ತಮಗೆ ಯಾವದೊಂದು ಮಾರ್ಗವೂ ತಿಳಿಯದ್ದರಿಂದ ದೊಡ್ಡವರು ಹೇಳಿದ ರೀತಿಯಿಂದಲೇ ಭಗವಂತನನ್ನು ಉಪಾಸನೆಮಾಡುತ್ತಾರೆ. ಇವರೆಲ್ಲರಿಗೂ ಮೋಕ್ಷವು ದೊರಕುತ್ತದೆ.

೨೬–೩೦. ಜನ್ಮಸಂಸಾರಕ್ಕೆ ಕಾರಣವಾದದ್ದು ಕ್ಷೇತ್ರಕ್ಷೇತ್ರಜ್ಞರ ಅನ್ಯೋನ್ಯಾಧ್ಯಾಸವು. ಕ್ಷೇತ್ರಗಳು ನಾಶವಾಗುವವು, ಇವುಗಳಲ್ಲಿರುವ ಆತ್ಮನು ಮಾತ್ರ ಅವಿನಾಶಿಯಾಗಿರುವ ಪರಮೇಶ್ವರನು ಎಂದು ಯಾವನು ತಿಳಿದುಕೊಳ್ಳುವನೋ ಅವನೇ ಸರಿಯಾಗಿ ತಿಳಿದುಕೊಂಡಿರುವ ಜ್ಞಾನಿಯು. ಸರ್ವಕ್ಷೇತ್ರಗಳಲ್ಲಿಯೂ ಇರುವ ಪರಮಾತ್ಮನೇ ತಾನೆಂದು ತಿಳಿದುಕೊಂಡಿರುವವನು ಮಿಕ್ಕವರಂತೆ ಅಜ್ಞಾನದಿಂದ ಆತ್ಮಹತ್ಯೆಯನ್ನು ಮಾಡಿಕೊಳ್ಳುವದಿಲ್ಲ. ಪ್ರಕೃತಿಯೇ ಸಕಲಕರ್ಮವನ್ನೂ ಮಾಡುವದು, ನಾನು ಅಕರ್ತನಾದ ಪರಮಾತ್ಮನು – ಎಂದು ತಿಳಿದುಕೊಂಡು ಸಕಲಭೂತಗಳೂ ಆ ಒಬ್ಬ ಪರಮಾತ್ಮನಿಂದಲೇ ಹುಟ್ಟಿ ಅವನ ಆಧಾರದಿಂದಲೇ ನಿಂತಿರುವವೆಂಬುದನ್ನು ಯಾವನು ತಿಳಿದುಕೊಳ್ಳುವನೋ ಅವನು ಆಗ ಬ್ರಹ್ಮವೇ ಆಗುವನು.

೩೧–೩೩. ಈ ಪರಮಾತ್ಮನು ಅನಾದಿಯಾಗಿ ನಿರ್ಗುಣನಾಗಿರುವದರಿಂದ ನಾಶರಹಿತನಾಗಿರುತ್ತಾನೆ. ಇವನು ಶರೀರದಲ್ಲಿದ್ದರೂ ಯಾವ ಕರ್ಮವನ್ನೂ ಮಾಡುವದೂ ಇಲ್ಲ. ಕರ್ಮಫಲದ ಅಂಟು ಇವನಿಗೆ ಹತ್ತಿಕೊಳ್ಳುವದೂ ಇಲ್ಲ. ಆಕಾಶವು ಎಲ್ಲೆಲ್ಲಿಯೂ ಇರುತ್ತಿದ್ದರೂ ಸೂಕ್ಷ್ಮವಸ್ತುವಾದ್ದರಿಂದ ಸ್ಥೂಲವಸ್ತುಗಳ ಅಂಟು ಅದಕ್ಕೆ ಹೇಗೆ ಆಗುವದಿಲ್ಲವೋ ಅದರಂತೆ ಎಲ್ಲೆಲ್ಲಿಯೂ ದೇಹದಲ್ಲಿ ಇದ್ದರೂ ಈ ಪರಮಾತ್ಮನಿಗೆ ಅದರ ದೋಷಗಳು ಹತ್ತುವದಿಲ್ಲ. ಸೂರ್ಯನು ತಾನೊಬ್ಬನೇ ಲೋಕಗಳನ್ನೆಲ್ಲ ಬೆಳಗುತ್ತಿರುವಂತೆ ಈ ಕ್ಷೇತ್ರಜ್ಞರೂಪನಾದ ಪರಮಾತ್ಮನು ಸಕಲಕ್ಷೇತ್ರಗಳನ್ನೂ ಬೆಳಗುತ್ತಾ ಅವುಗಳ ಲೇಪವಿಲ್ಲದೆ ಇರುತ್ತಾನೆ.

೩೪. ಹೀಗೆ ಕ್ಷೇತ್ರಕ್ಕೂ ಕ್ಷೇತ್ರಜ್ಞನಿಗೂ ಇರುವ ತಾರತಮ್ಯವನ್ನು ಕಂಡುಕೊಂಡು ಭೂತಗಳಿಗೆಲ್ಲ ಕಾರಣವಾದ ಪ್ರಕೃತಿಯನ್ನು ಲಯಗೊಳಿಸುವ ಬಗೆಯನ್ನು ಯಾರು ತಿಳಿದುಕೊಳ್ಳುವರೋ ಅವರು ಪರಬ್ರಹ್ಮವನ್ನೇ ಸೇರುತ್ತಾರೆ.

## ಹದಿನಾಲ್ಕನೆಯ ಅಧ್ಯಾಯ

೧–೪. ಕ್ಷೇತ್ರಕ್ಷೇತ್ರಜ್ಞರೆಂಬ ಪ್ರಕೃತಿಗಳಿಂದ ಜಗತ್ತು ಉಂಟಾಗುವ ಬಗೆಯನ್ನೂ ಗುಣತ್ರಯದಿಂದಾಗಿರುವ ಪ್ರಕೃತಿಯ ಸಂಗದಿಂದ ಬಂಧವಾಗಿರುವ ರೀತಿಯನ್ನೂ ಗುಣಗಳನ್ನು ದಾಟುವದಕ್ಕೆ ಉಪಾಯವನ್ನೂ ತಿಳಿಸಬೇಕೆಂದು ಭಗವಂತನು ಇಂತೆಂದನು : ಅರ್ಜುನನೆ, ಯಾವದರ ಜ್ಞಾನದಿಂದ ಪರಮಸಿದ್ಧಿಯಾದ ಮೋಕ್ಷವು ದೊರಕುವದೋ ಅದನ್ನು ಹೇಳುವೆನು, ಕೇಳು. ನಾನು, ನನ್ನ ಪ್ರಕೃತಿ– ಈ ಎರಡರ ಸಂಯೋಗದಿಂದಲೇ ಜಗತ್ತು ಉಂಟಾಗಿರುವದು. ದೇವಾದಿಸಮಸ್ತಮೂರ್ತಿಗಳೂ ಈ ಸಂಯೋಗ ದಿಂದಲೇ ಆಗಿರುತ್ತಾರೆ. ಅವುಗಳಿಗೆ ನನ್ನ ಪ್ರಕೃತಿಯು ಉಪಾದಾನವು. ನಾನು ನಿಮಿತ್ತವು.

೫–೯. ಪ್ರತಿಯೊಬ್ಬ ಜೀವನೂ ಪ್ರಕೃತಿಯ ಮೂರು ಗುಣಗಳಿಂದ ಬದ್ಧನಾಗಿರುತ್ತಾನೆ. ಇವುಗಳಲ್ಲಿ ಸತ್ತ್ವವು ಜೀವನನ್ನು ಸುಖಜ್ಞಾನಗಳ ಸಂಗ ದಿಂದ ಬಂಧಿಸುತ್ತದೆ. ರಜಸ್ಸು ತೃಷ್ಣೆ, ವಿಷಯಸಂಗ, ಕರ್ಮಸಂಗ – ಇವು ಗಳಿಂದ, ಬಂಧಿಸುತ್ತದೆ. ತಮೋಗುಣವು ಅಜ್ಞಾನ, ಪ್ರಮಾದ, ಆಲಸ್ಯ, ನಿದ್ರೆ– ಇವುಗಳಿಂದ ಬಂಧಿಸುತ್ತದೆ.

೧೦–೧೩. ಈ ಮೂರು ಗುಣಗಳಲ್ಲಿ ಒಂದೊಂದೂ ಮಿಕ್ಕೆರಡನ್ನು ಮೆಟ್ಟಿ ಯಾವಾಗ ತಾನೇ ತಲೆಯೆತ್ತುವದೋ ಆಗ ಅದು ಜೀವನನ್ನು ತನ್ನ ಸ್ವಭಾವದಿಂದ ಬಂಧಿಸುತ್ತದೆ. ಯಾವಾಗ ಯಾವ ಗುಣದ ಕಾರ್ಯವು ಜೀವನಲ್ಲಿ ವಿಶೇಷವಾಗಿ ಕಾಣಿಸಿಕೊಳ್ಳುವದೋ ಆಗ ಆ ಗುಣವು ತಲೆಯೆತ್ತಿರುವದೆಂದು ನಿಶ್ಚಯಿಸಬೇಕು.

೧೪–೧೮. ಜೀವನು ಸಾಯುವಾಗ ಯಾವ ಗುಣದ ಕಾರ್ಯವು ಹೆಚ್ಚಾಗಿರುವದೋ ಅದಕ್ಕೆ ಅನುಗುಣವಾಗಿ ಸತ್ತಮೇಲೆ ಸಾತ್ತ್ವಿಕ, ಅಥವಾ ತಾಮಸವಾದ ಲೋಕವನ್ನು ಪಡೆಯುತ್ತಾನೆ. ಅಂತೂ ಈ ಜನ್ಮದಲ್ಲಿಯೂ ಜನ್ಮಾಂತರದಲ್ಲಿಯೂ, ಈ ಲೋಕದಲ್ಲಿಯೂ ಪರಲೋಕದಲ್ಲಿಯೂ ಎಲ್ಲೆಲ್ಲಿಯೂ ಸತ್ತ್ವದಿಂದ ಜ್ಞಾನಾದಿಗಳು, ರಜಸ್ಸಿನಿಂದ ಲೋಭಾದಿಗಳು, ತಮಸ್ಸಿನಿಂದ ಅಜ್ಞಾನಾದಿಗಳು – ಹೀಗೆಯೇ ನಿಯತವಾಗಿ ಫಲಗಳಾಗುತ್ತಿರುವವು.

೧೯–೨೦. ಜೀವನು ಎಲ್ಲಿಯವರೆಗೆ ತಾನೇ ಕರ್ತೃವೆಂದೂ ಭೋಕ್ತೃವೆಂದೂ ತಿಳಿದುಕೊಂಡಿರುವನೋ ಅಲ್ಲಿಯವರೆಗೂ ಈ ಗುಣಗಳಿಂದಾಗುವ ಬಂಧವು ಅವನಿಗೆ ತಪ್ಪದು. ಯಾವಾಗ 'ಗುಣಗಳೇ ಕರ್ತೃಗಳು, ನಾನು ಅಸಂಗನು' ಎಂಬ ಜ್ಞಾನವನ್ನು ಪಡೆದುಕೊಳ್ಳುವನೋ ಆಗ ಪರಮಾತ್ಮಸ್ವರೂಪವನ್ನೇ ಪಡೆದುಕೊಳ್ಳುತ್ತಾನೆ. ಜನ್ಮಾದಿದುಃಖಗಳಿಂದ ಬಿಡುಗಡೆಯನ್ನೂ ಹೊಂದುತ್ತಾನೆ. ಅಂಥವನೇ ಜೀವನ್ಮುಕ್ತನು.

೨೧–೨೫. ಹೀಗೆ ಮೂರು ಗುಣಗಳನ್ನೂ ದಾಟಿ ಮುಕ್ತನಾದವನ ಲಕ್ಷಣವನ್ನು ಹೇಳುತ್ತೇನೆ ಕೇಳು : ಅವನು ಗುಣಗಳ ಧರ್ಮವಾದ ಜ್ಞಾನಾದಿಗಳು ಬಂದರೂ ಹೋದರೂ ಮನಸ್ಸಿನಲ್ಲಿ ಏರುಪೇರಿಲ್ಲದೆ ಇರುತ್ತಾನೆ. ಗುಣಗಳೇ ತಮ್ಮ ತಮ್ಮ ವ್ಯಾಪಾರವನ್ನು ಮಾಡುತ್ತವೆ– ಎಂದು ತಿಳಿದು ಆ ಗುಣಗಳ ಕಾರ್ಯದಿಂದ ಒಂದಿಷ್ಟೂ ಅಲುಗಾಡದೆ ತಾನು ಅಸಂಗನಾಗಿಯೇ ಇದ್ದುಕೊಂಡಿರುತ್ತಾನೆ. ಸುಖದುಃಖಗಳಲ್ಲಿ ಯಾವದು ಬಂದರೂ ವಿಚಾರವಿಲ್ಲದೆ ಇರುತ್ತಾನೆ. ತನಗೆ ''ಇಂಥದ್ದು ಬೇಕು, ಇಂಥದ್ದು ಬೇಡ'' ಎಂಬುದಿಲ್ಲದೆ ಮಣ್ಣುಹೆಂಟೆ, ಕಲ್ಲು , ಚಿನ್ನ – ಇವುಗಳಲ್ಲಿ ಒಂದೇ ಭಾವವುಳ್ಳವನಾಗಿ ಔದಾಸೀನ್ಯದಿಂದ ಇರುತ್ತಾನೆ. ಅವನಿಗೆ ಶತ್ರುಮಿತ್ರರಿಲ್ಲ, ಮಾನಾಪಮಾನಗಳಿಂದಾಗುವ ಹರ್ಷಖೇದಗಳಿರುವದಿಲ್ಲ. ಅವನು ತನಗಾಗಿ ಯಾವದೊಂದು ಕಾರ್ಯವನ್ನೂ ಕೈಗೊಳ್ಳುವದಿಲ್ಲ.

೨೬–೨೭. ಈ ತ್ರಿಗುಣಾತೀತತತ್ತ್ವಸ್ಥಿತಿಯು ಬರಬೇಕಾದರೆ ಸಾಧಕನು ಮೇಲೆ ಹೇಳಿದ ಧರ್ಮಗಳನ್ನು ಅಳವಡಿಸಿಕೊಳ್ಳಬೇಕಲ್ಲದೆ ಮುಖ್ಯವಾಗಿ ಪರಮೇಶ್ವರನಾದ ನನ್ನನ್ನು ಅನನ್ಯಭಕ್ತಿಯಿಂದ ಬಿಡದೆ ಭಜಿಸುತ್ತಿರಬೇಕು.

ಅಂಥವನೇ ಈ ಗುಣಗಳನ್ನು ಮೀರಿ ಬ್ರಹ್ಮಸ್ವರೂಪನಾಗುವನು. ಏಕೆಂದರೆ ಬ್ರಹ್ಮಕ್ಕೆ ಪ್ರತಿಷ್ಠೆಯು ನಾನು ; ಅದನ್ನು ಪಡೆಯುವದಕ್ಕೆ ಬೇಕಾದ ಜ್ಞಾನಕ್ಕೂ ಜ್ಞಾನದಿಂದ ಪಡೆದುಕೊಳ್ಳಬೇಕಾಗಿರುವ ನಿತ್ಯಸುಖಕ್ಕೂ ನಾನೇ ಆಶ್ರಯನು.

## ಹದಿನೈದನೆಯ ಅಧ್ಯಾಯ

೧–೩. ಭಗವಂತನಿಂತೆಂದನು : ಈ ಸಂಸಾರವೆಂಬ ವೃಕ್ಷವು ಪರಮ ಸೂಕ್ಷ್ಮವಾದ ಉತ್ಕೃಷ್ಟವಾದ ಬ್ರಹ್ಮವೆಂಬ ಬೇರಿನಿಂದ ಹುಟ್ಟಿ ಕೆಳಗಡೆಗೆ ಬೆಳೆದುಕೊಂಡು ಎಂದಿಗೂ ಸವೆಯದೆ ಹಬ್ಬಿಕೊಂಡಿರುವದು. ಈ ಸಂಸಾರವನ್ನು ವೇದಗಳೆಂಬ ಎಲೆಗಳು ರಕ್ಷಣೆಗೈಯುತ್ತಿರುವವು. ಇದರ ಕೊಂಬೆಗಳು ಕೆಳಕ್ಕೂ ಮೇಲಕ್ಕೂ ಚಾಚಿರುತ್ತವೆ. ಅವು ಗುಣಗಳಿಂದ ಬೆಳೆದುಕೊಂಡಿವೆ, ವಿಷಯಗಳಿಂದ ಚಿಗುರುತ್ತಿವೆ. ಕರ್ಮದಿಂದ ಇದಕ್ಕೆ ಮನುಷ್ಯಲೋಕದಲ್ಲಿ ಬಿಳಲುಗಳು ಬಿಟ್ಟುಕೊಂಡಿರುತ್ತವೆ. ಇದು ತೋರಿಕೆಯ ರೂಪವುಳ್ಳದ್ದು, ತುದಿಮೊದಲು ನಡುವೆಗಳಿಲ್ಲದ್ದು.

೪–೬. ಜ್ಞಾನಿಗಳು ಈ ವೃಕ್ಷವನ್ನು ಬಲವಾದ ಅಸಂಗಶಸ್ತ್ರದಿಂದ ಕತ್ತರಿಸಿಹಾಕಿ ಸಂಸಾರಕ್ಕೆ ಮರಳಿಬರದಂತಿರುವ ಸರ್ವಕಾರಣನಾದ, ಪರಮಪುರುಷನನ್ನು ಹುಡುಕಿ ಶರಣುಹೊಂದಿ ಸಕಲಚಿತ್ತದೋಷಗಳನ್ನೂ ನೀಗಿಕೊಂಡು ಅವ್ಯಯವಾದ ಸ್ವಪ್ರಕಾಶವಾದ ವಿಷ್ಣುಪದವನ್ನು ಸೇರುವರು.

೭–೧೧. ಜೀವನು ಪರಮಾರ್ಥವಾಗಿ ನನ್ನದೇ ಆಗಿರುವ ಅಂಶವಾಗಿ ನಿತ್ಯಶುದ್ಧಬುದ್ಧಮುಕ್ತನೇ ಆಗಿರುತ್ತಿದ್ದರೂ ಆ ತನ್ನ ಸ್ವರೂಪವನ್ನು ಅರಿಯದೆ ವಿಷಯಾಸಕ್ತಿಯಿಂದ ಸಂಸಾರದಲ್ಲಿ ತೊಳಲುತ್ತಿರುವನು. ಯಾರು ಪಾಪವನ್ನು ತೊರೆದು ಶಮದಮಾದಿಗಳನ್ನು ಸಾಧಿಸಿಕೊಂಡು ಪ್ರಯತ್ನಮಾಡುವರೋ ಅವರು ಪ್ರಯತ್ನಪೂರ್ವಕವಾಗಿ ಜ್ಞಾನವನ್ನು ಸಂಪಾದಿಸಿಕೊಂಡು ತಮ್ಮ ಪರಮಾರ್ಥವಾದ ಈ ಸ್ವರೂಪವನ್ನು ಕಂಡುಕೊಳ್ಳುವರು.

೧೨–೧೫. ನನ್ನ ಸ್ವರೂಪವು ಸರ್ವಾತ್ಮವಾಗಿರುವದರಿಂದ ಸೂರ್ಯ, ಚಂದ್ರ, ಅಗ್ನಿ, ಭೂಮಿ, ಸೋಮ, ಉದರದಲ್ಲಿರುವ ವೈಶ್ವಾನರಾಗ್ನಿ– ಮುಂತಾದ ರೂಪಗಳಿಂದ ಸಕಲವ್ಯವಹಾರಗಳನ್ನೂ ನೆರವೇರಿಸುತ್ತಿರುವದಲ್ಲದೆ ಸಕಲಪ್ರಾಣಿಗಳ ಹೃದಯದಲ್ಲಿ ಅವರ ಆತ್ಮರೂಪದಿಂದಲೇ ಇದ್ದುಕೊಂಡಿರುತ್ತದೆ. ನನ್ನಿಂದಲೇ ಎಲ್ಲರಿಗೂ ನೆನಪು, ಜ್ಞಾನ, ಜ್ಞಾನದ ಮರೆ– ಇವುಗಳು ಆಗುತ್ತಿರುವವು. ವೇದ್ಯವೇದಿತೃವೇದನಗಳೆಲ್ಲವೂ ನಾನೇ.

೧೬–೧೯. ಇರವಿನ ರಾಶಿಯನ್ನೆಲ್ಲ ಮೂರು ಪಂಗಡಗಳಾಗಿ ವಿಂಗಡಿಸಬಹುದು. ಇಲ್ಲಿ ಮೂರಕ್ಕೂ ಪುರುಷನೆಂದು ಹೆಸರು. ಇವುಗಳಲ್ಲಿ ಭೂತಭೌತಿಕರೂಪದಿಂದ ಹೊರಗೆ ತೋರುತ್ತಿರುವ ಕಾರ್ಯಪ್ರಪಂಚವೇ ಒಂದು ರಾಶಿ. ಇದಕ್ಕೆ ಕ್ಷರಪುರುಷ ಎಂದು ಹೆಸರು ; ಏಕೆಂದರೆ ಇದು ವಿಕಾರವಾಗುತ್ತಿದ್ದು ಕೊನೆಗೆ ನಾಶವಾಗುತ್ತದೆ. ಈ ಕ್ಷರವು ಪ್ರಲಯದಲ್ಲಿ ಯಾವ ಬೀಜರೂಪವನ್ನು ಹೊಂದುವದೋ ಅದು ಎರಡನೆಯ ರಾಶಿ. ಅದಕ್ಕೆ ಅಕ್ಷರಪುರುಷ ಎಂದು ಹೆಸರು ; ಏಕೆಂದರೆ ಅದು ಸಂಸಾರವಿರುವವರೆಗೂ ತನ್ನ ಮಾಯಾರೂಪದಿಂದ ನಾಶವಾಗದೆ ಇರುತ್ತಿರುವದು. ಈ ಕ್ಷರಾಕ್ಷರಗಳೆರಡನ್ನೂ ಬೆಳಗುತ್ತಾ ತನ್ನ ಇರವಿನಿಂದ ಅವಕ್ಕೂ ಇರವನ್ನು ಕೊಡುತ್ತಾ ಅವುಗಳಿಗೆ ತಿರುಳಾಗಿರುವ ನಿರ್ವಿಕಾರನಾದ ಪರಮಾತ್ಮನೇ ಇವೆರಡಕ್ಕಿಂತಲೂ ಅತ್ಯಂತ ವಿಲಕ್ಷಣಸ್ವಭಾವವುಳ್ಳ ಮೂರನೆಯ ರಾಶಿ. ಕ್ಷರಾಕ್ಷರಗಳು ಪರತಂತ್ರವಾದ ಇರವುಗಳುಳ್ಳವಾದ್ದರಿಂದ ಅವೆರಡು ರಾಶಿಗಳನ್ನೂ ಪುರುಷನೆನ್ನುವದು ಉಪಚಾರಕ್ಕೆ. ಅವುಗಳ ಆತ್ಮನೇ ಆಗಿರುವ ನಾನು ನಿಜವಾಗಿಯೂ ಪುರುಷನಾಗಿರುವದರಿಂದ ಪುರುಷೋತ್ತಮನು. ಆದ್ದರಿಂದಲೇ ವೇದದಲ್ಲಿಯೂ ಲೋಕದಲ್ಲಿಯೂ ನನಗೆ ಪುರುಷೋತ್ತಮನೆಂಬ ಹೆಸರು ಪ್ರಸಿದ್ಧವಾಗಿರುತ್ತದೆ. ಇದನ್ನು ಇದ್ದದ್ದು ಇದ್ದಂತೆ ಅರಿತುಕೊಂಡವನು ಸರ್ವಾತ್ಮಭಾವವನ್ನು ಹೊಂದಿ ನನ್ನನ್ನು ಸರ್ವಭಾವದಿಂದಲೂ ಭಜಿಸಿ ಸರ್ವಜ್ಞನಾಗುವನು.

೨೦. ಇದೇ ಇಡಿಯ ಶಾಸ್ತ್ರದ ಒಳಗುಟ್ಟು. ಇದನ್ನು ಅರಿತುಕೊಂಡವನೇ ಜ್ಞಾನಿಯು, ಕೃತಕೃತ್ಯನು. ಏಕೆಂದರೆ ಪುರುಷೋತ್ತಮತತ್ತ್ವವನ್ನು ಅರಿತು

ಕೊಂಡಮೇಲೆ ಅರಿಯತಕ್ಕದ್ದಾಗಲಿ, ಮಾಡತಕ್ಕದ್ದಾಗಲಿ ಮತ್ತೇನೂ ಉಳಿದಿರುವದಿಲ್ಲ.

## ಹದಿನಾರನೆಯ ಅಧ್ಯಾಯ

೧–೪. ಜ್ಞಾನದಿಂದ ಮುಕ್ತನಾಗಿ ಕೃತಕೃತ್ಯನಾಗುವವನಿಗೆ ಇರಬೇಕಾದ ದೈವಸಂಪತ್ತನ್ನು ತಿಳಿಸುವದಕ್ಕೆಂದು ಭಗವಂತನಿಂತೆಂದನು : ಅಂಜಿಕೆಯಿಲ್ಲದಿರುವದು, ಅಂತಃಕರಣಶುದ್ಧಿ , ಜ್ಞಾನಯೋಗಗಳಲ್ಲಿ ನೆಲೆನಿಂತಿರುವದು, ದಾನ, ದಮ, ಯಜ್ಞ, ವೇದಾಧ್ಯಯನ, ತಪಸ್ಸು, ಋಜುತೆ, ಅಹಿಂಸೆ, ಸತ್ಯ, ಅಕ್ರೋಧ, ಸಂನ್ಯಾಸ, ಶಮ, ಚಾಡಿಯನ್ನು ಹೇಳುವ ಸ್ವಭಾವವಿಲ್ಲದಿರುವಿಕೆ, ಭೂತಗಳಲ್ಲಿ ದಯೆ, ಚಂಚಲತೆಯಿಲ್ಲದಿರುವದು, ಮೃದುತ್ವ, ಲಜ್ಜೆ , ಚಾಪಲ್ಯವಿಲ್ಲದಿರುವಿಕೆ, ಪ್ರಗಲ್ಭನಾಗಿರುವದು, ಕ್ಷಮೆ, ಧೈರ್ಯ, ಶುಚಿತ್ವ, ಅದ್ರೋಹ, ಅಭಿಮಾನವಿಲ್ಲದಿರುವದು – ಇವೆಲ್ಲವೂ ದೈವಸಂಪತ್ತಿಗಾಗಿ ಹುಟ್ಟಿದವನಿಗೆ ಉಂಟಾಗುತ್ತವೆ. ದಂಭ, ದರ್ಪ, ಅತ್ಯಭಿಮಾನ, ಕ್ರೋಧ, ಕಟುವಾದ ಮಾತು, ಅಜ್ಞಾನ– ಇವು ಆಸುರಸಂಪತ್ತಿಗಾಗಿ ಹುಟ್ಟಿರುವವನಿಗೆ ಉಂಟಾಗಿರುತ್ತವೆ.

೫. ಈ ಎರಡರಲ್ಲಿ ದೈವಸಂಪತ್ತಿನಿಂದ ಮೋಕ್ಷವುಂಟಾಗುತ್ತದೆ. ಆಸುರ ಸಂಪತ್ತಿನಿಂದ ಬಂಧವುಂಟಾಗುತ್ತದೆ. ನಿನಗೆ ದೈವಸಂಪತ್ತಿರುವದರಿಂದ ನೀನು ಚಿಂತಿಸಬೇಕಾದ್ದಿಲ್ಲ.

೬–೧೮. ಈ ಲೋಕದಲ್ಲಿ ಸೃಷ್ಟವಾಗಿರುವ ಪ್ರಾಣಿಗಳಿಗೆಲ್ಲ ಈ ಎರಡರಲ್ಲಿ ಒಂದು ಸಂಪತ್ತು ಇರುತ್ತದೆ. ಆಸುರಸಂಪತ್ತನ್ನು ಬಿಟ್ಟರೆ ಮಾತ್ರ ಅಧ್ಯಾತ್ಮಸಾಧನವು ಅಳವಡುತ್ತದೆಯಾದ್ದರಿಂದ ಆ ಸಂಪತ್ತನ್ನು ವಿವರಿಸಿ ಹೇಳುವೆನು, ಕೇಳು. ಆಸುರಸಂಪತ್ತಿನವರಿಗೆ ಯಾವದನ್ನು ಮಾಡಬೇಕು, ಯಾವದನ್ನು ಬಿಡಬೇಕು – ಎಂಬುದು ತಿಳಿದಿರುವದಿಲ್ಲ. ಅವರಲ್ಲಿ ಶುಚಿತ್ವವಿರು

ವದಿಲ್ಲ, ಆಚಾರವಿರುವದಿಲ್ಲ, ಸತ್ಯವಿರುವದಿಲ್ಲ. ಈ ಜಗತ್ತಿನಲ್ಲಿರುವವರೆಲ್ಲ ಅಸತ್ಯವಂತರೆಂದು ಅವರು ಭಾವಿಸುವರು ; ಪ್ರಜೆಗಳು ಕಾಮಹೇತುವಿನಿಂದ ಹುಟ್ಟುವರೇ ಹೊರತು ಧರ್ಮಾಧರ್ಮವೆಂಬ ನಿಮಿತ್ತವಾಗಲಿ ಅದಕ್ಕೆ ಅನುಗುಣವಾಗಿ ಫಲವನ್ನು ಕೊಡುವ ಈಶ್ವರನಾಗಲಿ ಇಲ್ಲ – ಎಂದೇ ಅವರ ಭಾವನೆ. ಈ ದೃಷ್ಟಿಯನ್ನವಲಂಬಿಸಿ ಅವರು ಅಧ್ಯಾತ್ಮಸಾಧನವನ್ನೆಲ್ಲ ತ್ಯಜಿಸಿ ಪರಿಚ್ಛಿನ್ನಬುದ್ಧಿಯುಳ್ಳವರಾಗಿ ಲೋಕಕ್ಷಯಕಾರಕವಾದ ಉಗ್ರಕರ್ಮಗಳಲ್ಲಿಯೇ ನಿರತರಾಗಿರುತ್ತಾರೆ. ಅವರ ಕಾಮವು ಎಂದಿಗೂ ಪೂರೈಸುವಹಾಗಿರುವದಿಲ್ಲ. ಅವರು, ದಂಭ, ಮದ, ಅಭಿಮಾನ– ಇವುಗಳಿಂದ ಕೂಡಿ ಕೆಟ್ಟ ಸಂಕಲ್ಪದಿಂದ ಪಾಪಮಾರ್ಗದಲ್ಲಿಯೇ ಗೊತ್ತಾಗಿ ನಡೆಯುತ್ತಿರುವರು. ಅವರ ಯೋಚನೆಯು ಅಷ್ಟಿಷ್ಟಲ್ಲ ; ಅದು ಸಾಯುವವರೆಗೂ ಮುಗಿಯದೆ ಇರುತ್ತದೆ. ಕಾಮವೇ ಅವರಿಗೆ ಮುಖ್ಯ ಪುರುಷಾರ್ಥ. ನೂರಾರು ಆಶೆಗಳ ಹಗ್ಗಗಳ ಬಿಗಿತಕ್ಕೆ ಸಿಕ್ಕಿ ಕಾಮಕ್ರೋಧಗಳಲ್ಲಿಯೇ ನಿಂತು ಅನ್ಯಾಯದಿಂದಲೇ ಧನಸಂಪಾದನೆಯನ್ನು ಮಾಡಿಕೊಂಡು ಭೋಗಿಸುವದಕ್ಕೆ ಹವಣಿಸುತ್ತಿರುತ್ತಾರೆ. ಈ ಧನವು ಸಿಕ್ಕಿತು, ಇದು ಸಿಕ್ಕಬೇಕು ; ಈ ನನ್ನ ಕಲ್ಪನೆಯನ್ನು ಈಡೇರಿಸಿಕೊಳ್ಳುವೆನು ; ಇವರನ್ನು ಗೆದ್ದೆನು, ಉಳಿದವರನ್ನು ಗೆಲ್ಲಬೇಕು ; ಈ ಹಗೆಯನ್ನು ಕೊಂದೆನು, ಉಳಿದವರನ್ನು ಕೊಲ್ಲುವೆನು ; ನಾನು ಎಲ್ಲರನ್ನೂ ಆಳುತ್ತೇನೆ, ನಾನು ಎಲ್ಲಾ ಭೋಗಗಳನ್ನೂ ಅನುಭವಿಸುತ್ತಿದೇನೆ ; ನಾನು ಸಿದ್ಧನು, ಬಲವಂತನು, ಸುಖಿಯು, ಧನಾಢ್ಯನು, ಸತ್ಕುಲಪ್ರಸೂತನು, ನನಗೆ ಸಮಾನರಾದವರು ಯಾರಿದಾರೆ ? ಯಾಗಮಾಡುವೆನು, ದಾನಮಾಡುವೆನು, ಸುಖಪಡುವೆನು – ಎಂದು ಅಜ್ಞಾನದಿಂದ ಅವರು ಎಲ್ಲಾ ಬಗೆಯಿಂದಲೂ ತಮ್ಮನ್ನು ತಾವೇ ಮೆಚ್ಚಿಕೊಳ್ಳುತ್ತಾ ಬಗೆಬಗೆಯ ಚಿತ್ತವೃತ್ತಿಗಳಿಂದ ಕೂಡಿ ಭೋಗಗಳಲ್ಲಿಯೇ ಪ್ರಸಕ್ತರಾಗಿ ದುರ್ಗತಿಯನ್ನು ಪಡೆಯುತ್ತಾರೆ. ಅವರು ಧನಮಾನಮದಗಳಿಂದೊಡಗೂಡಿ ಮಾಡುತ್ತಿರುವ ಕರ್ಮಗಳು ತೋರುಗಾಣಿಕೆಯ ಕರ್ಮಗಳು. ಅವರಿಗೆ ಅಹಂಕಾರ, ಬಲ, ದರ್ಪ, ಕಾಮ, ಕ್ರೋಧ – ಇವೇ ಆಶ್ರಯವು. ನನ್ನನ್ನು ಹಗೆಮಾಡುವದೇ ಅವರ ಸ್ವಭಾವವಾದ್ದರಿಂದ ತಮಗೂ ಮತ್ತೊಬ್ಬರಿಗೂ ಅಹಿತವನ್ನೇ ಮಾಡುತ್ತಿರುವರು.

೧೯–೨೦. ಹೀಗೆ ನನ್ನನ್ನು ದ್ವೇಷಿಸುತ್ತಿರುವ ಆ ಕ್ರೂರರನ್ನೂ ಅವರಿಗೆ ತಕ್ಕ ಆಸುರಜನ್ಮಗಳಲ್ಲಿಯೇ ಮತ್ತೆಮತ್ತೆ ಹಾಕುತ್ತಿರುವೆನು. ಅವರಿಗೆ ಪರಮಾತ್ಮ ಪ್ರಾಪ್ತಿಯೆಂಬುದಿಲ್ಲವೇ ಇಲ್ಲ. ಬರುಬರುತ್ತಾ ಹೆಚ್ಚುಹೆಚ್ಚು ಕೆಟ್ಟ ಜನ್ಮಗಳಲ್ಲಿ ಹುಟ್ಟಿ ಕೊನೆಗೆ ಅವರು ಅತ್ಯಂತವಾಗಿ ಅಧಮಗತಿಯನ್ನು ಪಡೆಯುತ್ತಾರೆ.

೨೧–೨೨. ಕಾಮ, ಕ್ರೋಧ, ಲೋಭ – ಈ ಮೂರು ನರಕಕ್ಕೆ ಕಾರಣ ವಾಗಿರುವ ಆಸುರಸಂಪತ್ತಿನ ಸಂಗ್ರಹವು. ಆದ್ದರಿಂದ ವಿವೇಕಿಯಾದವನು ಈ ಮೂರನ್ನೂ ಬಿಟ್ಟು ತನ್ನ ಮುಕ್ತಿಗೆ ಕಾರಣವಾದ ಸಾಧನಗಳನ್ನು ಮಾಡಿಕೊಳ್ಳ ಬೇಕು.

೨೩–೨೪. ಶಾಸ್ತ್ರದಲ್ಲಿ ಯಾವದನ್ನು ಮಾಡಬೇಕು . ಯಾವದನ್ನು ಬಿಡಬೇಕು ? ಎಂಬುದನ್ನು ತಿಳಿಸಿರುತ್ತದೆ. ಆದ್ದರಿಂದ ಅದನ್ನು ತಿಳಿದುಕೊಂಡು ಕರ್ಮವನ್ನು ಮಾಡಬೇಕು. ಯಾರು ಶಾಸ್ತ್ರವಿಧಿಯನ್ನೇ ಕೈಬಿಟ್ಟು ಮನಸ್ಸಿಗೆ ತೋಚಿದಂತೆ ನಡೆಯುವರೋ ಅವರಿಗೆ ಇಲ್ಲಿಯೂ ಸುಖವಿಲ್ಲ. ಪರದಲ್ಲಿಯೂ ಗತಿಯಿಲ್ಲ. ಆದ್ದರಿಂದ ನೀನು ಶಾಸ್ತ್ರವಿಧಾನದಂತೆಯೇ ಕರ್ಮವನ್ನು ಮಾಡುವದು ಒಳ್ಳೆಯದು.

## ಹದಿನೇಳನೆಯ ಅಧ್ಯಾಯ

೧–೬. ಶಾಸ್ತ್ರವಿಧಾನವನ್ನು ಅನುಸರಿಸಿ ಕರ್ಮವನ್ನು ಮಾಡಬೇಕೆಂದು ಭಗವಂತನು ಹೇಳಿದ್ದನ್ನು ಕೇಳಿ ಅರ್ಜುನನಿಂತೆಂದನು : ಭಗವಂತನೆ, ಯಾರು ಶಾಸ್ತ್ರವಿಧಿಯ ಅರಿವಿಲ್ಲದೆ ಶ್ರದ್ಧೆಯಿಂದ ಶಿಷ್ಟಾಚಾರವನ್ನನುಸರಿಸಿ ಕರ್ಮವನ್ನು ಮಾಡುವರೋ ಅವರ ಕರ್ಮವು ಸಾತ್ತ್ವಿಕವೊ, ರಾಜಸವೊ, ತಾಮಸವೊ ? ಇದಕ್ಕೆ ಶ್ರೀಕೃಷ್ಣಭಗವಂತನು ಹೇಳಿದ ಉತ್ತರವೇನೆಂದರೆ : ಜನರಿಗೆ ಉಂಟಾಗುವ ಶ್ರದ್ದೆಯು ಅವರವರ ಸ್ವಭಾವಕ್ಕನುಸರಿಸಿ ಈ ಮೂರು ವಿಧವಾಗಿಯೂ ಆಗಬಹುದು. ಆದ್ದರಿಂದ ಅವರವರ ಶ್ರದ್ಧೆಗನುಗುಣವಾಗಿ ಅವರವರ ಸ್ವಭಾವವನ್ನು ಗೊತ್ತುಪಡಿಸಬೇಕು. ಹೇಗೆಂದರೆ ಸಾತ್ತ್ವಿಕರು

ದೇವತೆಗಳನ್ನೂ ರಾಜಸರು ಯಕ್ಷರಾಕ್ಷಸರನ್ನೂ ತಾಮಸರು ಭೂತಪ್ರೇತ ಗಳನ್ನೂ ಪೂಜಿಸುತ್ತಾರೆ. ಶಾಸ್ತ್ರವು ಹೇಳಿದ ರೀತಿಯನ್ನು ಲೆಕ್ಕಿಸದೆ ದಂಭಾ ಹಂಕಾರಗಳಿಂದ ಕೂಡಿ ಕಾಮರಾಗಬಲದಿಂದಲೇ ಶರೀರವನ್ನು ದಂಡಿಸುತ್ತಾ ಘೋರವಾದ ತಪಸ್ಸನ್ನು ಮಾಡುವವರು ಆಸುರನಿಶ್ಚಯದವರೆಂದು ತಿಳಿಯಬೇಕು.

೭–೨೨. ಆಹಾರ, ಯಜ್ಞ, ದಾನ, ತಪಸ್ಸು – ಇವೆಲ್ಲವೂ ಅವರವರ ಅಂತಸ್ಸಿಗೆ ತಕ್ಕಂತೆ ಮೂರು ಬಗೆಯಾಗಿರುತ್ತವೆ. ಹೇಗೆಂದರೆ : ಸಾತ್ತ್ವಿಕರು ಆಯುಸ್ಸನ್ನೂ ಸತ್ತ್ವವನ್ನೂ ಬಲವನ್ನೂ ಆರೋಗ್ಯವನ್ನೂ ಸುಖವನ್ನೂ ಪ್ರೀತಿಯನ್ನೂ ಹೆಚ್ಚಿಸುವ ರಸವತ್ತಾದ ಜಿಡ್ಡಾದ ಗಟ್ಟಿಯಾದ ಹೃದಯಂಗಮ ವಾದ ಆಹಾರವನ್ನು ಮೆಚ್ಚುವರು ; ರಾಜಸರು ಬಹಳವಾಗಿ ಕಹಿ, ಹುಳಿ, ಉಪ್ಪು, ಬಿಸಿ, ಕಾರ, ಒಣಕಲು ; ನಾಲಗೆಯನ್ನುರಿಸುವದು – ಇಂಥ ದುಃಖಪ್ರದವಾದ ಆಹಾರವನ್ನು ಮೆಚ್ಚುವರು. ತಾಮಸರು ಎಂಜಲು, ತಂಗಳು, ಹಳಸಿದ್ದು, ಕೊಳೆತದ್ದು – ಮುಂತಾದ ಕೆಟ್ಟಆಹಾರವನ್ನೇ ಮೆಚ್ಚುವರು. ಇದರಂತೆ ಫಲಾಕಾಂಕ್ಷೆಯಿಲ್ಲದೆ ಶಾಸ್ತ್ರದಲ್ಲಿ ವಿಧಿಸಿದೆಯೆಂಬ ಕಾರಣದಿಂದ ಸಾತ್ತ್ವಿಕರು ಯಜ್ಞವನ್ನು ಮಾಡುವರು. ಫಲದಾಸೆಯಿಂದ ದಂಭದಿಂದ ರಾಜಸರು ಮಾಡುವರು. ಶ್ರದ್ಧೆಯಿಲ್ಲದೆ ಶಾಸ್ತ್ರವನ್ನು ಲೆಕ್ಕಿಸದೆ, ಅಂಗವೈಕಲ್ಯವುಳ್ಳ ಯಜ್ಞ ವನ್ನು ತಾಮಸರು ಮಾಡುವರು. ತಪಸ್ಸೆಂಬುದು ಕಾಯಿಕ, ವಾಚಿಕ, ಮಾನಸಿಕ– ಎಂದು ಮೂರು ಬಗೆಯಾಗಿರುತ್ತದೆ. ಈ ಮೂರು ವಿಧವಾದ ತಪಸ್ಸನ್ನು ಹೆಚ್ಚಿನ ಶ್ರದ್ಧೆಯಿಂದ ಫಲಾಪೇಕ್ಷೆಯಿಲ್ಲದೆ ಮಾಡುವವರು ಸಾತ್ತ್ವಿಕರು ; ತಮಗೆ ಸತ್ಕಾರವೂ ಮಾನವೂ ಪೂಜೆಯೂ ಸಿಕ್ಕಲೆಂದು ದಂಭದಿಂದ ಮಾಡುವವರು ರಾಜಸರು, ತತ್ತ್ವವನ್ನರಿಯದೆ ತಮ್ಮ ಸಂಕಟವನ್ನೂ ಲೆಕ್ಕಿಸದೆ ಅಥವಾ ಮತ್ತೊಬ್ಬರಿಗೆ ತೊಂದರೆಯಾಗಲೆಂಬ ಉದ್ದೇಶದಿಂದ ಮಾಡುವವರು ತಾಮಸರು. ದೇಶಕಾಲಪಾತ್ರವರಿತು ಮಾಡತಕ್ಕದ್ದೆಂಬ ಒಂದೇ ಕಾರಣದಿಂದ ಪ್ರತ್ಯುಪಕಾರವನ್ನು ಬಯಸದೆ ದಾನಮಾಡುವವರು ಸಾತ್ತ್ವಿಕರು. ಪ್ರತ್ಯುಪಕಾರ ವನ್ನು ಬಯಸಿ ಅಥವಾ ಯಾವದಾದರೊಂದು ಫಲದ ಆಕಾಂಕ್ಷೆಯಿಂದ ಸಂಕಟಪಟ್ಟುಕೊಂಡು ದಾನಮಾಡುವವರು ರಾಜಸರು ; ದೇಶಕಾಲಪಾತ್ರ ಗಳನ್ನು ಲೆಕ್ಕಿಸದೆ ಹೀಗೆ ಅನಾದರದಿಂದ ಹೀಯಾಳಿಸಿ ದಾನಮಾಡುವವರು ತಾಮಸರು.

೨೩–೨೮. ಯಜ್ಞದಾನತಪಸ್ಸುಗಳನ್ನು 'ಓಂ', 'ತತ್', 'ಸತ್' – ಎಂಬ ಬ್ರಹ್ಮದ ಮೂರು ನಾಮುಗಳ ಉಚ್ಚಾರಣೆಯ ಪೂರ್ವಕವಾಗಿ ಮಾಡುವದರಿಂದ ಅವು ಅಂಗವಿಗುಣವಾಗಿದ್ದರೂ ನಾಮೋಚ್ಚಾರಣೆಯ ಮಹಿಮೆಯಿಂದ ಸಗುಣವಾಗಿ ಮಾರ್ಪಡುವವು. ಆದರೆ ಇದಕ್ಕೆ ಮುಖ್ಯವಾಗಿ ಶ್ರದ್ಧೆಯು ಬೇಕು. ಶ್ರದ್ಧೆಯಿಲ್ಲದೆ ಮಾಡಿದ ಯಜ್ಞದಾನತಪಸ್ಸುಗಳು ಅಸತ್ ಎನಿಸುತ್ತವೆ. ಏಕೆಂದರೆ ಅವುಗಳಿಗೆ ಇಹದಲ್ಲಾಗಲಿ ಪರದಲ್ಲಾಗಲಿ ಯಾವ ಫಲವೂ ಆಗುವದಿಲ್ಲ.

## ಹದಿನೆಂಟನೆಯ ಅಧ್ಯಾಯ

೧–೧೨. ಅರ್ಜುನನು ''ಎಲೈ ಹೃಷೀಕೇಶನೆ, ಮಧುಸೂದನನೆ, ಸಂನ್ಯಾಸ– ತ್ಯಾಗಗಳ ತತ್ತ್ವವನ್ನು ವಿಂಗಡಿಸಿ ಹೇಳು'' ಎಂದು ಕೇಳಿಕೊಳ್ಳಲು ಭಗವಂತನಿಂತೆಂದನು : ಅರ್ಜುನನೆ, ಕಾಮ್ಯಕರ್ಮಗಳನ್ನು ಬಿಡುವದನ್ನು **ಸಂನ್ಯಾಸ**ವೆಂದೂ ಸರ್ವಕರ್ಮಫಲತ್ಯಾಗವನ್ನು **ತ್ಯಾಗ**ವೆಂದೂ ಕರೆಯುತ್ತಾರೆ. ಸಂನ್ಯಾಸ, ತ್ಯಾಗ – ಎಂಬ ಎರಡು ಶಬ್ದಗಳಿಗೂ ಬಿಡುವದೆಂಬ ಒಂದೇ ಅರ್ಥವಿರುವದು. ಆತ್ಮಜ್ಞಾನಿಯಲ್ಲದ ಮುಮುಕ್ಷುವೂ ಕರ್ಮವನ್ನು ಬಿಡಲೇ ಬೇಕೆಂದು ಕೆಲವರು ಹೇಳುತ್ತಾರೆ ; ಯಜ್ಞದಾನತಪೋರೂಪವಾದ ನಿತ್ಯಕರ್ಮವನ್ನು ಬಿಡಬಾರದೆಂದು ಮತ್ತೆ ಕೆಲವರೆನ್ನುತ್ತಾರೆ. ಇಲ್ಲಿ ನನ್ನ ನಿಶ್ಚಯವೇನೆಂದರೆ: ಯಜ್ಞದಾನತಪಸ್ಸುಗಳನ್ನು ಬಿಡಬಾರದು. ಅವುಗಳನ್ನು ಸಂಗತ್ಯಾಗಫಲತ್ಯಾಗ ಪೂರ್ವಕವಾಗಿ ಮಾಡಿದರೆ ಚಿತ್ತಶುದ್ಧಿಯಾಗುತ್ತದೆ. ಆ ಕರ್ಮಗಳನ್ನು ಅವಿವೇಕದಿಂದ ಬಿಟ್ಟರೆ **ತಾಮಸತ್ಯಾಗ**ವಾಗುತ್ತದೆ. ಅವು ಕ್ಲೇಶದಾಯಕವೆಂದು ಬಿಟ್ಟರೆ **ರಾಜಸತ್ಯಾಗ**ವಾಗುತ್ತದೆ. ಅವುಗಳನ್ನು ಮಾಡುತ್ತಾ ಸಂಗಫಲಗಳನ್ನು ಬಿಟ್ಟರೆ **ಸಾತ್ತ್ವಿಕತ್ಯಾಗ**ವಾಗುತ್ತದೆ. ಸಾತ್ತ್ವಿಕನಾದವನು ಕೆಟ್ಟಕರ್ಮವನ್ನು ಹಗೆ ಮಾಡದೆ, ಒಳ್ಳೆಯದಕ್ಕೆ ಅಂಟಿಕೊಳ್ಳದೆ ಇರುವನು. ಈ ಸಾತ್ತ್ವಿಕತ್ಯಾಗವನ್ನು ಮಾಡಿದವನು ಜ್ಞಾನವನ್ನು ಕ್ರಮಕ್ರಮವಾಗಿ ಹೊಂದುತ್ತಾನೆ. ದೇಹಾಭಿಮಾನಿ

ಯಾದವನಿಗೆ ಸಂಪೂರ್ಣವಾಗಿ ಕರ್ಮತ್ಯಾಗವನ್ನು ಮಾಡುವದು ಅಶಕ್ಯವಾದ್ದರಿಂದ ಸಾತ್ತ್ವಿಕತ್ಯಾಗಿಯೇ ನಿಜವಾದ ತ್ಯಾಗಿಯೆನಿಸುತ್ತಾನೆ. ಏಕೆಂದರೆ ಅವನಿಗೆ ಜ್ಞಾನವು ಬಂದಬಳಿಕ ಪರಮಾರ್ಥಸಂನ್ಯಾಸವು ದೊರಕಿ ಅನಿಷ್ಟ, ಇಷ್ಟ, ಮಿಶ್ರ– ಎಂಬ ಮೂರು ಬಗೆಯ ಕರ್ಮಫಲಗಳೂ ಒಂದಿಷ್ಟೂ ಅಂಟದೆಹೋಗುತ್ತವೆ.

೧೩–೧೭. ಯಾವ ಕರ್ಮಕ್ಕಾದರೂ ಶರೀರ, ಕರ್ತೃ, ಕರಣ, ಪ್ರಾಣ, ವ್ಯಾಪಾರ, ದೈವ – ಇವೈದೂ ಕಾರಣವಾಗಿರುತ್ತವೆ. ಆತ್ಮನು ಶುದ್ಧನಾಗಿ ಅಸಂಗನಾಗಿರುವದರಿಂದ ಅವನಿಗೆ ಕರ್ಮದ ಸಂಬಂಧವು ಇರುವದೇ ಇಲ್ಲ. ಅಜ್ಞನು ಇದನ್ನು ಅರಿಯನು. ಆದರೆ ಅಹಂಕಾರವನ್ನು ಮೀರಿದ ಜ್ಞಾನಿಯು ಇದನ್ನು ಅರಿತಿರುವನಾದ್ದರಿಂದ ಅವನು ವ್ಯವಹಾರದೃಷ್ಟಿಯಿಂದ ಯಾವ ಕರ್ಮವನ್ನು ಮಾಡಿದರೂ ಅವನಿಗೆ ಲೇಪವಾಗುವದಿಲ್ಲ. ಆದ್ದರಿಂದಲೇ ಅವನಿಗೆ ಕರ್ಮಬಂಧವಿರುವದಿಲ್ಲ.

೧೮–೪೦. ಕರ್ಮಕ್ಕೆ ಜ್ಞಾತೃ, ಜ್ಞೇಯ, ಜ್ಞಾನ ; ಕರ್ತೃ, ಕರ್ಮ, ಕರಣ– ಎಂಬ ತ್ರಿಪುಟಿಯ ಅರಿವು ಅವಶ್ಯವು. ಜ್ಞಾನವಾಗಲಿ, ಕರ್ತೃವಾಗಲಿ, ಕರ್ಮವಾಗಲಿ ತ್ರಿಗುಣಾತ್ಮಕವಾಗಿರುವದರಿಂದ ವಿವೇಕಿಯಾದವನು ಸಾತ್ತ್ವಿಕಜ್ಞಾನವನ್ನು ಪಡೆದು ಸಾತ್ತ್ವಿಕಕರ್ತೃವಾಗಿ ಸಾತ್ತ್ವಿಕಕರ್ಮವನ್ನೇ ಮಾಡಬೇಕು. ಎಲ್ಲೆಲ್ಲಿಯೂ ಒಬ್ಬ ಪರಮೇಶ್ವರನೇ ಯಾವ ವಿಭಾಗವೂ ಇಲ್ಲದೆ ಇರುವನೆಂಬುದು **ಸಾತ್ತ್ವಿಕಜ್ಞಾನವು.** ಸಂಗವಿಲ್ಲದೆ ಫಲಾಸಕ್ತಿಯಿಲ್ಲದೆ ರಾಗದ್ವೇಷಗಳಿಲ್ಲದೆ ಮಾಡುವದು **ಸಾತ್ತ್ವಿಕಕರ್ಮವು.** ಸಂಗವಿಲ್ಲದೆ, ಅಹಂಕಾರವಿಲ್ಲದೆ, ಧೃತ್ಯುತ್ಸಾಹಗಳಿಂದ ಕೂಡಿರುವವನು **ಸಾತ್ತ್ವಿಕಕರ್ತೃವು.** ಇದರಂತೆ ಬುದ್ಧಿ , ಧೃತಿ – ಇವುಗಳೂ ಸಾತ್ತ್ವಿಕವಾಗಿರಬೇಕು. ತಾನು ಬಯಸುವ ಸುಖವೂ ಸಾತ್ತ್ವಿಕವಾಗಿರಬೇಕು. ಪ್ರವೃತ್ತಿನಿವೃತ್ತಿಗಳು, ಕಾರ್ಯಾಕಾರ್ಯಗಳು, ಭಯಾಭಯಗಳು – ಇವನ್ನು ವಿಂಗಡಿಸಿ ಅರಿಯಬಲ್ಲ ಬುದ್ಧಿಯು ಸಾತ್ತ್ವಿಕವು. ಮನಃಪ್ರಾಣೇಂದ್ರಿಯಗಳ ವ್ಯಾಪಾರವನ್ನು ತಪ್ಪದೆ ಯೋಗದಿಂದ ಹಿಡಿತದಲ್ಲಿಟ್ಟುಕೊಂಡಿರುವ ಧೃತಿಯು ಸಾತ್ತ್ವಿಕವು, ಮೊದಮೊದಲು ದುಃಖವಾಗಿ ತೋರಿ ಕೊನೆಗೆ ಆನಂದವಾಗಿ ನಿಲ್ಲುವ, ಅಭ್ಯಾಸ

ದಿಂದಲೇ ದೊರಕುವ ಮನಃಪ್ರಸನ್ನತೆಯ ಸುಖವೇ ಸಾತ್ತ್ವಿಕವು. ಅಂತೂ ಮನುಷ್ಯನು ತನ್ನ ಶರೀರ, ಕರಣ, ಹೊರಗಿನ ವಿಷಯ – ಇವೆಲ್ಲವೂ ತ್ರಿಗುಣಾತ್ಮಕವಾಗಿರುವವೆಂದೂ ತ್ರಿಗುಣಗಳಲ್ಲಿ ಅಡಕವಾಗದ್ದೇ ಈ ಲೋಕದಲ್ಲಿಲ್ಲವೆಂದೂ ನಂಬಿ ಸಾತ್ತ್ವಿಕವಾದದ್ದನ್ನೇ ಅವಲಂಬಿಸುವದಕ್ಕೆ ಹವಣಿಸುತ್ತಿರಬೇಕು.

೪೧–೪೮. ಶಾಸ್ತ್ರದಲ್ಲಿ ಸಾತ್ತ್ವಿಕಕರ್ಮಗಳನ್ನು ಚಾತುರ್ವರ್ಣ್ಯವಿಭಾಗ ದಿಂದ ತಿಳಿಸಿಕೊಟ್ಟಿರುತ್ತದೆ. ಶಮದಮಾದಿಗಳು ಬ್ರಾಹ್ಮಣನಿಗೂ ಶೌರ್ಯಾದಿ ಗಳು ಕ್ಷತ್ರಿಯನಿಗೂ ಕೃಷಿಗೋರಕ್ಷಣಾದಿಗಳು ವೈಶ್ಯನಿಗೂ ಪರಿಚರ್ಯೆಯು ಶೂದ್ರನಿಗೂ ಗುಣಕರ್ಮಗಳಿಗೆ ತಕ್ಕಂತೆ ಶಾಸ್ತ್ರದಲ್ಲಿ ಉಕ್ತವಾಗಿವೆ. ಸರ್ವ ವ್ಯಾಪಕನೂ ಸರ್ವಪ್ರವೃತ್ತಿಕಾರಣನೂ ಆಗಿರುವ ಪರಮೇಶ್ವರನ ಅರ್ಚನೆ ಯೆಂಬ ಭಾವದಿಂದ ತಮ್ಮತಮ್ಮ ಕರ್ಮಗಳನ್ನು ಮಾಡುವವರಿಗೆ ಸಿದ್ಧಿ ಯುಂಟಾಗುತ್ತದೆ. ಆದ್ದರಿಂದ ಮುಮುಕ್ಷುವಾದವನು ದುಷ್ಫಲಪ್ರದವಾದ ಪರಧರ್ಮಕ್ಕೆ ಕೈಹಾಕದೆ, ಸ್ವಕರ್ಮವನ್ನು ಬಿಡದೆ ಈ ರೀತಿಯಲ್ಲಿ ಮಾಡಬೇಕು.

೪೯–೫೫. ಕರ್ಮದಿಂದ ಆಗುವ ಸಿದ್ಧಿಯು ಚಿತ್ತಶುದ್ಧಿಯು. ಆ ಚಿತ್ತಶುದ್ಧಿಯಿಂದ ನೈಷ್ಕರ್ಮ್ಯವೆಂಬ ಪರಮಸಿದ್ಧಿಯು ಸಂನ್ಯಾಸದ ಮೂಲಕ ದೊರಕುತ್ತದೆ. ಕರ್ಮದ ಸಿದ್ಧಿಯನ್ನು ಪಡೆದುಕೊಂಡವನು ಧೃತಿಯಿಂದ ಮನಸನ್ನು ಬಿಗಿಹಿಡಿದುಕೊಂಡು ಹೊರಗಿನ ವಿಷಯಗಳಿಂದ ಮನಸ್ಸನ್ನು ಹಿಂದಕ್ಕೆಳೆದುಕೊಂಡು ರಾಗದ್ವೇಷಗಳಿಲ್ಲದವನಾಗಿ ಆಹಾರವಿಹಾರಗಳಲ್ಲಿ ಯುಕ್ತನಾಗಿ ಏಕಾಂತದಲ್ಲಿ ಯಾವಾಗಲೂ ಧ್ಯಾನಯೋಗಪರನಾಗಿದ್ದುಕೊಂಡು ಅಹಂಕಾರ – ಮಮಕಾರವಿಲ್ಲದವನಾಗಿ ಬ್ರಹ್ಮಸ್ವರೂಪವನ್ನೇ ಪಡೆಯುವದಕ್ಕೆ ಅರ್ಹನಾಗುತ್ತಾನೆ. ಬ್ರಹ್ಮಪ್ರಾಪ್ತಿಯನ್ನು ಪಡೆದುಕೊಂಡವನಿಗೆ ಮನಸ್ಸು ಪ್ರಸನ್ನ ವಾಗುವದು. ಶೋಕವೂ ಕಾಮವೂ ತೊಲಗುವವು, ಸರ್ವಭೂತಗಳಲ್ಲಿಯೂ ಸಮಬುದ್ಧಿಯುಂಟಾಗಿ ಪರಮಾತ್ಮನ ಪರಮಭಕ್ತಿಯು ಲಭಿಸುವದು. ಇದಕ್ಕೇ ಜ್ಞಾನನಿಷ್ಠೆಯೆಂದು ಹೆಸರು. ಈ ಪರಮಭಕ್ತನಿಗೆ ಪರಮಾತ್ಮನ ಸ್ವರೂಪವೂ ಮಹಿಮೆಯೂ ತಿಳಿಯಬರುವವು ; ಅವನು ಪರಮಾತ್ಮನಲ್ಲಿಯೇ ಸೇರಿ ಬಿಟ್ಟಿರುವನು.

೫೬–೬೨. ಎಂಥ ದುರಾಚಾರಿಯಾಗಿದ್ದರೂ ಭಗವಂತನ ಆಶ್ರಯದಿಂದ ಸದ್ಗತಿಯನ್ನು ಪಡೆಯುತ್ತಾನೆ. ಆದ್ದರಿಂದ ಸರ್ವಕರ್ಮಗಳನ್ನೂ ನನ್ನಲ್ಲಿ ಸಮರ್ಪಿಸಿ ಯಾವಾಗಲೂ ನನ್ನಲ್ಲಿಯೇ ಚಿತ್ತವನ್ನಿಟ್ಟುಕೊ. ಇದರಿಂದ ಎಲ್ಲಾ ಬಗೆಯ ಕಷ್ಟಗಳನ್ನೂ ದಾಟುವೆ. ಹಾಗಲ್ಲದೆ ನನ್ನ ಮಾತನ್ನು ಕೇಳದೆಹೋಗುವೆಯಾದರೆ ಹಾಳಾಗಿಹೋಗುತ್ತೀಯೆ. ನೀನು ಕರ್ಮವನ್ನು ಮಾಡುವದಿಲ್ಲವೆಂದರೂ ಕ್ಷತ್ರಿಯಪ್ರಕೃತಿಯು ನಿನ್ನಿಂದ ಮಾಡಿಸಿಯೇತೀರುತ್ತದೆ. ಇದು ಸರ್ವರ ಹೃದಯದಲ್ಲಿಯೂ ಇರುವ ಈಶ್ವರನ ಮಾಯಾವಿಲಾಸವು. ಆದ್ದರಿಂದ ಸರ್ವಭಾವದಿಂದಲೂ ಅವನನ್ನೇ ಶರಣುಹೊಂದು. ಆಗ ಅವನ ಅನುಗ್ರಹದಿಂದ ಶಾಂತಿಯನ್ನೂ ನಿತ್ಯಪದವನ್ನೂ ಪಡೆದುಕೊಳ್ಳುವೆ.

೬೩–೬೬. ಇಗೊ, ನಿನಗೆ ಅತ್ಯಂತರಹಸ್ಯವಾದ ಜ್ಞಾನವನ್ನು ಹೇಳಿರುತ್ತೇನೆ. ಇದನ್ನು ಆಲೋಚಿಸಿ ನಿನಗೆ ಹೇಗೆ ತೋರುತ್ತದೆಯೋ ಹಾಗೆ ಮಾಡು. ಪರಮರಹಸ್ಯವನ್ನು ಮತ್ತೂ ಒಮ್ಮೆ ಹೇಳುತ್ತೇನೆ, ಕೇಳು. ನಿನಗೆ ಇದರಿಂದ ಹಿತವಾಗುತ್ತದೆ. ಯಾವಾಗಲೂ ನನ್ನಲ್ಲಿಯೇ ಚಿತ್ತವಿಟ್ಟು ನನ್ನ ಕರ್ಮವನ್ನೇ ಮಾಡುತ್ತಾ ನನ್ನ ಭಕ್ತನಾಗಿರು. ಇದರಿಂದ ನಿನಗೆ ನನ್ನ ಪ್ರಾಪ್ತಿಯೇ ಆಗುವದೆಂದು ಆಣೆಮಾಡಿ ಹೇಳುತ್ತೇನೆ. ಸರ್ವಕರ್ಮಗಳನ್ನೂ ಸಂನ್ಯಾಸಮಾಡಿ ನನ್ನೊಬ್ಬನನ್ನೇ ಶರಣುಹೊಂದು. ನಾನು ನಿನ್ನನ್ನು ಸರ್ವಪಾಪಗಳಿಂದಲೂ ಬಿಡುಗಡೆಮಾಡಿಸುವೆನು, ಶೋಕಿಸಬೇಡ.

೬೭. ಅರ್ಜುನ, ಈ ಶಾಸ್ತ್ರವನ್ನು ತಪಸ್ಸುಮಾಡದವನಿಗಾಗಲಿ ಭಕ್ತನಲ್ಲದವನಿಗಾಗಲಿ, ಗುರುಶುಶ್ರೂಷೆಯನ್ನು ಮಾಡದಿರುವವನಿಗಾಗಲಿ, ಹೇಳದಿರು. ನನ್ನನ್ನು ಕಂಡರೆ ಅಸೂಯೆ ತೋರಿಸುವವನಿಗಂತೂ ಹೇಳಲೇಬೇಡ.

೬೮–೭೧. ಯಾವನು ಈ ಪರಮರಹಸ್ಯವನ್ನು ನನ್ನ ಭಕ್ತರಿಗೆ ತಿಳಿಸುವನೋ ಅವನು ನನ್ನಲ್ಲಿ ಪರಭಕ್ತಿಯನ್ನು ಮಾಡಿದವನಾಗಿರುತ್ತಾನೆ. ನನ್ನನ್ನೇ ನಿಶ್ಚಯವಾಗಿ ಪಡೆಯುತ್ತಾನೆ. ಅಂಥವನಿಗಿಂತ ನನಗೆ ಪ್ರಿಯನಾದವನೇ ಇರುವದಿಲ್ಲ. ಈ ಪುಣ್ಯಕರವಾದ ಸಂವಾದವನ್ನು ಯಾವನು ಓದುವನೋ ಅವನು ಜ್ಞಾನಯಜ್ಞದಿಂದ ನನ್ನನ್ನು ಪೂಜಿಸಿದವನಾಗುವನು. ಯಾವನು ನನ್ನಲ್ಲಿ

ಅಸೂಯೆಯಿಲ್ಲದೆ ಶ್ರದ್ಧೆಯಿಂದ ಈ ಸಂವಾದವನ್ನು ಕೇಳುವನೋ ಅವನುಕೂಡ ಮುಕ್ತನಾಗಿ ಶುಭಲೋಕಗಳನ್ನು ಪಡೆಯುವನು.

೭೨–೭೩. "ಅರ್ಜುನನೆ, ಇದನ್ನೆಲ್ಲ ಚಿತ್ತವಿಟ್ಟು ಕೇಳಿದೆಯ ? ಅಜ್ಞಾನದ ಮಬ್ಬು ಹರಿಯಿತೆ ?" ಎಂದು ಭಗವಂತನು ಕೊನೆಯಲ್ಲಿ ಕೇಳಿದ್ದಕ್ಕೆ ಅರ್ಜುನನು ಇಂತೆಂದನು : **ಅಚ್ಯುತನೆ, ನಿನ್ನ ಅನುಗ್ರಹದಿಂದ ಮೋಹವು ತೊಲಗಿತು, ನನಗೆ ಯಾವ ಸಂದೇಹವೂ ಈಗ ಇರುವದಿಲ್ಲ. ಇನ್ನು ನಿನ್ನ ಮಾತಿನಂತೆ ನಡೆಯುವೆನು**– ಎಂದನು.

೭೪–೭೮. ಇಷ್ಟನ್ನೂ ಧೃತರಾಷ್ಟ್ರನಿಗೆ ತಿಳಿಸಿದ ಬಳಿಕ ಸಂಜಯನು ಇಂತೆಂದನು : "ಧೃತರಾಷ್ಟ್ರನೆ, ಶ್ರೀಕೃಷ್ಣನಿಗೂ ಅರ್ಜುನನಿಗೂ ನಡೆದ ಈ ಅದ್ಭುತವಾದ ಸಂವಾದವನ್ನು ವ್ಯಾಸರ ಅನುಗ್ರಹದಿಂದ ನಾನು ಕೇಳಿದೆನು. ಅದನ್ನೂ ಆ ಭಗವಂತನ ಅದ್ಭುತವಾದ ವಿಶ್ವರೂಪವನ್ನೂ ನೆನೆಸಿಕೊಂಡರೆ ನನಗೆ ಅಡಿಗಡಿಗೂ ರೋಮಾಂಚನವಾಗುತ್ತದೆ. ಎಲ್ಲಿ ಯೋಗೇಶ್ವರನಾದ ಶ್ರೀಕೃಷ್ಣನಿರುವನೋ ಎಲ್ಲಿ ಧನುರ್ಧರನಾದ ಪಾರ್ಥನಿರುವನೋ ಅಲ್ಲಿ ಸಿರಿಯೂ ಗೆಲವೂ ಏಳಿಗೆಯೂ ಉತ್ತಮವಾದ ರಾಜನೀತಿಯೂ ನೆಲಸಿರುವವೆಂದು ನನ್ನ ಮತವು.

ಓಂ

# ಭಗವದ್ಗೀತೆಯ ಪ್ರಧಾನೋಪದೇಶಗಳು

ಭಗವದ್ಗೀತೆಯಲ್ಲಿರುವ ಒಂದು ಅಸಾಧಾರಣಧರ್ಮವೇನೆಂದರೆ ಮಿಕ್ಕ ದರ್ಶನಗಳಲ್ಲಿರುವ ಸರ್ವಸಮ್ಮತೋಪದೇಶಗಳನ್ನು ಸಾರಗ್ರಹಣದೃಷ್ಟಿಯಿಂದ ತೆಗೆದುಕೊಂಡು ಅವುಗಳನ್ನು ಉಪನಿಷತ್ಸಿದ್ಧಾಂತವಾದ ವೇದಾಂತಕ್ಕೆ ಹೊಂದುವಂತೆ ಹಿಗ್ಗಿಸಿ ತತ್ತ್ವೋಪದೇಶಪ್ರಕ್ರಿಯೆಯಲ್ಲಿ ಅವುಗಳಿಗೆ ಯಥಾಯೋಗ್ಯವಾದ ಸ್ಥಾನವನ್ನು ಕಲ್ಪಿಸಿಕೊಟ್ಟಿರುವದು. ಉಪದೇಶಕ್ಷೇತ್ರದಲ್ಲಿ ಮುಖ್ಯವಾಗಿ ವೇದಾಂತಪ್ರಕ್ರಿಯೆಯನ್ನೇ ಅದು ಅಗ್ರಸ್ಥಾನದಲ್ಲಿ ತೋರಿಸಿದೆ, ನಿಜ. ಆದರೆ ಮಿಕ್ಕ ದರ್ಶನಗಳಲ್ಲಿರುವ ಮುಖ್ಯೋಪದೇಶಗಳಿಗೆ ಇಂಬುಗೊಡುವದನ್ನು ಅದು ಮರೆತಿಲ್ಲ. ಇದರಿಂದ ಉಪನಿಷತ್ತುಗಳಲ್ಲಿ ಬೋಧಿತವಾಗಿರುವ ಸಾಧನ ಸಿದ್ಧಾಂತಗಳಿಗೆ ಮೆರುಗು ಬರುವಂತೆ ರಚಿಸಿರುವ ಹಿತಮಿತವಾದ ವ್ಯಾಖ್ಯಾನವೆಂದರೆ ಭಗವದ್ಗೀತೆಯೊಂದೇ ಎಂದು ಧಾರಾಳವಾಗಿ ನಾವು ನಂಬಬಹುದು. ಹೀಗಿರುವದರಿಂದ ಉಪನಿಷತ್ತುಗಳ ಪ್ರಕ್ರಿಯೆಗೂ ಭಗವದ್ಗೀತೆಯ ಪ್ರಕ್ರಿಯೆಗೂ ಮೇಳವಾಗುವಂತೆ ವಿವರಣೆಯನ್ನು ಬರೆಯುವದರಲ್ಲಿ ಯಾವ ಆಚಾರ್ಯರು ಎಷ್ಟುಮಟ್ಟಿಗೆ ಜಯಶೀಲರಾಗಿರುವರೋ ಅಷ್ಟುಮಟ್ಟಿಗೆ ಆ ಆಚಾರ್ಯರು ಗೀತಾಚಾರ್ಯನ ಹೃದಯವನ್ನು ಮುಟ್ಟಿರುವರೆಂದು ಹೇಳುವದು ಯುಕ್ತಿಯುಕ್ತವಾಗುತ್ತದೆ.

## ಮೀಮಾಂಸೆ, ಸಾಂಖ್ಯ, ಯೋಗ

ಮೊಟ್ಟಮೊದಲನೆಯದಾಗಿ ಭಗವದ್ಗೀತೆಯಲ್ಲಿ ಪೂರ್ವಮೀಮಾಂಸಾ ದರ್ಶನಕ್ಕೆ ಕೊಟ್ಟಿರುವ ಸ್ಥಾನವನ್ನು ನೋಡೋಣ. ಆ ದರ್ಶನದಲ್ಲಿ ಚೋದನೆಗೆ ವಿಷಯವಾದದ್ದೇ ಧರ್ಮವೆನಿಸುವದು. ಆದ್ದರಿಂದ ಯಜ್ಞ, ದಾನ, ತಪಸ್ಸು– ಈ ಕರ್ಮಗಳೇ ಮುಖ್ಯವಾಗಿ ಆ ಮೀಮಾಂಸಾದರ್ಶನಕ್ಕೆ ಒಪ್ಪಾಗಿರುವ

---

* ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು ಅನುಗ್ರಹಿಸಿರುವ ಈ ಉಪನ್ಯಾಸವು 1967ರಲ್ಲಿ ಪ್ರತ್ಯೇಕ ಪುಸ್ತಕವಾಗಿ ಪ್ರಕಟವಾಗಿತ್ತು. ಆ ಪುಸ್ತಕದ ಪ್ರತಿಗಳೆಲ್ಲ ಮುಗಿದದ್ದರಿಂದ ವಾಚಕರ ಸೌಕರ್ಯಕ್ಕಾಗಿ ಇಲ್ಲಿಯೇ ಅಳವಡಿಸಲಾಗಿದೆ.

ಧರ್ಮ. ವೇದಾಂತಕ್ಕೆ ವೇದವು ಅಡಿಗಟ್ಟಾಗಿರುವದರಿಂದ ಭಗವದ್ಗೀತೆಯಲ್ಲಿ ಈ ಮೂರು ಕರ್ಮಕ್ಕೂ ಬಲುಹೆಚ್ಚಿನ ಸ್ಥಾನವನ್ನು ಕೊಟ್ಟಿದೆ. ಯಜ್ಞ, ದಾನ, ತಪಸ್ಸು – ಇವುಗಳಲ್ಲಿಯೂ ದೋಷವುಂಟೆಂಬ ಸಂಭಾವನೆಯನ್ನು ಮುಂದಕ್ಕೆ ತಂದ ಸಾಂಖ್ಯಾದಿಗಳನ್ನು ಕಡೆಗಣಿಸಿ ಯಜ್ಞದಾನತಪಸ್ಸುಗಳೆಂಬ ನಿತ್ಯಕರ್ಮ ಗಳನ್ನು ಮಾಡಲೇಬೇಕು, ಬಿಡತಕ್ಕದ್ದಲ್ಲ (೧೮–೫)– ಎಂದು ಕರ್ಮಿಗಳಿಗೆ ಬುದ್ಧಿವಾದವನ್ನು ಹೇಳಿರುವದು ಗೀತೆಯ ವೇದಪಕ್ಷಪಾತತನವನ್ನು ಸ್ಫುಟ ಗೊಳಿಸುತ್ತದೆ. ಯಜ್ಞಾದಿಗಳು ಬಹಳ ಬೆಲೆಯುಳ್ಳ ಸಾಧನವೆಂಬುದನ್ನು ಸೂಚಿಸುವದಕ್ಕೆ ಗೀತೆಯಲ್ಲಿ– ಕರ್ಮವನ್ನು ಮಾಡಲೇಬೇಕೆಂಬುದಕ್ಕೆ (೩–೧೦ ಸಹಯಜ್ಞಾಃ), ಸಪ್ತಪ್ರಶ್ನನಿರ್ಣಯವನ್ನು ಹೊಗಳುವದಕ್ಕೆ (೮–೨೮, ವೇದೇಷು ಯಜ್ಞೇಷು ತಪಃಸು ಚೈವ ದಾನೇಷು), ವಿಶ್ವರೂಪದರ್ಶನವನ್ನು ಹೊಗಳುವ ದಕ್ಕೆ (೧೧–೪೮ ನ ವೇದಯಜ್ಞಾಧ್ಯಯನೈರ್ನ........ತಪೋಭಿರುಗ್ರೈಃ), ಮತ್ತು ಜ್ಞಾನವನ್ನು ಹೊಗಳುವದಕ್ಕೆ (ಜ್ಞಾನ ತಪಸಾ ೪–೧೦, ಜ್ಞಾನಯಜ್ಞಃ ೪–೩೩, ಬ್ರಹ್ಮಾರ್ಪಣಂ ೪–೨೪)– ಇವುಗಳ ಪರಾಮರ್ಶನವನ್ನು ಮಾಡಿಕೊಂಡಿರು ತ್ತದೆ.

ಆದರೆ ಕಾಮ್ಯಕರ್ಮಗಳನ್ನು ಬಿಟ್ಟು ನಿತ್ಯಕರ್ಮಗಳನ್ನು ಮಾಡುವ ವರಿಗೇ ಚಿತ್ತಶುದ್ಧಿಯ ದ್ವಾರದಿಂದ ಜ್ಞಾನವು ದೊರಕುವದೆಂಬ ವೇದಾಂತ ಸಿದ್ಧಾಂತವನ್ನು ಅನುಸರಿಸಿ (ಯಾಮಿಮಾಂ ಪುಷ್ಪಿತಾಂ ವಾಚಮ್ ೨–೪೨, ಕ್ಷೀಣೇ ಪುಣ್ಯೇ ಮರ್ತ್ಯಲೋಕಂ ವಿಶನ್ತಿ ೯–೨೧, ಕಾಮ್ಯಾನಾಂ ಕರ್ಮಣಾಂ ನ್ಯಾಸಮ್ ೧೮–೨, ಎಂದು) ಅಲ್ಲಲ್ಲಿ ಕಾಮ್ಯಕರ್ಮವನ್ನು ನಿಂದಿಸಿರುತ್ತದೆ. ಯಜ್ಞಾದಿನಿತ್ಯಕರ್ಮಗಳನ್ನು ರಾಜಸತಾಮಸತ್ಯಾಗಪೂರ್ವಕವಾಗಿಯೂ ಸಾತ್ತ್ವಿಕಕರ್ಮಗಳನ್ನು ಸಂಗಫಲತ್ಯಾಗಪೂರ್ವಕವಾಗಿಯೂ ಶ್ರದ್ಧೆಯಿಂದ (೧೮–೭,೮,೧೮–೯, ೧೮–೨೩) ಆಚರಿಸಿ ಸ್ವಕರ್ಮವನ್ನು ಭಗವದರ್ಚನಾ ರೂಪ ವಾಗಿ ಮಾಡಿದರೆ ಚಿತ್ತಶುದ್ಧಿಯನ್ನು ಕೊಡುವ ಕರ್ಮಯೋಗವಾಗುವದೆಂದು (೧೮–೪೫, ೪೬) ಹೊಗಳಿ ಕರ್ಮವು ಜ್ಞಾನೋತ್ಪತ್ತಿಗೆ ಸಾಧನವಾಗುವದೆಂದು ವೇದಾಂತಸಿದ್ಧಾಂತಕ್ಕೆ ಜೋಡಿಸಲಾಗಿದೆ.

ಈಗ ಸಾಂಖ್ಯದರ್ಶನವನ್ನು ಗೀತೆಯಲ್ಲಿ ಬಳಸಿಕೊಂಡಿರುವ ಬಗೆಯನ್ನು ನೋಡೋಣ. ಸಾಂಖ್ಯರು 'ವ್ಯಕ್ತಾವ್ಯಕ್ತಜ್ಞ' (ವ್ಯಾಕೃತಜಗತ್ತು, ಅವ್ಯಾಕೃತ

ಜಗತ್ತು, ಇವುಗಳಿಗಿಂತ ಭಿನ್ನನಾದ ಪುರುಷ)– ಇವರ ಜ್ಞಾನದಿಂದ ಮೋಕ್ಷ ವಾಗುವದೆಂದು ಹೇಳುತ್ತಾರೆ ; ಅವ್ಯಕ್ತವೆಂದರೆ ತ್ರಿಗುಣಾತ್ಮಕವಾದ ಪ್ರಧಾನ (ಅಥವಾ 'ಪ್ರಕೃತಿ') ಎಂಬ ಸ್ವತಂತ್ರತತ್ತ್ವ ಎಂಬುದು ಅವರ ಸಿದ್ಧಾಂತ. ಈ ಸಿದ್ಧಾಂತವನ್ನು ಎಷ್ಟರಮಟ್ಟಿಗೆ ಗೀತೆಯಲ್ಲಿ ಒಪ್ಪಿರುತ್ತದೆ ಎಂಬುದನ್ನು ನೋಡಿದರೆ ಅವ್ಯಕ್ತವು ತ್ರಿಗುಣಾತ್ಮಕವಾಗಿರುತ್ತದೆ, ಅದರಿಂದ ಜಗತ್ತು ಆಗಿರುತ್ತದೆ– ಎಂಬುದು ಸರಿ ; ಆದರೆ ಭಗವಂತನು ಅವ್ಯಕ್ತಕ್ಕಿಂತಲೂ ವಿಲಕ್ಷಣನಾಗಿರುತ್ತಾನೆ (ಪರಸ್ತಸ್ಮಾತ್ತು ೮–೨೦, ೧೫–೧೮) ಸರ್ವಸಾಕ್ಷಿಯಾಗಿರುವ ಭಗವಂತನ ಸಾನ್ನಿಧ್ಯದಿಂದಲೇ ಅವ್ಯಕ್ತವು ಅಥವಾ ಪ್ರಕೃತಿಯು ಜಗತ್ಕಾರಣವಾಗಿರುತ್ತದೆ (೯–೧೦), ಅದೂ ಭಗವಂತನಿಗೆ ಅಧೀನವಾಗಿರುವ **ಅಪರಪ್ರಕೃತಿ** (೭–೪), ಜೀವನು ಭಗವಂತನ **ಪರಪ್ರಕೃತಿ** (೭–೫), ಈ ಪ್ರಕೃತಿಗಳ ದ್ವಾರದಿಂದ ಭಗವಂತನು ಜಗತ್ಕಾರಣನೆನಿಸಿರುತ್ತಾನೆ (೭–೬), ಅನಾತ್ಮವಾದ ಪ್ರಕೃತಿಯೆಲ್ಲವೂ **ಕ್ಷೇತ್ರ**ವೆನಿಸಿರುತ್ತದೆ (೧೩–೫,೬), ಪ್ರಕೃತಿ ಪುರುಷರ ಅನ್ಯೋನ್ಯಾಧ್ಯಾಸರೂಪವಾದ ಸಂಯೋಗದಿಂದಲೇ ಜಗತ್ತೆಲ್ಲವೂ ಸೃಷ್ಟಿಯಾಗಿರುತ್ತದೆ (೧೩–೨೬), ಪುರುಷನು ಪ್ರಕೃತಿಯ ಸಾಕ್ಷಿಯಾಗಿದ್ದು ಪ್ರಕೃತಿಯ ತಾದಾತ್ಮ್ಯಭಾವನೆಯಿಂದಲೇ ಪ್ರಕೃತಿಯಿಂದಾಗುವ ಸುಖ–ದುಃಖ ಮೋಹಗಳೆಂಬ ಗುಣಗಳನ್ನು ಅನುಭವಿಸುವ ಭೋಕ್ತೃವಾಗಿರುತ್ತಾನೆ (೧೩–೨೧). ಶರೀರವೇ ಮುಂತಾದ ಪ್ರಕೃತಿಯ ಪರಿಣಾಮಗಳ ಸಂಬಂಧದಿಂದಲೇ ಅವನು ಕರ್ತೃವಾಗಿರುತ್ತಾನೆ (೧೮–೧೪), ನಿಜವಾಗಿ ತನ್ನ ರೂಪದಿಂದ ಅವನು ಕರ್ತೃತ್ವವಲ್ಲವೇ ಅಲ್ಲ (೧೮–೧೬, ೧೩–೨೯), ಅವನು ಸಕಲದೇಹಗಳಲ್ಲಿಯೂ ಒಬ್ಬನೇ ಆಗಿರುವ ಅಸಂಸಾರಿಯಾದ ಭಗವಂತನೇ ಆಗಿರುತ್ತಾನೆ (೧೩–೨), ಸರಿಯಾಗಿ ನೋಡಿದರೆ ಪ್ರಕೃತಿ ಎಂಬುದು ಅವಿದ್ಯಾಕೃತವಾಗಿರುವದರಿಂದ ಅದನ್ನು ವಿದ್ಯೆಯಿಂದ ಬಿಡಿಸಿಕೊಳ್ಳಬೇಕು (೧೩–೩೪) – ಎಂದು ಸಮನ್ವಯಗೊಳಿಸಿಕೊಂಡಿದೆ.

ಇನ್ನು **ಯೋಗದರ್ಶನ**ದತ್ತ ನಮ್ಮ ಮನಸ್ಸನ್ನು ಹೊರಳಿಸಿ ನೋಡೋಣ. ಸಾಂಖ್ಯರಂತೆ ಯೋಗಿಗಳೂ ಪ್ರಕೃತಿಪುರುಷರ ಸಂಯೋಗದಿಂದಲೇ ಸಂಸಾರ ದುಃಖವು ಉಂಟಾಗಿರುವದೆಂದೂ, ಪ್ರಕೃತಿಪುರುಷರನ್ನು ವಿಂಗಡಿಸಿಕೊಳ್ಳುವ ವಿವೇಕದಿಂದಲೇ ಪರಮಪುರುಷಾರ್ಥವು ದೊರೆಯುವದೆಂದೂ ನಂಬಿರುತ್ತಾರೆ. ಆದರೆ ಪ್ರಕೃತಿಪುರುಷರನ್ನಲ್ಲದೆ ಅವೆರಡಕ್ಕಿಂತಲೂ ಬೇರೆಯಾಗಿ **ಈಶ್ವರ**ನ

**ಅಸ್ತಿತ್ವವನ್ನೂ ಒಪ್ಪಿರುವದೊಂದು ಯೋಗದರ್ಶನದ ವಿಶೇಷವು.** ಸಾಂಖ್ಯಮತದಲ್ಲಿ ವಿಚಾರದಿಂದಲೇ ಪ್ರಕೃತಿಪುರುಷರ ವಿವೇಕವು ಲಭಿಸಬೇಕು ; ಆದರೆ ಯೋಗಿಗಳ ಮತದಲ್ಲಿ ಚಿತ್ತವೃತ್ತಿಗಳ ನಿರೋಧಧಿಂದ ಸಮಾಧಿಯು ಲಭಿಸಿದಾಗ ಪ್ರಕೃತಿಗಿಂತ ಬೇರೆಯಾಗಿ ಪುರುಷನು ವಿಂಗಡವಾಗಿ ತನ್ನ ಸ್ವರೂಪದಲ್ಲಿ ನಿಲ್ಲುವನೆಂಬ ನಂಬಿಕೆಯಿದೆ. ಪ್ರಕೃತಿಯು ಪುರುಷನಿಗಿಂತ ಬೇರೆಯಾಗಿರುವ ಸ್ವತಂತ್ರತತ್ತ್ವವೆಂಬ ಸಾಂಖ್ಯ ಯೋಗದರ್ಶನಗಳ ಅಭಿಪ್ರಾಯವು ಭಗವದ್ಗೀತೆಗೆ ಒಪ್ಪಾಗಿಲ್ಲ; ಆದರೂ ಪುರುಷನಿಂದ ಪ್ರಕೃತಿಯನ್ನು ವಿಂಗಡಿಸಿಕೊಳ್ಳುವ ವಿವೇಕದಿಂದ ಸಂಸಾರದುಃಖವು ಪರಿಹೃತವಾಗುವದೆಂಬುದನ್ನು ಇಲ್ಲಿಯೂ ಒಪ್ಪಿರುತ್ತದೆ. ಅನೃತವಾಗಿರುವ ಪ್ರಕೃತಿಯನ್ನು ಪುರುಷನಿಂದ ವಿಂಗಡಿಸಿಕೊಳ್ಳುವದು ಸಾಂಖ್ಯರು ಹೇಳುವಂತೆ ವಿಚಾರದಿಂದಲೂ ಆಗುವದು, ಯೋಗಾಭ್ಯಾಸದಿಂದಲೂ ಆಗುವದು – ಎಂದು ಗೀತೆಯು ಹೇಳುತ್ತಿದೆ. ಆದರೂ ಚಿತ್ತವೃತ್ತಿಗಳನ್ನೆಲ್ಲ ನಾಶಪಡಿಸಿಕೊಳ್ಳುವದರಿಂದ ಪ್ರಕೃತಿಪುರುಷವಿವೇಕವು ಲಭಿಸುವದೆಂಬುದನ್ನು ಗೀತೆಯು ಒಪ್ಪುವದಿಲ್ಲ. ಅವನ್ನು ನಾಶಪಡಿಸಿಕೊಳ್ಳುವದೆಂಬುದು ಸಾಧ್ಯವೇ ಇಲ್ಲ ಎಂಬುದು ಗೀತೋಪದೇಶವಾಗಿರುತ್ತದೆ ; ಏಕೆಂದರೆ ಚಿತ್ತಕ್ಕೆ ಚಂಚಲವಾಗಿರುವದೇ ಸ್ವಭಾವವಾಗಿರುತ್ತದೆ. ಆದ್ದರಿಂದ ಚಿತ್ತವು ಚಿತ್ತವಾಗಿರುವವರೆಗೆ ಆದರೆ ನಿರೋಧವು ಸಾಧ್ಯವಲ್ಲ. ಎಲ್ಲಿಯವರೆಗೆ 'ಇಂಥ ಸಾಧನದಿಂದ ಇಂಥ ಫಲವನ್ನು ಸಾಧಿಸಿಕೊಳ್ಳಬೇಕು' ಎಂಬ ಬುದ್ಧಿಯು ಇರುವದೋ ಅಲ್ಲಿಯವರೆಗೆ ಚಿತ್ತವು ಬಗೆಬಗೆಯ ವಿಕ್ಷೇಪಗಳಿಂದ ಹೊಯ್ದಾಡುತ್ತಲೇ ಇರುತ್ತದೆ. ಯಾವಾಗ ಅದು ಆ ವಿಕ್ಷೇಪಕಾರಣವನ್ನು ಮೀರಿ ಆತ್ಮನಲ್ಲಿಯೇ ಮುಳುಗಿ ಕರಗಿ ನಿರ್ವಿಕಲ್ಪವಾಗಿ ಅವನಲ್ಲಿಯೇ ಒಂದಾಗುವದೋ, ಆಗ 'ಆತ್ಮನೇ ಸತ್ಯವು, ಅನಾತ್ಮವಾದ ಚಿತ್ತಾದಿಗಳು ಅನೃತ' ಎಂಬ **ವಿವೇಕಪ್ರಜ್ಞೆಯ ರೂಪವಾದ ಯೋಗಸಮಾಧಿಯು** ಲಭಿಸುವದು (೨–೫೩). ಇಂದ್ರಿಯಗಳೂ ಮನಸ್ಸೂ – ಎಲ್ಲವೂ ಲಯಿಸಿ ಆತ್ಮರೂಪದಿಂದಲೇ ನಿಲ್ಲುವದೇ ಸಮಾಧಿಯು (೬–೧೮) ; ಆಗ ಸರ್ವದುಃಖಗಳೂ ತೊಲಗುವವು (೬–೨೩), ಬ್ರಹ್ಮಸಂಸ್ಪರ್ಶವು ದೊರಕುವದು (೬–೨೮) ; ನಮ್ಮೆಲ್ಲರ ಆತ್ಮನೂ ಭಗವಂತನೇ ಎಂಬ ವೇದಾಂತವಿಜ್ಞಾನವು ತಲೆದೋರುವದು (೬–೨೯, ೩೦) – ಎಂಬುದು ಗೀತಾಸಿದ್ಧಾಂತವು.

ಯೋಗದರ್ಶನದಂತೆ ನೋಡಿದಾಗ ಯಾವ ವಸ್ತುವಿನಲ್ಲಾದರೂ ಚಿತ್ತವನ್ನು ಧಾರಣೆಮಾಡಿ ಧ್ಯಾನಿಸಬಹುದು. ಧಾರಣೆ, ಧ್ಯಾನ, ಸಮಾಧಿಗಳು– ಒಂದೇ ವಿಷಯದಲ್ಲಿ ಆದರೆ 'ಸಂಯಮ'ವೆನಿಸುತ್ತದೆ. ಆದರೆ ರುದ್ರಾದಿತ್ಯಾದಿ ದೇವತೆಗಳ ಧ್ಯಾನವನ್ನು ಕೂಡ ಬಿಟ್ಟು, ಸರ್ವರ ಆತ್ಮನಾದ ವಾಸುದೇವ **ಭಗವಂತನನ್ನು ಧ್ಯಾನಿಸುವವನೇ ಯೋಗಿಗಳಲ್ಲಿ ಉತ್ತಮನು** (೬–೪೭) – ಎಂಬುದು ಗೀತೆಯ ಮತವು. ಧ್ಯೇಯನಾಗಿರುವ ವಾಸುದೇವನು ಸಾಕಾರನೊ, ನಿರಾಕಾರನೊ ? ಸಗುಣನೊ, ನಿರ್ಗುಣನೊ ? – ಎಂಬ ಬಗ್ಗೆ ವಾದಿಗಳಲ್ಲಿ ಮತಭೇದವುಂಟು. ಭಗವದ್ಗೀತೆಯಲ್ಲಿ ಈ ಎಲ್ಲಾ ಮತಗಳನ್ನೂ ಸಮರಸ ಮಾಡಿರುತ್ತದೆ. ಹೊರಗೆ ಕಾಣುವ ವಿಭೂತ್ಯಾದಿವಿಶೇಷಗಳುಳ್ಳದ್ದೆಲ್ಲವೂ ಆ ಭಗವಂತನ ಅಂಶವೇ ; ಹೆಚ್ಚೇಕೆ ? **ಇಡಿಯ ಜಗತ್ತೇ ಭಗವಂತನ ಒಂದಂಶವಾದ ವಿಭೂತಿಯಾಗಿರುತ್ತದೆ** (೧೦–೪೧, ೪೨). ಇಡಿಯ ವಿಶ್ವವೇ ಭಗವಂತನ ರೂಪವಿಶೇಷವೆಂದು ಉಪಾಸನೆಮಾಡುವವರಿಗೆ ಭಗವತ್ಪ್ರಾಪ್ತಿಯೇ ಆಗುತ್ತದೆ (೧೮–೫೫). ಆದರೆ ಭಗವಂತನು ವ್ಯಕ್ತವಾಗಿರುವ ಜಗತ್ತಿನ ಆಕಾರದಿಂದಮಾತ್ರವೇ ಇರುವದಿಲ್ಲ; ಅದರ ಅವ್ಯಕ್ತರೂಪದಿಂದಲೂ ಅವನೇ ಇರುತ್ತಾನೆ ; ವ್ಯಕ್ತಾವ್ಯಕ್ತಗಳಿಗಿಂತ ವಿಲಕ್ಷಣವಾದ (೮–೨೦, ೨೧) ನಿರಾಕಾರ ನಿರ್ಗುಣರೂಪದಿಂದಲೂ ಇರುತ್ತಾನೆ ; ಆ ರೂಪಕ್ಕೆ **ಪುರುಷೋತ್ತಮರೂಪ ವೆಂದು ಹೆಸರು** (೧೫–೧೭, ೧೮).

## ಭಗವತ್ತತ್ತ್ವ

ಭಗವಂತನ ತಾತ್ತ್ವಿಕಸ್ವರೂಪವು ಜನ್ಮಾದಿವಿಕಾರಗಳಿಲ್ಲದ್ದು ಅವ್ಯಯವಾದದ್ದು; ಆತನು ಜನ್ಮಾದಿಗಳುಳ್ಳ ಭೂತಗಳಿಗೆಲ್ಲ ಒಡೆಯನಾಗಿರುವ **ಸರ್ವಸ್ವತಂತ್ರನು.** ಹೀಗಿದ್ದರೂ ಆತನು ತನ್ನ ಪ್ರಕೃತಿಯನ್ನು ವಶದಲ್ಲಿಟ್ಟು ಕೊಂಡು ಮಾಯೆಯಿಂದ ಹುಟ್ಟುವಂತೆಯೂ ದೇಹವುಳ್ಳವನಂತೆಯೂ ಆಗಾಗ್ಗೆ ತೋರಿಕೊಂಡು ಧರ್ಮವನ್ನು ಸ್ಥಾಪಿಸಿ ಸಾಧುಗಳನ್ನು ರಕ್ಷಿಸುತ್ತಿರುತ್ತಾನೆ (೪–೬, ೪–೮). ಭಗವಂತನ ಈ ಮಾಯಾಜನ್ಮವನ್ನು 'ಅವತಾರ'ವೆಂದು ಪುರಾಣಗಳಲ್ಲಿ ಕರೆದಿರುತ್ತದೆಯಾದರೂ 'ಅವತಾರ'ವೆಂಬ ಶಬ್ದವನ್ನು ಗೀತೆಯಲ್ಲಿ ಪ್ರಯೋಗಿಸಿ ರುವದಿಲ್ಲ. ಭಗವಂತನು ಲೋಕಾನುಗ್ರಹಕ್ಕಾಗಿ ತಾನೇ ಸ್ವೀಕರಿಸುವ ದಿವ್ಯಜನ್ಮ, ಅವನು ಮಾಡುವ ಜಗತ್ಸೃಷ್ಟಿ, ಚಾತುರ್ವರ್ಣ್ಯವಿಧಾನ (೪–೧೩) –

ಮುಂತಾದ ಲೋಕಾನುಗ್ರಹರೂಪವಾದ ದಿವ್ಯಕರ್ಮ (೪–೯) ಇವುಗಳ ಅಂಟು ಅವನಿಗೆ ಸ್ವಲ್ಪವೂ ಇರುವದಿಲ್ಲವೆಂದು ಯಾವನು ತಿಳಿಯುವನೋ ಅವನಿಗೆ – ''ನಾನು ಆ ಭಗವಂತನ ಸ್ವರೂಪದವನೇ ಆಗಿರುತ್ತೇನೆ. ಆತನಂತೆ ನನಗೆ ಕರ್ಮಫಲದ ಆಶೆಯಿಲ್ಲವಾದ್ದರಿಂದ ಕರ್ಮದ ಲೇಪವೂ ಇಲ್ಲ'' (೪–೧೪) ಎಂದು ನಿಶ್ಚಯಿಸಿಕೊಳ್ಳುವವನಿಗೆ – ಪುನರ್ಜನ್ಮವಿಲ್ಲ (೪–೯), ಕರ್ಮಬಂಧವೂ ಇರುವದಿಲ್ಲ (೪–೧೪) – ಎಂಬುದನ್ನು ತಿಳಿಸಿ ಕೊಡುವದಕ್ಕಾಗಿ ಭಗವಂತನ ಜನ್ಮಕರ್ಮಗಳನ್ನು ಹೀಗೆ ವರ್ಣಿಸಿರುತ್ತದೆ.

ಭಗವಂತನ ತಾತ್ತ್ವಿಕಸ್ಥಿತಿಗೆ ಪರಭಾವ (ಹೆಚ್ಚಿನ ಸ್ವರೂಪ)ವೆಂಬ ಹೆಸರನ್ನು ಗೀತೆಯಲ್ಲಿ ಇಟ್ಟಿರುತ್ತದೆ (೮–೨೦). ಈ ಪರಭಾವವು ಮೂರು ಗುಣಗಳನ್ನೂ ಮೀರಿರುತ್ತದೆ ; ಇದನ್ನು ತಿಳಿಯದೆ ಇರುವದಕ್ಕೆ ಗುಣತ್ರಯ ರೂಪವಾದ ಮಾಯೆಯಿಂದ ಮೋಹಿತರಾಗಿರುವದೇ ಕಾರಣವಾಗಿರುತ್ತದೆ (೭–೧೩, ೨೫). ಪರಭಾವರೂಪದಿಂದ ನಿತ್ಯಪ್ರಸಿದ್ಧನಾಗಿದ್ದರೂ ಬುದ್ಧಿಹೀನರು ಭಗವಂತನನ್ನು ಅವ್ಯಕ್ತನೆಂದೂ ಅವನು ದೇಹಧಾರಿಯಾದಂತೆ ಕಾಣುವಾಗ ವ್ಯಕ್ತನಾದನೆಂದೂ ತಪ್ಪಾಗಿ ಭಾವಿಸುತ್ತಾರೆ (೭–೨೪), ಮನುಷ್ಯದೇಹದಿಂದ ವ್ಯವಹರಿಸುತ್ತಿರುವಾಗ ಅವನನ್ನು ಕಡೆಗಣಿಸುವದಕ್ಕೂ ಈ ಪರಭಾವವನ್ನರಿಯದೆ ಇರುವದೇ ಕಾರಣ (೯–೧೧). ಈ ಪರಭಾವದ ನಿಜವನ್ನು ದೇವತೆಗಳು, ಋಷಿಗಳು – ಮುಂತಾದ ಪ್ರಭಾವವಂತರೂ ಅರಿತುಕೊಂಡಿರುವದಿಲ್ಲ ; ಏಕೆಂದರೆ ಅವರಿಗೂ ಭಗವಂತನೇ ಮೂಲಕಾರಣನಾಗಿರುತ್ತಾನೆ (೧೦–೨). ಯಾರು ದೇವತೆಗಳಿಗೂ ಆತ್ಮನಾಗಿರುವ ಭಗವಂತನೇ ಸರ್ವಯಜ್ಞಗಳಿಗೂ ಭೋಕ್ತೃವೂ ಒಡೆಯನೂ ಆಗಿರುತ್ತಾನೆ (೯–೨೪). ಅವನು ಅಜ್ಞಾನತತ್ಕಾರ್ಯಗಳನ್ನೂ ಮೀರಿರುವ ಸರ್ವಲೋಕಮಹೇಶ್ವರನು (೫–೨೯), ಸರ್ವಸಾಕ್ಷಿಯು (೫–೨೯) – ಎಂದು ತಿಳಿದುಕೊಂಡಿರುವರೋ ಅವರಿಗೆ ಮೋಕ್ಷರೂಪವಾದ ಶಾಂತಿಯು ದೊರಕುವದು (೫–೨೯).

## ಉಪಾಸನೆ, ಜ್ಞಾನ, ಭಕ್ತಿ

ಕೆಲವರು ಭಗವಂತನ ಭಾವನಾಸಂತಾನರೂಪವಾದ ಉಪಾಸನೆಯಿಂದಲೇ ಶರೀರತ್ಯಾಗವಾದ ಬಳಿಕ ಭಗವತ್ಪ್ರಾಪ್ತಿಯಾಗುವದೆಂದು ನಂಬಿರು

ತ್ತಾರೆ ; ಮತ್ತೆ ಕೆಲವರು ಭಗವಂತನು ಭಕ್ತರಿಗೆ ಮಾತ್ರವೇ ಲಭ್ಯನೆನ್ನುತ್ತಾರೆ ; ಇನ್ನು ಕೆಲವರು ಜ್ಞಾನದಿಂದಲ್ಲದೆ ಭಗವತ್ತತ್ತ್ವವು ಎಂದಿಗೂ ದೊರಕದು ಎನ್ನುತ್ತಾರೆ. ಈ ಮತಭೇದಗಳನ್ನೆಲ್ಲ ಸ್ಪಷ್ಟವಾಗಿ ಸಮರಸಮಾಡಿರುವದು ಗೀತೆಯೊಂದರಲ್ಲಿಯೇ.

ಉಪಾಸನೆ ಎಂಬುದು ಸತತವಾದ ಭಾವನೆಯ ರೂಪವಾಗಿರುತ್ತದೆ. ಉಪನಿಷತ್ತಿನಲ್ಲಿ ಅಕ್ಷರವೆಂಬ ಹೆಸರಿನಿಂದ (ಬೃ.೩–೮–೮, ಮುಂ.೧–೧–೫) ಕರೆದಿರುವ ನಿರ್ಗುಣನಿರಾಕಾರವಾದ ಬ್ರಹ್ಮವನ್ನು ಓಂಕಾರವೆಂಬ ಪ್ರತೀಕದ ಮೂಲಕವಾಗಿ ಉಪಾಸನೆಮಾಡುವ ಬಗೆಯನ್ನು ಗೀತೆಯ ಎಂಟನೆಯ ಅಧ್ಯಾಯದಲ್ಲಿ ವಿವರಿಸಿರುತ್ತದೆ. ಅದರಲ್ಲಿ ನಾಡೀಮಾರ್ಗವಾಗಿ ಮೂರ್ಧಪ್ರದೇಶದಿಂದ ಹೊರಟು ಅಗ್ನ್ಯಾದಿದೇವತೆಗಳ ಅನುಗ್ರಹದಿಂದ ಶುಕ್ಲಗತಿಯಿಂದ ಬ್ರಹ್ಮಲೋಕವನ್ನು ಮುಟ್ಟಿ ಮುಕ್ತನಾಗುವ ಪ್ರಕಾರವನ್ನು ತಿಳಿಸಿರು ತ್ತದೆ. ಭಕ್ತಿಯು ಧ್ಯಾನಯೋಗರೂಪವಾದ ನಿಧಿಧ್ಯಾಸನಕ್ಕೆ ಬೇಕೆಂಬುದನ್ನು ಆರನೆಯ ಅಧ್ಯಾಯದಲ್ಲಿ ಹೇಳಿರುವಂತೆ ಉಪಾಸನೆಗೂ ಬೇಕೆಂಬುದನ್ನು ಎಂಟನೆಯ ಅಧ್ಯಾಯದಲ್ಲಿ (೮–೧೪) ತಿಳಿಸಿದೆ. ಕ್ಷೇತ್ರಕ್ಷೇತ್ರಜ್ಞತತ್ತ್ವ, ಜ್ಞಾನಸಾಧನ–ಇವುಗಳನ್ನು ಅರಿತುಕೊಂಡು ಭಗವದ್ಭಾವವನ್ನು ಪಡೆದುಕೊಳ್ಳು ವದಕ್ಕೆ ಭಕ್ತಿಯೇ ಸಾಧನವೆಂಬುದನ್ನು ಹದಿಮೂರನೆಯ ಅಧ್ಯಾಯದಲ್ಲಿ (೧೩–೧೮) ತಿಳಿಸಿರುತ್ತದೆ. ಭಗವಚ್ಛರಣತೆಯೇ ಎಲ್ಲಾ ವಿಧದಲ್ಲಿಯೂ ಪರಮಪುರುಷಾರ್ಥಕ್ಕೆ ಕಾರಣವೆಂಬುದನ್ನರಿತು (೯–೩೪, ೧೧–೫೫, ೧೨–೮, ೧೨–೨೦, ೧೩–೧೦, ೧೮, ೧೪–೨೬) ಮತ್ತೆಮತ್ತೆ ಹೇಳಿರುವದಲ್ಲದೆ ಭಕ್ತಿಯೇ ಸಾಧನಗಳಲ್ಲೆಲ್ಲ 'ಸರ್ವಗುಹ್ಯತಮ'ವೆಂಬುದನ್ನು ಉಪಸಂಹಾರದಲ್ಲಿ (೧೮–೬೪) ಹೇಳಿರುವದು ಭಗವದ್ಗೀತೆಯ ವೈಶಿಷ್ಟ್ಯವಾಗಿರುತ್ತದೆ.

ಹೀಗೆ ಭಗವದ್ಭಕ್ತಿಯು ಜ್ಞಾನದಮೂಲಕ ಪರಮಪುರುಷಾರ್ಥಕ್ಕೆ ಸಾಧನವೆಂಬುದನ್ನು ಒತ್ತಿಹೇಳಿರುವದರ ಜೊತೆಗೆ ಜ್ಞಾನಭಕ್ತಿಗಳ ಸಾಮರಸ್ಯವನ್ನು ಮಾಡಿ ಹೇಳಿರುವದು ಭಗವದ್ಗೀತೆಯಲ್ಲಲ್ಲದೆ ಮತ್ತೆ ಯಾವ ಅಧ್ಯಾತ್ಮಗ್ರಂಥದಲ್ಲಿಯೂ ಇಷ್ಟು ಸ್ಫುಟವಾಗಿ ಕಾಣುವದಿಲ್ಲವೆಂದರೆ ಅತಿಶಯೋಕ್ತಿಯಾಗಲಾರದು. ದುಷ್ಕೃತಿಗಳಾದವರಿಗೆ ಭಗವದ್ಭಕ್ತಿಯು ದೊರಕದು ; ಸುಕೃತಿಗಳಾದವರಲ್ಲಿ ಆರ್ತ, ಜಿಜ್ಞಾಸು, ಅರ್ಥಾರ್ಥಿ, ಜ್ಞಾನಿ– ಎಂಬ ನಾಲ್ಕು ಬಗೆಯ ಭಕ್ತರು ಇರುತ್ತಾರೆ ; ಅವರಲ್ಲಿ ಜ್ಞಾನಿಯು ನಿತ್ಯವೂ ಭಗವಂತನಲ್ಲಿಯೇ ಸಮಾಹಿತಚಿತ್ತ

ನಾಗಿರುತ್ತಾನೆ ; ಅವನು ಏಕಭಕ್ತಿಯುಳ್ಳವನು, ಆತನು ಭಗವಂತನ ಆತ್ಮನೇ – ಎಂದೂ ಜ್ಞಾನಿ, ಭಕ್ತಶ್ರೇಷ್ಠ – ಇವರಲ್ಲಿ ಯಾವ ವೈಲಕ್ಷಣ್ಯವೂ ಇರುವದಿಲ್ಲ ವೆಂಬುದನ್ನೂ ಇಲ್ಲಿ ಸಾರಿಸಾರಿ ಹೇಳಿರುತ್ತದೆ.

## ಭಗವತ್ಪ್ರಸಾದ

ಯಾವ ಸಾಧನವೇ ಆಗಲಿ, ಭಗವಂತನ ಸಂಬಂಧವಿಲ್ಲದೆ ವೀರ್ಯವತ್ತರವಾದ ಫಲವನ್ನು ಕೊಡಲಾರದು – ಎಂದು ಹೇಳಿರುವದು ಭಗವದ್ಗೀತೆಯ ಮತ್ತೊಂದು ವಿಶಿಷ್ಟೋಪದೇಶವು.

**ಯತಃ ಪ್ರವೃತ್ತಿರ್ಭೂತಾನಾಂ ಯೇನ ಸರ್ವಮಿದಂ ತತಮ್ ।**
**ಸ್ವಕರ್ಮಣಾ ತಮಭ್ಯರ್ಚ್ಯ ಸಿದ್ಧಿಂ ವಿನ್ದತಿ ಮಾನವಃ ॥** ಗೀ. ೧೮–೪೬

ಭಗವಂತನ ಅನುಗ್ರಹದಿಂದಲೇ ಎಲ್ಲಾ ಪ್ರಾಣಿಗಳ ಉತ್ಪತ್ತಿಯೂ ಸರ್ವ ವ್ಯಾಪಾರಗಳೂ ನಡೆಯುತ್ತಿರುವವು ; ಆತನೇ ಈ ಜಗತ್ತೆಲ್ಲವನ್ನೂ ವ್ಯಾಪಿಸಿ ಕೊಂಡಿರುವನು. ತಮ್ಮತಮ್ಮ ಕರ್ಮವನ್ನೇ ಆತನ ಅರ್ಚನೆ – ಎಂದು ಭಾವಿಸಿ ನಡೆಯುತ್ತಿರುವವರಿಗೆ ಕರ್ಮಯೋಗದ ಸಿದ್ಧಿಯಾಗುವದು.

**ಮಯ್ಯಾಸಕ್ತಮನಾಃ ಪಾರ್ಥ ಯೋಗಂ ಯುಞ್ಜನ್ಮದಾಶ್ರಯಃ ।**
**ಅಸಂಶಯಂ ಸಮಗ್ರಂ ಮಾಂ ಯಥಾ ಜ್ಞಾಸ್ಯಸಿ ತಚ್ಛೃಣು ॥** ೭–೧

ಭಗವಂತನಲ್ಲಿ ಮನಸ್ಸನ್ನು ಅಂಟಿಸಿಕೊಂಡು, ಭಗವಂತನ ಆಶ್ರಯದಿಂದಲೇ ಯೋಗವನ್ನು ಮಾಡುತ್ತಿರುವವನಿಗೆ ಭಗವಂತನ ಯಾಥಾತ್ಮ್ಯದ ಜ್ಞಾನವಾಗುವದು ; ಎಂದರೆ ಭಗವಂತನ ಪ್ರಸಾದದಿಂದಲೇ ಧ್ಯಾನಯೋಗದ ಫಲವಾದ ಸಮ್ಯಗ್ಜ್ಞಾನದ ಸಿದ್ಧಿಯಾಗುವದು.

**ಮಚ್ಚಿತ್ತಃ ಸರ್ವದುರ್ಗಾಣಿ ಮತ್ಪ್ರಸಾದಾತ್ ತರಿಷ್ಯಸಿ ॥** ೧೮–೫೮

ಭಗವಂತನಲ್ಲಿಯೇ ಸರ್ವಾತ್ಮಭಾವವನ್ನೂ ಸಮರ್ಪಿಸಿಕೊಂಡಿದ್ದರೆ ಸರ್ವ ಸಂಸಾರದ ಹೇತುಗಳನ್ನೂ ಭಗವಂತನ ಪ್ರಸಾದದಿಂದಲೇ ದಾಟುವನು.

**ತೇಷಾಂ ಸತತಯುಕ್ತಾನಾಂ ಭಜತಾಂ ಪ್ರೀತಿಪೂರ್ವಕಮ್ ।**
**ದದಾಮಿ ಬುದ್ಧಿಯೋಗಂ ತಂ ಯೇನ ಮಾಮುಪಯಾನ್ತಿ ತೇ ॥**

**ತೇಷಮೇವಾನುಕಮ್ಪಾರ್ಥಮಹಮಜ್ಞಾನಜಂ ತಮಃ ।**
**ನಾಶಯಾಮ್ಯಾತ್ಮಭಾವಸ್ಥೋ ಜ್ಞಾನದೀಪೇನ ಭಾಸ್ವತಾ॥** ೧೦–೧೦,೧೧

ಯಾರು ಭಗವಂತನಲ್ಲಿಯೇ ಸತತವಾಗಿ ಚಿತ್ತಸಮಾಧಾನವನ್ನು ಮಾಡಿಕೊಂಡು ಆತನನ್ನೇ ಭಜಿಸುತ್ತಿರುವವರೋ ಅವರಿಗೆ ಭಗವತ್ತತ್ತ್ವದ ಬುದ್ಧಿಯು ದೊರಕುವದು. ಅವರ ಹೃದಯದಲ್ಲಿಯೇ ಕುಳಿತು ಭಗವಂತನು ಅವಿವೇಕದಿಂದಾಗಿರುವ ಮಿಥ್ಯಾಪ್ರತ್ಯಯರೂಪವಾದ ಕಗ್ಗತ್ತಲೆಯನ್ನು ಚದುರಿಸುವ ಜ್ಞಾನದೀಪವನ್ನು ಅನುಗ್ರಹಿಸುವನು.

**ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ ।**
**ಅಹಂ ತ್ವಾ ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾ ಶುಚಃ॥** ೧೮–೬೬

ಸರ್ವಕರ್ಮಗಳನ್ನೂ ಸಂನ್ಯಾಸಮಾಡಿ ಭಗವಂತನಲ್ಲಿಯೇ ನೆಲೆನಿಂತಿರುವ ಶರಣರಿಗೆ ಸಂಸಾರದಿಂದ ಅತ್ಯಂತವಾಗಿ ಬಿಡುಗಡೆಮಾಡಿ ಶೋಕಮೋಹಗಳನ್ನು ಕಳೆಯುವದೂ ಭಗವತ್ಪ್ರಸಾದವೇ.

## ಜ್ಞಾನನಿಷ್ಠೆ

ಭಗವದ್ಗೀತೆಯ ಉಪದೇಶಗಳಲ್ಲಿ ಜ್ಞಾನನಿಷ್ಠೆಗೆ ಎಲ್ಲಕ್ಕಿಂತಲೂ ಹೆಚ್ಚಿನ ಸ್ಥಾನವಿದೆ. ಏಕೆಂದರೆ ಭಕ್ತಿಜ್ಞಾನಗಳ ಸಾಮರಸ್ಯವು ಈ ಜ್ಞಾನನಿಷ್ಠೆಯ ನಿಜವನ್ನು ಅನುಭವಕ್ಕೆ ತಂದುಕೊಂಡವರಿಗೆ ಮನದಲ್ಲಿ ಮಿಂಚಿರುವದು. ವೇದಾಂತದಲ್ಲಿ ಹೇಳಿರುವ ಆತ್ಮತತ್ತ್ವವು ಅವ್ಯಕ್ತವು, ಇಂದ್ರಿಯಗಳಿಗೆ ಗೋಚರವಾಗುವದಲ್ಲ; ಅಚಿಂತ್ಯವು ; ಮನಸ್ಸಿನ ಯಾವ ಪ್ರತ್ಯಯಗಳಿಂದಲೂ ಗ್ರಹಿಸತಕ್ಕದ್ದಲ್ಲ. ಎಲ್ಲವನ್ನೂ ತನ್ನ ಚಿತ್ಪ್ರಕಾಶದಿಂದಲೇ ಬೆಳಗುತ್ತಾ, ಎಲ್ಲದರ ವ್ಯಾಪಾರಕ್ಕೂ ತನ್ನ ಸಾನ್ನಿಧ್ಯಮಾತ್ರದಿಂದಲೇ ಹೇತುವಾಗಿರುವ ಈ ತತ್ತ್ವವು ಸ್ವಪ್ರಕಾಶವಾದ ಕೂಟಸ್ಥವಿಜ್ಞಾನರೂಪವಾಗಿರುತ್ತದೆ. ಇದನ್ನು ವಿಷಯವಾಗಿ ಅರಿಯುವದಕ್ಕೆ ಆಗಲಾರದಾದರೂ ಅರಿವಿನ ತಿರುಳೇ ಇದಾಗಿರುತ್ತದೆ. ಬಹಿರ್ಮುಖರಾದವರಿಗೆ ಇದರಲ್ಲಿಯೇ ನೆಲೆನಿಲ್ಲುವದೆಂಬ ಜ್ಞಾನನಿಷ್ಠೆಯ ವಾರ್ತೆಯ ಸುಳಿವೂ ಸಿಕ್ಕದೆ ಇರುತ್ತದೆ. ಇದನ್ನು ಹೇಗೆ ಸಂಪಾದಿಸಿಕೊಳ್ಳಬೇಕೆಂಬುದನ್ನು ಗೀತೆಯ ಈ ಶ್ಲೋಕಗಳು ತಿಳಿಸುವವು :

**ಬುದ್ಧ್ಯಾ ವಿಶುದ್ಧಯಾ ಯುಕ್ತೋ ಧೃತ್ಯಾತ್ಮಾನಂ ನಿಯಮ್ಯ ಚ ।**
**ಶಬ್ದಾದೀನ್ ವಿಷಯಾಂಸ್ತ್ಯಕ್ತ್ವಾ ರಾಗದ್ವೇಷೌ ವ್ಯುದಸ್ಯ ಚ ॥**

**ವಿವಿಕ್ತಸೇವೀ ಲಘ್ವಾಶೀ ಯತವಾಕ್ಕಾಯಮಾನಸಃ ।**
**ಧ್ಯಾನಯೋಗಪರೋ ನಿತ್ಯಂ ವೈರಾಗ್ಯಂ ಸಮುಪಾಶ್ರಿತಃ ॥**

**ಅಹಙ್ಕಾರಂ ಬಲಂ ದರ್ಪಂ ಕಾಮಂ ಕ್ರೋಧಂ ಪರಿಗ್ರಹಮ್ ।**
**ವಿಮುಚ್ಯ ನಿರ್ಮಮಃ ಶಾನ್ತೋ ಬ್ರಹ್ಮಭೂಯಾಯ ಕಲ್ಪತೇ ॥**

೧೮–೫೧ ರಿಂದ ೫೩

ಮಾಯಾರಹಿತವಾಗಿ ಅತ್ಯಂತಪರಿಶುದ್ಧವಾಗಿರುವ ಬುದ್ಧಿಯಿಂದ ಕಾರ್ಯಕರಣಸಂಘಾತವನ್ನು ಹಿಡಿತದಲ್ಲಿಟ್ಟುಕೊಂಡು ಬಾಹ್ಯವಿಷಯಾಸಕ್ತಿಯನ್ನು ಸಂಪೂರ್ಣವಾಗಿ ಬಿಟ್ಟು, ಅನಿವಾರ್ಯವಾದ ವಿಷಯಭೋಗದಲ್ಲಿ ರಾಗದ್ವೇಷಗಳಿಲ್ಲದೆ, ಏಕಾಂತದಲ್ಲಿ ಮಿತಾಹಾರನಾಗಿ ತ್ರಿಕರಣಸಂಯಮದಿಂದ ವೈರಾಗ್ಯದಿಂದ ನಿತ್ಯವೂ ಧ್ಯಾನಯೋಗಪರನಾಗಿ ಅಹಂಕಾರಬಲದರ್ಪಕಾಮಕ್ರೋಧಪರಿಗ್ರಹಗಳನ್ನು ತ್ಯಜಿಸಿರುವಾತನೇ ಬ್ರಹ್ಮಭಾವವನ್ನು ಪಡೆಯುವನು, ಅವನೇ ಜ್ಞಾನನಿಷ್ಠನು.

## ಜ್ಞಾನನಿಷ್ಠೆಯ ಫಲ

**ಬ್ರಹ್ಮಭೂತಃ ಪ್ರಸನ್ನಾತ್ಮಾ ನ ಶೋಚತಿ ನ ಕಾಙ್ಕ್ಷತಿ ।**
**ಸಮಃ ಸರ್ವೇಷು ಭೂತೇಷು ಮದ್ಭಕ್ತಿಂ ಲಭತೇ ಪರಾಮ್ ॥** ೧೮–೫೪

**ಭಕ್ತ್ಯಾ ಮಾಮಭಿಜಾನಾತಿ ಯಾವಾನ್ ಯಶ್ಚಾಸ್ಮಿ ತತ್ತ್ವತಃ ।**
**ತತೋ ಮಾಂ ತತ್ತ್ವತೋ ಜ್ಞಾತ್ವಾ ವಿಶತೇ ತದನನ್ತರಮ್ ॥** ೧೮–೫೫

ಬ್ರಹ್ಮಭಾವವನ್ನು ಹೊಂದಿದ ಜ್ಞಾನನಿಷ್ಠನಿಗೆ ಶೋಕವಿರುವದಿಲ್ಲ, ಏತರ ಆಶೆಯೂ ಇರುವದಿಲ್ಲ; ಎಲ್ಲರ ಸುಖದುಃಖಗಳನ್ನೂ ತನ್ನಂತೆಯೇ ಎಂದು ನಿಶ್ಚಯಿಸಿರುವನು, ಜ್ಞಾನಲಕ್ಷಣವಾದ ಪರಭಕ್ತಿಯನ್ನು ಹೊಂದಿರುವನು. ಭಕ್ತಿಯಿಂದ ಭಗವಂತನಾದ ನನ್ನ ಮಹಿಮೆಯ ವಿಸ್ತಾರವನ್ನೂ ತತ್ತ್ವವನ್ನೂ ಅರಿತು ಜ್ಞಾನಸಮಕಾಲದಲ್ಲಿಯೇ ನನ್ನನ್ನು ಪ್ರವೇಶಿಸುವನು.

ಆರನೆಯ ಬಾರಿಗೆ ಮುದ್ರಣವನ್ನು ಕಂಡಿದೆಯೆಂದರೆ ಅದರ ಮಹತ್ವವನ್ನು ವಾಚಕರೆ ಊಹಿಸಿಕೊಳ್ಳಬಹುದು. **(ಆರನೆಯ ಮುದ್ರಣ : 1997, ಪು. ಡೆಮ್ಮಿ 40 + 1168)**

**೪. ಭಗವದ್ಗೀತೆಯ ಉಪನ್ಯಾಸಗಳು** ಶ್ರೀಶ್ರೀಸಚ್ಚಿದಾನಂದೇಂದ್ರ ಸರಸ್ವತಿ ಸ್ವಾಮಿಗಳವರು ಹೊಳೆನರಸೀಪುರದ ಕಾರ್ಯಾಲಯದಲ್ಲಿ 9.6.1946 ರಿಂದ 17.12.1950 ವರೆಗೆ ಪ್ರತಿಭಾನುವಾರವೂ ಉಪನ್ಯಾಸಗಳನ್ನು ಮಾಡುತಾ ಬಂದು ಅವುಗಳನ್ನು ಸಂಸ್ಕರಿಸಿ ಪುಸ್ತಕರೂಪದಲ್ಲಿ 1953ರಲ್ಲಿ ಮೊದಲನೆಯ ಬಾರಿಗೆ ಪ್ರಕಟಿಸಿರುವ ಗ್ರಂಥ. ಒಟ್ಟು 200 ಉಪನ್ಯಾಸಗಳನ್ನು ಮಾಡಿದ ತಾರೀಖು ಮತ್ತು ಸಂಬಂಧಪಟ್ಟ ಶ್ಲೋಕಗಳನ್ನು ಸೂಚಿಸಿ ಒಂದೊಂದು ತಲೆಬರಹವನ್ನು ಹಾಕಿರುತ್ತದೆ. ಭಗವದ್ಗೀತೆಯ 700 ಶ್ಲೋಕಗಳನ್ನೂ ಅದರ ಅರ್ಥವನ್ನೂ ಕ್ರಮವಾಗಿ ಅಳವಡಿಸಲಾಗಿದೆ. ಉಪನ್ಯಾಸಗಳು ಭಾಷ್ಯದ ಅರ್ಥವನ್ನು ವಿಶದಗೊಳಿಸುವದಲ್ಲದೆ **ಗೀತೆಯಹೃದಯವನ್ನು** ಮನಗಂಡು ಅಧ್ಯಾತ್ಮಪಥದಲ್ಲಿ ನಡೆಯಬೇಕೆಂಬ ಮುಮುಕ್ಷುಗಳಿಗೆ ಒಂದು ಸುಗಮವಾದ ಮಾರ್ಗವನ್ನು ತಿಳಿಸುವದು. ಇದನು ದಿದವರೆಲ್ಲರೂ ಕೊಂಡಾಡಿರುತ್ತಾರೆ. 1953ರಲ್ಲಿ ಮೊದಲನೆಯ ಮುದ್ರಣದಲ್ಲಿ ಏಳು ಸಂಪುಟಗಳಲ್ಲಿ ಹೊರತಂದಿತ್ತು. ಎರಡನೆ (1987ರಲ್ಲಿ) ಮತ್ತು ಮೂರನೆಯ (1999) ಮುದ್ರಣಗಳಲ್ಲಿ ಎರಡು ಸಂಪುಟಗಳಲ್ಲಿ ಅಳವಡಿಸಿದೆ. ಮೊದಲನೆಯ ಂಪುಟದಲ್ಲಿ 1 ರಿಂದ 12 ಅಧ್ಯಾಯಗಳು ಎರಡನೆಯ ಸಂಪುಟದಲ್ಲಿ 13ರಿಂದ 18ನೆಯ ಅಧ್ಯಾಯ ಪೂರಾ ಒಳಗೊಂಡಿದೆ. ಸಾಮಾನ್ಯ ಜನರಿಗೂ ಅರ್ಥವಾಗುವ ಗ್ರಂಥ. **(ಮೂರನೆಯ ಮುದ್ರಣ 1999, ಸಂಪುಟ 1, 2, ಪು. ಒಟ್ಟು 1192.)**

**೫. ಗೀತಾಶಾಸ್ತ್ರಾರ್ಥವಿವೇಕ :** ಶ್ರೀಶ್ರೀಸಚ್ಚಿದಾನಂದೇಂದ್ರ ಸರಸ್ವತೀ ಸ್ವಾಮಿಗಳವರು ಭಗವದ್ಗೀತೆಯಲ್ಲಿ ಪ್ರತಿಪಾದಿಸಿರುವ **ಸಾಂಖ್ಯ-ಯೋಗ** ಎಂಬ ಎರಡು ಭಗವತ್ಪ್ರಾಪ್ತಿಯ ಹಾಗೂ ಗೀತೆಯಲ್ಲಿ ಪ್ರತಿಪಾದಿಸಿರುವ **ವಾಸುದೇವತತ್ತ್ವವನ್ನು** **ಗೀತಾಶಾಸ್ತ್ರಾರ್ಥವಿವೇಕ** ಎಂಬ ಸಂಸ್ಕೃತ ಗ್ರಂಥದಲ್ಲಿ ಅಳವಡಿಸಿ ಕಾರ್ಯಾಲಯದ ಮೂಲಕ 1965ರಲ್ಲಿ ಪ್ರಕಟಿಸಿದ್ದರು. ಈ ಸಂಸ್ಕೃತ ಗ್ರಂಥದಿಂದ ಕೆಲವು ಪ್ರಮುಖ ವಿಷಯ ಗಳನ್ನು ಆರಿಸಿಕೊಂಡು ಈಗ ಗ್ರಂಥರೂಪವಾಗಿ ಹೊರತರಲಾಗಿದೆ. ಜಿಜ್ಞಾಸುಗಳಿಗೆ ಉತ್ತಮವಾದ ಪುಸ್ತಕ. **(ಮೊದಲನೆಯ ಮುದ್ರಣ : 2000 : ಪು. ಕ್ರೌ. 4 + 46)**

**ಹೆಚ್ಚಿನ ವಿವರಗಳಿಗೆ ಕೆಳಕಂಡ ವಿಳಾಸಗಳಲ್ಲಿ ಸಂಪರ್ಕಿಸಿ :**

**ಅ.ಪ್ರ.ಕಾ., 68, 6ನೇ ಮೇನ್**
**2ನೇ ಬ್ಲಾಕ್, ಟಿ.ಆರ್.ನಗರ, ಬೆಂ.-28**
**ದೂ. :080-6765548**

**ಅ.ಪ್ರ.ಕಾ., ಹೊಳೆನರಸೀಪುರ**
**ಹಾಸನಜಿಲ್ಲೆ- 573 211**
**ದೂ. : 08175-73820**